ಸಂಚಿಕೆ
೦೯
ಮಾರ್ಚ್, ೨೦೧೭

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



Karnataka Cultural Organization – Brindavana (KCOB) 501(C)(3), NJ

Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ಈ ಸಂಚಿಕೆಯಲ್ಲಿ....


| | | | |
|---|---|---|---|
| ಸಂಪಾದಕೀಯ | ಪು ೧ | ನಾನು ಓದಿದ ಪುಸ್ತಕ | ಪು ೦೯-೧೦ |
| ಅಭಿಮಾನಿ ತಂಡದ ನುಡಿ | ಪು ೨ | ನಾವು ನೋಡಿದ ಸಿನಿಮಾ | ಪು ೧೧ |
| ವ್ಯಕ್ತಿ-ಪರಿಚಯ | ಪು ೩-೪ | ಕಥಾ ಸಮಯ | ಪು ೧೨-೧೫ |
| ಪ್ರೇಮಿಗಳ ದಿನಾಚರಣೆ | ಪು ೫-೬ | ಓ ನನ್ನ ಚೇತನ | ಪು ೧೬-೧೭ |
| ಮಹಿಳ ದಿನಾಚರಣೆ | ಪು ೭-೮ | ಕಾಮನ ಹಬ್ಬ | ಪು ೧೮ |
| ಹೀನ್ನೋಟ | ಪು ೨೦ | (ವಿ)ಚಿತ್ರ | ಪು ೧೯ |
| ಹೀಗೋಂದು ಪ್ರಶ್ನೆ | ಪು ೨೦ | ಓದುಗರ ಓಲೆಗಳು | ಪು ೨೧ |


**ಸಂಪಾದಕ ಮಂಡಳಿ**


ಸತ್ಯ ಪ್ರಸಾದ್
ಪ್ರಧಾನ ಸಂಪಾದಕರು


ರಾಘವೇಂದ್ರ ಕುಂದಲಗುರ್ಕಿ
ಸಂಪಾದಕರು


ಕಾವ್ಯಾ ಕಡಮೆ ನಾಗರಕಟ್ಟೆ
ಸಂಪಾದಕ ವರ್ಗ


ಭಾಸ್ಕರ ತೈಲಗೇರಿ
ಸಂಪಾದಕ ವರ್ಗ


ಅನಿಲ್ ಭಾರದ್ವಜ
ಸಂಪಾದಕ ವರ್ಗ


ಪ್ರಶಾಂತ ಎಂ.
ಸಂಪಾದಕ ವರ್ಗ


ಅಮೂಲ್ಯ ಕಟ್ಟೀಮನಿ
ಸಂಪಾದಕ ವರ್ಗ

## ಪ್ರಧಾನ ಸಂಪಾದಕರಿಂದ......

**ಬೃಂದಾವನದ ಸಮಸ್ತ ಬಳಗಕ್ಕೆ, ಯುಗಾದಿ ಹಬ್ಬದ ಶುಭಾಶಯಗಳು !!!**

**ಯು**ಗಾದಿ ಎಂದೊಡನೆ ವಸಂತ, ಮಾವು, ಚಿಗುರು, ಕೋಗಿಲೆ, ಸಂಗೀತ ಇತ್ಯಾದಿ ಕವಿವಾಣಿಗಳು ನೆನಪಿಗೆ ಬರುತ್ತವೆ. ಪಟ್ಟಣವಾಸಿಗಳ ಪಾಲಿಗೆ ಇದು ಮತ್ತೊಂದು ಹಬ್ಬ. ತೋರಣ, ಹೋಳಿಗೆ, ನೆಂಟರು, ಹರಟೆ ಇತ್ಯಾದಿ.. ಇವೆಲ್ಲ ಬೆಲ್ಲದ ಮಾತಾಯಿತು.

ಆದರೆ ಗ್ರಾಮೀಣ ಭಾಗದ ರೈತಾಪಿಗಳಿಗೆ ವರುಷದ ಜೂಜು ಪ್ರಾರಂಭ ವಾಗುವ ದಿನ. ಯಾವುದೇ ಭರವಸೆಯಿಲ್ಲದೆ ಕೇವಲ ನಿಸರ್ಗವನ್ನು ನಂಬಿ, ನಿಚ್ಚಳವಾದ ಆಕಾಶವನ್ನು ನೋಡುತ್ತಾ ಭೂಮಿಯಲ್ಲಿ ದುಡ್ಡು ಚೆಲ್ಲಲು ಪ್ರಾರಂಭಿಸುವ ದಿನ, ಅವನ ವರುಷದ ನಿರೀಕ್ಷೆಯೊಂದೇ ಮಳೆ ಮಳೆ ಮಳೆ.... ವರುಣ ಮುನಿದರೆ ಅವನ ವರುಷದ ಶ್ರಮವೆಲ್ಲ ವ್ಯರ್ಥ. ಭೂತಾಯಿ ಅವನ ಕೈಹಿಡಿದರೂ ಮುಂದೆ ದಲ್ಲಾಳಿಗಳ ಕಾಟ ಮಾರುಕಟ್ಟೆಯಲ್ಲಿ ದರ ಕುಸಿತ. ಎಂಥಹ ವಿಪರ್ಯಾಸ! ಪ್ರಪಂಚದಲ್ಲಿ ಒಂದು ಸಣ್ಣ ಸೂಜಿಯನ್ನು ತಯಾರಿಸುವವನೂ ಮಾರುಕಟ್ಟೆಯಲ್ಲಿ ಅವನ ವಸ್ತುವಿನ ದರವನ್ನು ನಿರ್ಧರಿಸುತ್ತಾನೆ ಆದರೆ ಈ ಬೆಳೆಗಾರ ಎಂಥಹ ದುರ್ದೈವಿ, ಇವನ ವರುಷದ ಶ್ರಮದ ಬೆಲೆಯನ್ನು ದಲ್ಲಾಳಿ ನಿರ್ಧರಿಸುತ್ತಾನೆ. ಇದು ಬೇವಿನ ವಿಷಯ.

ಪ್ರತಿ ಹಂತದಲ್ಲಿಯೂ ಶೋಷಣೆಗೆ ಒಳಗಾಗುವ ಅನ್ನದಾತನಿಗೆ ಈ ಸಂವತ್ಸರ ನಿಜಕ್ಕೂ ಬೆಲ್ಲದ ಮಳೆಯಾಗಲಿ ಜೊತೆಗೆ ನಿಮ್ಮೆಲ್ಲರಿಗೂ ಹರುಷ ತರಲಿ ಎಂದು ಬೃಂದಾವನ ವಾಣಿ ತಂಡ ಹಾರೈಸುತ್ತದೆ.

ನನ್ನ ಪ್ರೀತಿಯ ಗೆಳೆಯ ಶ್ರೀವತ್ಸ ಜೋಶಿಯವರು ನಮ್ಮ ಮನವಿಗೆ ಸ್ಪಂದಿಸಿ ಸಂದರ್ಶನ ಕೊಟ್ಟಿರುತ್ತಾರೆ, ಅವರಿಗೆ ನಮ್ಮ ಅನಂತ ವಂದನೆಗಳು.

ಇಡೀ ತಂಡ ಪ್ರೀತಿಯಿಂದ ಯುಗಾದಿಯ ಸಂಚಿಕೆಯನ್ನು ಹೊರತಂದಿದೆ. ಅವರಿಗೆ ನನ್ನ ಹೃದಯಪೂರ್ವಕ ನಮನಗಳು.

ಕೊನೆಯದಾಗಿ ಓದುಗ ಪ್ರಭುಗಳು, ಎಂದಿನಂತಹ ನಿಮ್ಮ ಪ್ರೀತಿ, ಸಹಕಾರಕ್ಕೆ ಇಡೀ ಬೃಂದಾವನ ತಂಡವು ಎಂದಿಗೂ ಚಿರಋಣಿ.

ಮತ್ತೊಮ್ಮೆ ಎಲ್ಲರಿಗೂ ಯುಗಾದಿ ಹಬ್ಬದ ಶುಭಾಶಯಗಳು !!!

ಪ್ರೀತಿಯಿಂದ
**ಸತ್ಯ**

*ನೆನಪಿಡಿ : ದ್ವೈ-ಮಾಸಿಕ ಬೃಂದಾವನ ವಾಣಿಯು ಪ್ರತಿ ಎರಡು ತಿಂಗಳಗೊಮ್ಮೆ೧೫ ನೇ ತಾರೀಕಿನಂದು ಬಿಡುಗಡೆಯಾಗುತ್ತದೆ.*

## ಸಂಪಾದಕರಿಂದ......

ಪ್ರೀತಿಯ ಓದುಗರಿಗೆ ನಮಸ್ಕಾರಗಳು,

ಭಾರತ ರತ್ನ ಎಪಿಜೆ ಅಬ್ದುಲ್ ಕಲಾಂ ಅವರ ೨೦೨೦ ಕನಸನ್ನು ನನಸು ಮಾಡಲೋ ಎಂಬಂತೆ ಭಾರತದ ಉತ್ತರಪ್ರದೇಶ, ಉತ್ತರಾಂಚಲ್ ಹಾಗು ಹಲವಾರು ರಾಜ್ಯದ ಚುನಾವಣಾ ಫಲಿತಾಂಶ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಕೈ ಬಲಪಡಿಸಿದೆ ಎಂದರೆ ತಪ್ಪಾಗಲಾರದು. ಈ ರಾಜ್ಯಗಳ ಫಲಿತಾಂಶ ಮುಂಬರುವ ರಾಜ್ಯ ಚುನಾವಣೆಗೂ ಹಾಗು ೨೦೧೯ ರ ಲೋಕಸಭಾ ಚುನಾವಣೆಗೂ ಮುನ್ನುಡಿ ಬರೆದಂತಿದೆ. ಶ್ರೀ ಮೋದಿ ಅವರ "ಅನಾಣ್ಯೀಕರಣ" ದೇಶದ ಎಲ್ಲ ರಾಜಕೀಯ ಪಂಡಿತರ ಲೆಕ್ಕವನ್ನು ತಲೆ ಕೆಳಗು ಮಾಡಿ ಸಾರ್ವಜನಿಕರಿಂದ ಪ್ರಶಂಸೆಗೊಂಡಿದೆ ಎಂದು ಅರ್ಥೈಸಬಹುದು. ಪಂಜಾಬ್ ರಾಜ್ಯದಲ್ಲಿ ಬಹುಮತ ಪಡೆದಿರುವ ಕಾಂಗ್ರೆಸ್ ಇದೇ ರಾಜಕೀಯ ದಾಳವನ್ನು ಬೇರೆಕಡೆ ಅಳವಡಿಸುವ ಸಾಧ್ಯತೆ ತೆಗೆದು ಹಾಕುವಂತಿಲ್ಲ.

ದ್ವೈತ ಸಿದ್ಧಾಂತದ ಪ್ರತಿಪಾದ್ಯರಾದ ಜಗದ್ಗುರು ಶ್ರೀ ಮಧ್ವಾಚಾರ್ಯರ ಸಪ್ತ ಶತಮಾನೋತ್ಸವ ಫೆಬ್ರವರಿ ೯ ರಂದು ನಡೆಯಿತು . ಕರ್ನಾಟಕದ ದಾರ್ಶನಿಕರು, ಉಡುಪಿಯ ಶ್ರೀ ಕೃಷ್ಣನ ಪ್ರತಿಷ್ಠಾಪಕರು , ಉಡುಪಿಯಿಂದ ಬದರಿಕಾಶ್ರಮಕ್ಕೆ ತೆರಳಿ ೭೦೦ ವರ್ಷ ತುಂಬಿದ ಸಂದರ್ಭದಲ್ಲಿ ಅವರ ಧಾರ್ಮಿಕ ಚಿಂತನೆಗಳು ಹಾಗು ಕೊಡುಗೆಗಳು ಸ್ತುತ್ಯಾರ್ಹ.

ಅಮೆರಿಕಾದ್ಯಂತ ಭಾರತದವರ ಮೇಲೆ ಹಲ್ಲೆಗಳ ವರದಿ ಜನರಿಗೆ ಒಂದು ರೀತಿಯ ಆತಂಕ ಉಂಟು ಮಾಡಿದೆ. ಇದು ಕೆಲವೇ ಘಟನೆಗಳಾದರು ಇದರ ಪರಿಣಾಮ ಬಹಳವಾಗಿದೆ. ಕ್ಯಾನ್ಸಸ್ ನಲ್ಲಿ ಶ್ರೀನಿವಾಸ್ ಕುಚಿಬೊಟ್ಲಾ ಅವರ ಅಮಾನುಷ ಹತ್ಯೆಯನ್ನು ಖಂಡಿಸಿ ಬೃಂದಾವನ ವಾಣಿ ಕನ್ನಡಿಗರ ಪರವಾಗಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

ಈ ಸಂಚಿಕೆಯಲ್ಲಿ ಯುಗಾದಿ ವಿಶೇಷಗಳು, ಪ್ರೇಮಿಗಳ ಆಚರಣೆಯ ದಿನದ ಕವಿತೆ, ಕಥೆ, ವಿಶ್ವ ಮಹಿಳಾ ದಿನಾಚರಣೆಯ ವಿಶೇಷ ಲೇಖನ .ಇನ್ನು ಅನೇಕ ಕಥೆ, ಅಂಕಣಗಳಿವೆ. ಎಲ್ಲವನ್ನೂ ಮರೆಯದೆ ಓದಿ ನಿಮ್ಮ ಅಭಿಪ್ರಾಯವನ್ನು ತಿಳಿಸಿ.

ಮತ್ತೊಮ್ಮೆ ಮುಂದಿನ ಸಂಚಿಕೆಯಲ್ಲಿ ಸಿಗೋಣ ...

**ರಾಘವೇಂದ್ರ ಕುಂದಲಗುರ್ಕಿ**

ಮುಖಪುಟ ಚಿತ್ರ:
ಬಿಷ್ಟಪ್ಪಯ್ಯ ಗೋಪುರ ಮತ್ತು ವಿರೂಪಾಕ್ಷ ದೇಗುಲ, ಹಂಪೆ
ಕೃಪೆ : ಶಿವಶಂಕರ್ ಬಣಗಾರ

ಸಂಪಾದಕೀಯ ಪುಟ ಚಿತ್ರ:
ಬೇವು-ಬೆಲ್ಲ
ಕೃಪೆ: ಅಂತರ್ಜಾಲ

ಪತ್ರಿಕೆ ವಿನ್ಯಾಸ:
ಪ್ರಶಾಂತ ಎಂ.
ರಾಘವೇಂದ್ರ ಕುಂದಲಗುರ್ಕಿ


Copyright © KCO – Brindavana

ಸಂಚಿಕೆ
೦೯
ಮಾರ್ಚ್, ೨೦೧೭





# ಅಭಿಮಾನಿ ತಂಡದ ನುಡಿ

**ಡಾ. ಅಶೋಕ್ ಕಟ್ಟಿಮನಿ**

**ಹೊ**ಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ..

ಆತ್ಮೀಯ ನ್ಯೂ ಜರ್ಸಿ ಕನ್ನಡ ಸ್ನೇಹಿತರೆ,

ಮುಂಬರುವ ಹೊಸ ವರುಷದ ಯುಗಾದಿ ಹಬ್ಬಕ್ಕೆ ತಮಗೆಲ್ಲ ಹಾರ್ದಿಕ ಶುಭಾಶಯಗಳು. ಈ ಸಲದ ಯುಗಾದಿ, ಸುಖ ಸಂತೋಷಗಳೊಂದಿಗೆ ನಿಮ್ಮ ಎಲ್ಲ ಆಶೋತ್ತರಗಳನ್ನು ಈಡೇರಿಸಲಿ ಎಂದು ಪ್ರೀತಿಯಿಂದ ಹಾರೈಸುತ್ತೇವೆ.

ತಮಗೆಲ್ಲ ತಿಳಿದಿರುವಂತೆ ಬೃಂದಾವನ ಅಭಿಮಾನಿ ತಂಡ, ಏಪ್ರಿಲ್ ೮ ರಂದು ವಸಂತೋತ್ಸವ ಕಾರ್ಯಕ್ರಮವನ್ನು ಹೈಸ್ಟೋನ್ ಸ್ಕೂಲ್ ನಲ್ಲಿ ಏರ್ಪಡಿಸಿದೆ. ಕನ್ನಡಿಗರೆಲ್ಲರಿಗೆ ಅತ್ಯಂತ ಸಂತೋಷ ಕೊಡುವ ಈ ಯುಗಾದಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲು ಎಲ್ಲ ಸಿದ್ಧತೆ ಮಾಡಿಕೊಳ್ಳುತ್ತಿದೆ. ನ್ಯೂ ಜರ್ಸಿ ಕನ್ನಡಿಗರೆಲ್ಲ ಒಂದಾಗಿ ಈ ಯುಗಾದಿ ಹಬ್ಬದ ಒಂದು ಸುಂದರ ಅನುಭವ ಪಡೆಯಲಿ ಎಂಬುದೇ ನಮ್ಮಾಸೆ. ಈ ಕಾರ್ಯಕ್ರಮದಲ್ಲಿ ನಮ್ಮೆಲ್ಲರ ನೆಚ್ಚಿನ ನವರಸ ನಾಯಕ ನಟ ಶ್ರೀ ಜಗ್ಗೇಶ್ ತಮ್ಮನ್ನು ರಂಜಿಸಲಿದ್ದಾರೆ. ಅವರೊಂದಿಗೆ ಕರ್ನಾಟಕ ಕೋಗಿಲೆ ಎಂದು ಹೆಸರಾಗಿರುವ ಕನ್ನಡತಿ ಶ್ರೀಮತಿ ಬಿ. ಆರ್ ಛಾಯ ತಮ್ಮ ಸುಮಧುರವಾದ ಕಂಠ ದಿಂದ ಕನ್ನಡ ಹಾಡುಗಳಿಂದ ನಮ್ಮ ಮನಸೂರೆಗೊಳ್ಳಲಿದ್ದಾರೆ. ಇವರೊಂದಿಗೆ ಬೃಂದಾವನ ಮತ್ತು ನ್ಯೂ ಜರ್ಸಿಯ ಹಲವಾರು ಕನ್ನಡ ಸಂಸ್ಥೆಗಳ ಸದಸ್ಯರ ಸುಂದರ ಸಾಂಸ್ಕೃತಿಕ ಕಾರ್ಯಕ್ರಮಗಳಿವೆ. ಈ ಯುಗಾದಿ ಹಬ್ಬ, ತಮಗೊಂದು ವಿಶೇಷ ಅನುಭವವಾಗಲೆಂದು ಬೇವು ಬೆಲ್ಲ, ಕಾಫೀ, ಸ್ನಾಕ್ಸ್, ಮತ್ತು ವಿಶೇಷ ಹಬ್ಬದೂಟದ ವ್ಯವಸ್ಥೆಯಿದೆ. ಇದರೊಂದಿಗೆ ನಮ್ಮ ಬೃಂದಾವನದ ಮಕ್ಕಳಿಗಾಗಿ ಹೊಸ ವರ್ಷದ ಕೇಕ್ ತರಲಿದ್ದೇವೆ. ನಮ್ಮೆಲ್ಲರ ಈ ವಸಂತೋತ್ಸವಕ್ಕೆ ಈಗಾಗಲೇ ನೊಂದಾಯಿಸದಿದ್ದಲ್ಲಿ ದಯವಿಟ್ಟು ನೊಂದಾಯಿಸಿಕೊಳ್ಳಿ. ನಾವೆಲ್ಲ ಸೇರಿ ಈ ಸಲದ ವಸಂತೋತ್ಸವ ಹಬ್ಬವನ್ನು ಒಂದು ಸುಂದರ ಅನುಭವವಾಗಿಸೋಣ...

ಬೃಂದಾವನ ಕನ್ನಡ ಶಾಲೆ ಅತ್ಯಂತ ಯಶಸ್ವಿಯಾಗಿ ನೆಡೆಯುತ್ತಿದೆ ಎಂದು ತಿಳಿಸಲು ಸಂತಸವೆನಿಸುತ್ತಿದೆ. ನಮ್ಮ ಕನ್ನಡ ಶಿಕ್ಷಕರೆಲ್ಲ ಮಾರ್ಚ್ ಮೊದಲವಾರ ಸೌತ್ ಬ್ರುನ್ಸ್ವಿಕ್ ಶಾಲೆಯಲ್ಲಿ ಒಂದಾಗಿ ಸೇರಿ ನಮ್ಮ ಅನುಭವಗಳನ್ನು ಹಂಚಿಕೊಂಡೆವು. ಸದ್ಯದಲ್ಲಿಯೇ ಕುಮಾನ್ ಮಾದರಿಯ ಹೊಸ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಲಿದ್ದೇವೆ. ನಮ್ಮ ಮಕ್ಕಳಿಗೆಲ್ಲ ಕನ್ನಡ ಕಲಿಸುವದರಲ್ಲಿ ಬೃಂದಾವನ ಹೊಸ ಮಜಲನ್ನು ಮುಟ್ಟಲಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಈ ಸಲದ ಯುಗಾದಿ ಹಬ್ಬದಲ್ಲಿ ನಮ್ಮ ಕನ್ನಡ ಮಕ್ಕಳ ಕಾರ್ಯಕ್ರಮ ನೋಡಿ ನೀವು ಸಂತಸ ಪಡಲಿದ್ದೀರಿ.

ಅಭಿಮಾನಿ ತಂಡ ತನ್ನ ಈ ವರ್ಷದ ಮುಂದಿನ ಕಾರ್ಯಕ್ರಮಗಳಿಗೆ ಎಲ್ಲ ಸಿದ್ಧತೆ ಮಾಡಿಕೊಳ್ಳುತ್ತಿದೆ. ಎಲ್ಲ ವಿವರಗಳನ್ನು ನಿಮ್ಮೊಂದಿಗೆ ಸದ್ಯದಲ್ಲಿಯೇ ಹಂಚಿಕೊಳ್ಳುತ್ತೇವೆ.

ಬೃಂದಾವನ ವಾಣಿಯ ಈ ಸುಂದರ ಸಂಚಿಕೆಯನ್ನು ನಮ್ಮ ಸಂಪಾದಕ ತಂಡ ಅತ್ಯಂತ ಆಸ್ಥೆಯಿಂದ ನಿಮ್ಮ ಮುಂದಿಡುತ್ತಿದೆ. ಒಪ್ಪಿಸಿಕೊಳ್ಳಿ. ಹಲವಾರು ಹೊಸ ಲೇಖಕರು, ಲೇಖನಗಳನ್ನು ಬರೆದಿದ್ದಾರೆ. ಅವರಿಗೆಲ್ಲ ನಮ್ಮ ಹಾರ್ದಿಕ ಅಭಿನಂದನೆಗಳು.

ನಿಮ್ಮನ್ನೆಲ್ಲ ಬೃಂದಾವನದ ವಸಂತೋತ್ಸವದಲ್ಲಿ ಆದರದಿಂದ ಇದಿರು ನೋಡುತ್ತಿರುತ್ತೇವೆ..

ಪ್ರೀತಿ ಪೂರ್ವಕವಾಗಿ
**ಡಾ. ಅಶೋಕ್ ಕಟ್ಟಿಮನಿ**
ಅಧ್ಯಕ್ಷರು ಬೃಂದಾವನ ಕನ್ನಡ ಕೂಟ, ನ್ಯೂ ಜರ್ಸಿ.

## ಯು ಗಾ ದಿ ಹ ಬ್ಬ ದ ಶು ಭಾ ಶ ಯ ಗ ಳು






ಕೃಪೆ: ದೀಪ್ತಿ ಗಡ್


Copyright © KCO – Brindavana

ಸಂಚಿಕೆ
೦೯
ಮಾರ್ಚ್, ೨೦೧೭






## ಶ್ರೀವತ್ಸ ಜೋಶಿ

ಸಂದರ್ಶಕರು



ಕಾವ್ಯಾ ಕಡಮೆ ನಾಗರಕಟ್ಟೆ



**ಪರಿಚಯ:** ಶ್ರೀವತ್ಸ ಜೋಶಿಯವರು ನಮ್ಮ ನಡುವಿರುವ ಹೆಮ್ಮೆಯ ಅಮೆರಿಕನ್ನಡಿಗ. ಮೂಲತಃ ಉಡುಪಿಯ ಕಾರ್ಕಳದವರಾದ ಇವರು ದಾವಣಗೆರೆಯಲ್ಲಿ ಇಂಜಿನೀರಿಂಗ್ ಪದವಿ ಪಡೆದವರು. ನಂತರ ಹೊಸದಿಲ್ಲಿ, ಸಿಕಂದರಾಬಾದ್, ಬೆಂಗಳೂರುಗಳಲ್ಲಿ ಉದ್ಯೋಗ ನಿರ್ವಹಿಸಿ ಕಳೆದ ಹದಿನೇಳು ವರ್ಷಗಳಿಂದ ವಾಷಿಂಗ್ಟನ್ ಡಿಸಿ ಮೆಟ್ರೋ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತ ವರ್ಜಿನಿಯಾ ರಾಜ್ಯದಲ್ಲಿ ನೆಲೆನಿಂತವರು. ಪತ್ನಿ ಸಹನಾ, ಮಗ ಸೃಜನ್ ರೊಂದಿಗಿನ ಸುಖಿ ಕುಟುಂಬದ ಶ್ರೀವತ್ಸರದ್ದು ಸಂಗೀತ- ಸಾಹಿತ್ಯಗಳೆಂದರೆ ಅರಳುವ ಮನಸ್ಸು. ಸ್ಥಳೀಯ ಕಾವೇರಿ ಕನ್ನಡ ಸಂಘ,ಅಮೆರಿಕದಲ್ಲಿ ಸಾಹಿತ್ಯಕ್ಕೆಂದೇ ಮೀಸಲಾಗಿರುವ ಕನ್ನಡ ಸಾಹಿತ್ಯ ರಂಗಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವ ಇವರು ಮೇಲ್ನೋಟಕ್ಕೆ ಯಾರಿಗೂ ಕಾಣದ ಜಗತ್ತಿನ ಸಂಗತಿಗಳ ಬಗ್ಗೆ ತೀರ ಸೂಕ್ಷ್ಮವಾಗಿ, ಕುತೂಹಲ ಹುಟ್ಟಿಸುವಂತೆ ಬರೆಯಬಲ್ಲವರಾಗಿದ್ದಾರೆ. ತರಂಗ, ವಿಜಯವಾಣಿ, ವಿಜಯ ಕರ್ನಾಟಕ, ವಿಶ್ವವಾಣಿ ಪತ್ರಿಕೆಗಳಲ್ಲಿ ಇವರ ನೂರಾರು ಲೇಖನಗಳು ಪ್ರಕಟವಾಗಿ ಕನ್ನಡ ನಾಡಿನ ಓದುಗರ ಮನ ಗೆದ್ದಿವೆ. ಸದ್ಯ ಇವರು ವಿಶ್ವವಾಣಿ ಪತ್ರಿಕೆಯಲ್ಲಿ 'ತಿಳಿರುತೋರಣ' ಅಂಕಣ ಬರಹದಲ್ಲಿ ನಿರತರು. ಕನ್ನಡದಲ್ಲಿ ಹತ್ತಕ್ಕಿಂತ ಹೆಚ್ಚು ಪುಸ್ತಕಗಳನ್ನು ಹೊರತಂದಿರುವ ಶ್ರೀವತ್ಸ ಜೋಶಿಯವರು ಈ ಬಾರಿ ನಮ್ಮ ಪತ್ರಿಕೆಯ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ.

***೧. ಬಾಲ್ಯದಲ್ಲಿ 'ಯುಗಾದಿ ಹಬ್ಬ'ದ ನಿಮ್ಮ ಅನುಭವಗಳನ್ನು ನಮ್ಮೊಡನೆ ದಯವಿಟ್ಟು ಹಂಚಿಕೊಳ್ಳಿ.***

ನನ್ನ ಚಿಕ್ಕಂದಿನಲ್ಲಿ ಹಬ್ಬಗಳಾವುವೂ ಇಷ್ಟೊಂದು ವಾಣಿಜ್ಯಮಯ (ಕಮರ್ಷಿಯಲ್) ಆಗಿರಲಿಲ್ಲ. ಫೇಸ್‌ಬುಕ್‌ನಲ್ಲಿ ಒಣ ಆಡಂಬರದ ಕಾಲ ಅದಾಗಿರಲಿಲ್ಲ. ಪ್ರದರ್ಶನದ ಕ್ರೇಜ್ ಇರಲಿಲ್ಲ. ಹಾಗಾಗಿ ಮನೆಮಂದಿಯೆಲ್ಲ ಸೇರಿ ನಿಜವಾದ ಆತ್ಮೀಯ ವಾತಾವರಣದಲ್ಲಿ ಹಬ್ಬಗಳ ಆಚರಣೆ ಆಗುತ್ತಿತ್ತು. ಯುಗಾದಿಯಾದರೂ ಅಷ್ಟೇ, ಹೆಚ್ಚೂಕಡಿಮೆ ಆಗಷ್ಟೇ ಶಾಲೆಯಲ್ಲಿ ವಾರ್ಷಿಕ ಪರೀಕ್ಷೆಗಳು ಮುಗಿದು 'ಬೇಸಿಗೆ ರಜೆ' ಆರಂಭವಾಗಿರುತ್ತಿತ್ತು. ನಾನು ದಕ್ಷಿಣಕನ್ನಡದ ಕಾರ್ಕಳ ತಾಲೂಕಿನ ಹಳ್ಳಿಯಲ್ಲಿ ಹುಟ್ಟಿ ಬೆಳೆದವನಾದ್ದರಿಂದ ಅಲ್ಲಿ ಯುಗಾದಿ ಹಬ್ಬದ ಆಸುಪಾಸಿನಲ್ಲಿ ಮಾವು, ಗೇರು, ಹಲಸು ಮುಂತಾದ ಹಣ್ಣುಗಳ ಸೀಸನ್ ಶುರುವಾಗಿರುತ್ತಿತ್ತು. ಎಳೆಯ (ಇನ್ನೂ ಬಲಿತಿಲ್ಲದ) ಗೇರುಬೀಜಗಳ ಪಲ್ಯ ಯುಗಾದಿ ಹಬ್ಬದ ಅಡುಗೆಯ ಒಂದು ಆಕರ್ಷಕ ಐಟಂ. ಉಳಿದಂತೆ ಪಾಯಸ ಚಿತ್ರಾನ್ನ ಹೋಳಿಗೆ ಮುಂತಾದುವೆಲ್ಲ ಇದ್ದದ್ದೇ. ಜತೆಗೆ ಬೇವುಬೆಲ್ಲ ಕೂಡ. ಕುಲವಧು ಚಿತ್ರದ 'ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ' ಚಿತ್ರಗೀತೆ ಮಂಗಳೂರು ಆಕಾಶವಾಣಿಯ ಚಿತ್ರಗೀತೆ ಕಾರ್ಯಕ್ರಮದಲ್ಲಿ ಮೊಳಗಿಯೇ ಮೊಳಗುತ್ತಿತ್ತು. ಸಂಜೆಯ ಹೊತ್ತು ನಮ್ಮ ಊರಿನ ಪರಶುರಾಮ ದೇವಸ್ಥಾನದಲ್ಲಿ ಪಂಚಾಂಗ ಪಠಣ/ಶ್ರವಣ, ವಸಂತ ಪೂಜೆ, ಭಜನೆ, ಪ್ರಸಾದ ವಿತರಣೆ ಎಲ್ಲ ಇರುತ್ತಿತ್ತು (ಆ ಪದ್ಧತಿ ಈಗಲೂ ಇದೆ). ಒಟ್ಟಿನಲ್ಲಿ ಹಳ್ಳಿಯ ಶುಭ್ರ ಸ್ವಚ್ಛ ಪರಿಸರದಲ್ಲಿ ನಾವು ಹೊಸ ಸಂವತ್ಸರವನ್ನು ಸ್ವಾಗತಿಸುತ್ತಿದ್ದೆವು.

***೨. ನಿಮ್ಮದು ಇಂಜಿನಿಯರಿಂಗ್ ಹಿನ್ನಲೆ. ಆದರೂ ಸಾಹಿತ್ಯದ ಒಲವು ಹೇಗೆ ಒಲಿಯಿತು?***

ನಿಮ್ಮ ಪ್ರಶ್ನೆಯಲ್ಲಿ 'ಸಾಹಿತ್ಯ' ಪದವನ್ನು ಕಥೆ-ಕವನ-ಕಾದಂಬರಿ ರೂಪದ ಸೃಜನಶೀಲ ಸಾಹಿತ್ಯ (ಕ್ರಿಯೇಟಿವ್ ರೈಟಿಂಗ್) ಎಂಬರ್ಥದಲ್ಲಿ ಬಳಸಿದ್ದೀರಾದರೆ ಒಂದು ಚಿಕ್ಕ ಸ್ಪಷ್ಟೀಕರಣ ನೀಡಬಯಸುವೆ. ಏನೆಂದರೆ ನನ್ನ ಓದು ಮತ್ತು ಬರವಣಿಗೆ ಅಂತಹ ಸೃಜನಶೀಲ ಸಾಹಿತ್ಯ ಎಂದು ನಾನು ಅಂದುಕೊಳ್ಳುವುದಿಲ್ಲ. ನನ್ನದೇನಿದ್ದರೂ ಜರ್ನಲಿಸ್ಟಿಕ್ ರೀತಿಯ ಬರವಣಿಗೆ ಮತ್ತು ಓದು. ಸ್ವಾರಸ್ಯವೇನೆಂದರೆ ಒಂದು ರೀತಿಯಲ್ಲಿ ನನ್ನ ಎಂಜಿನಿಯರಿಂಗ್ ಹಿನ್ನೆಲೆಯೇ ಅದಕ್ಕೆ ಪರೋಕ್ಷ ಕಾರಣ ಎಂದರೂ ತಪ್ಪಾಗಲಾರದು! ಹೇಗೆಂದು ವಿವರಿಸುತ್ತೇನೆ:ನಾನು ಎಂಜಿನಿಯರಿಂಗ್ ಓದಿದ್ದು ದಾವಣಗೆರೆಯ ಬಿ.ಡಿ.ಟಿ ಕಾಲೇಜಿನಲ್ಲಿ, ಎಂಬತ್ತರ ದಶಕದ ಉತ್ತರಾರ್ಧದಲ್ಲಿ.ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗ ಆಗಷ್ಟೇ ಶುರುವಾದದ್ದು. ವಿಭಾಗಕ್ಕೆ ಮುಖ್ಯಸ್ಥರಾಗಲಿ ಉಪನ್ಯಾಸಕರಾಗಲಿ ಯಾರೂ ಇರಲಿಲ್ಲ. ಪ್ರಯೋಗಾಲಯ ಸೌಲಭ್ಯವೂ ಅಷ್ಟಕ್ಕಷ್ಟೇ. ಬೇರೆ ವಿಭಾಗಗಳ ಅಥವಾ ಬೇರೆ ಕಾಲೇಜಿನ ಪ್ರಾಧ್ಯಾಪಕರು ಆಗೊಮ್ಮೆ ಈಗೊಮ್ಮೆ ಬಂದು ಪಾಠ ಮಾಡುವ ವ್ಯವಸ್ಥೆ. ವಿದ್ಯಾರ್ಥಿಗಳದು ಹೆಚ್ಚೂಕಡಿಮೆ ಏಕಲವ್ಯನ ಪರಿಸ್ಥಿತಿ. ಅದಕ್ಕೆ ನಾನು ಕಂಡುಕೊಂಡ ಉಪಾಯವೆಂದರೆ ಸೆಮಿಸ್ಟರ್ ಆರಂಭದಿಂದಲೇ ಆಯಾಯ ಸಬ್ಜೆಕ್ಟ್‌ನ ಸಿಲೆಬಸ್ ಏನಿದೆ, ಯಾವ ಪಠ್ಯಪುಸ್ತಕಗಳನ್ನು ಶಿಫಾರಸು ಮಾಡಿದ್ದಾರೆ, ಹಿಂದಿನ ಪ್ರಶ್ನೆಪತ್ರಿಕೆಗಳ ಸ್ವರೂಪ ಹೇಗಿದೆ ಅಂತೆಲ್ಲ ಅಧ್ಯಯನ ನಡೆಸಿ ನನ್ನದೇ ನೋಟ್ಸ್ ತಯಾರಿಸುವುದು. ಅದೂ ಹೇಗೆ, ಒಂದೆರಡು ಸೆಮಿಸ್ಟರ್‌ಗಳಲ್ಲಿ ಒಂದೆರಡು ಸಬ್ಜೆಕ್ಟ್‌ಗಳಿಗಲ್ಲ, ಮೂರರಿಂದ ಎಂಟನೇ ಸೆಮಿಸ್ಟರ್‌ವರೆಗೂ ಅದೇ ಪದ್ಧತಿ. ಮೊದಮೊದಲಿಗೆ ನನಗೋಸ್ಕರವಷ್ಟೇ ಸಿದ್ಧಪಡಿಸಿಕೊಳ್ಳುತ್ತಿದ್ದ ಆ ನೋಟ್ಸ್, ಕ್ರಮೇಣ ಸಹಪಾಠಿಗಳಿಗೂ ಸರಳವಾಗಿದೆಯೆಂದು ತೋರಿತು. ಅವರೆಲ್ಲರೂ ಪಠ್ಯಪುಸ್ತಕಗಳಿಗಿಂತ ನನ್ನ ನೋಟ್ಸನ್ನೇ ಫೋಟೊಕಾಪಿ ಮಾಡಿ ಓದತೊಡಗಿದರು. ಅನಿವಾರ್ಯ ಪರಿಸ್ಥಿತಿಯಲ್ಲಿ ಅಲಂಗಿಸಿಕೊಂಡ ಆ ನೋಟ್ಸ್ ಕಲೆ ನನಗೆ ಚೆನ್ನಾಗಿ ಕರಗತವಾಯಿತು. ಯಾವುದೇ ವಿಷಯವಿರಲಿ,ಅದರ ಬಗ್ಗೆ ಸುಲಭಗ್ರಾಹ್ಯವಾಗುವಂಥ ಕಿರು ಟಿಪ್ಪಣಿಗಳನ್ನು ಮಾಡಿಟ್ಟುಕೊಳ್ಳುವುದು, ಇನ್ನೊಬ್ಬರಿಗೆ ಅರ್ಥವಾಗುವಂತೆ ಆ ವಿಷಯವನ್ನು ಪ್ರಸ್ತುತಪಡಿಸುವುದು ಕರತಲಾಮಲಕವಾಗಿಹೋಯ್ತು. ಎಂಜಿನಿಯರಿಂಗ್ ಶಿಕ್ಷಣ ಮುಗಿದು ಸುಮಾರು ಹತ್ತು ವರ್ಷಗಳ ನಂತರ ನಾನು ಅಮೆರಿಕ ದೇಶಕ್ಕೆ ಬಂದಾಗ ಮೊದಲು ಮಾಡಿದ ಕೆಲಸವೆಂದರೆ ಇಲ್ಲಿ ಗಮನಿಸಿದ ಹೊಸಹೊಸ ಸಂಗತಿಗಳ ಬಗ್ಗೆ ಟಿಪ್ಪಣಿಗಳನ್ನು ತಯಾರಿಸಿ, ಪೂರಕ ಮಾಹಿತಿ ಸಂಗ್ರಹಿಸಿ, Let us know US ಎಂಬ ವೆಬ್ ಜರ್ನಲ್ ತಯಾರಿಸಿದ್ದು. ಅದಕ್ಕೆ ನೆರವಾದದ್ದೂ ನನ್ನ ಎಂಜಿನಿಯರಿಂಗ್ ಶಿಕ್ಷಣದ ನೋಟ್ಸ್ ಕಲೆಯೇ.Let us know US ವೆಬ್ ಜರ್ನಲ್ ಅಂತರಜಾಲದಲ್ಲಿ ಒಬ್ಬ ಅಮೆರಿಕನ್ ಶಿಕ್ಷಕಿಯ ಕಣ್ಣಿಗೆ ಬಿದ್ದು ಆಕೆ ಅದನ್ನು ಮೆಚ್ಚಿ 'ನನ್ನ ವಿದ್ಯಾರ್ಥಿಗಳಿಗೆ ಮಾಹಿತಿಸಂಗ್ರಹಣೆಯ ಪ್ರಾಜೆಕ್ಟ್‌ಗೆ ಇದನ್ನು ಮಾದರಿಯಾಗಿ ಕೊಡುತ್ತಿದ್ದೇನೆ' ಎಂದು ಇಮೇಲ್ ಬರೆದಿದ್ದನ್ನು ಓದಿ ನನಗಾದ ಸಂತಸ ಅಷ್ಟಿಷ್ಟಲ್ಲ.ಆಮೇಲೆ ನಾನು ದಟ್ಸ್‌ಕನ್ನಡ ಡಾಟ್ ಕಾಮ್ ಅಂತರಜಾಲ ಪತ್ರಿಕೆಯಲ್ಲಿ ಬರೆದ 'ವಿಚಿತ್ರಾನ್ನ' ಅಂಕಣದಲ್ಲೂ, ಅದಾದಮೇಲೆ ಐದು ವರ್ಷಗಳ ಕಾಲ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಬರೆದ 'ಪರಾಗಸ್ಪರ್ಶ' ಅಂಕಣದಲ್ಲೂ, ಈಗ ವಿಶ್ವವಾಣಿ ಪತ್ರಿಕೆಯಲ್ಲಿ ಬರೆಯುತ್ತಿರುವ 'ತಿಳಿರುತೋರಣ' ಅಂಕಣದಲ್ಲೂ ಈ ನೋಟ್ಸ್ ಕಲೆಯ ಬಲದಿಂದಲೇ ರಸಪಾಕ ಸಿದ್ಧವಾದದ್ದು/ಆಗುತ್ತಿರುವುದು.

(ಮುಂದಿನ ಪುಟಕ್ಕೆ...)


Copyright © KCO – Brindavana




..ಹಿಂದಿನ ಪುಟದಿಂದ

***೩.ಕನ್ನಡದಲ್ಲಿ ಲೇಖನ ಬರವಣಿಗೆಗೆ ನೀವು ಹೊಸದೇ ಆದ 'ಟಚ್' ಕೊಟ್ಟವರು. ಬಿಡುವಿಲ್ಲದ ದಿನಚರಿಯಲ್ಲೂ ಪ್ರತಿವಾರದ ಅಂಕಣಕ್ಕೆ ಬೇಕಾಗುವ ವಸ್ತು-ವಿಸ್ತಾರವನ್ನು ಹೇಗೆ ಆಯುತ್ತೀರಿ?***

'ಇಟ್ಸ್ ಸಮ್‌ಥಿಂಗ್ ಡಿಫರೆಂಟ್!' ಎನ್ನುವ ರೀತಿಯಲ್ಲಿ ನನ್ನ ಆಲೋಚನೆಗಳು, ಅದರ ಪ್ರತಿಫಲವಾಗಿ ನನ್ನ ಬರವಣಿಗೆ ಇರುವುದು ನಿಜ. ಏನನ್ನು ಮಾಡಿದರೂ ಅಲ್ಲಿ ಒಂದು ಅಸ್ಮಿತೆ (ಐಡೆಂಟಿಟಿ) ಇರಬೇಕು, ಐಡೆಂಟಿಟಿ ಅಂದಮೇಲೆ ಅದು ಅನನ್ಯವಾಗಿ ಇರಬೇಕು ಎಂದು ಬಯಸುವವನು ನಾನು. ಹಾಗಾಗಿ ಬರವಣಿಗೆಯಲ್ಲೂ ಹೊಸ ಟಚ್ ಎಂದು ಅನಿಸುವುದಿರಬಹುದು. ಆದರೆ ಆ ಟಚ್ ಎಲ್ಲರಿಗೂ ಒಂದೇರೀತಿ ಇಷ್ಟವಾಗುತ್ತದೆ ಎಂದೇನಿಲ್ಲ. ಅಕ್ಷರಗಳೊಂದಿಗೆ ಆಟ, ಅದಕ್ಕಾಗಿ ಅಷ್ಟಿಷ್ಟು ಪ್ರಮಾಣದಲ್ಲಿ ಭಾಷೆಗಳ ಕಲಬೆರಕೆ ಮುಂತಾದವೆಲ್ಲ ಕೆಲವರಿಗೆ ಕಿರಿಕಿರಿ ಎನಿಸಲೂಬಹುದು. ಆದರೆ ನನ್ನ ಉದ್ದೇಶ ಸಣ್ಣಸಣ್ಣ ಸಂಗತಿಗಳಲ್ಲಿನ ಸ್ವಾರಸ್ಯವನ್ನು ಹೊರಗೆಡಹುವುದು, ಅದು ಆನಂದದಾಯಕ ಎಂದು ಪ್ರತಿಪಾದಿಸುವುದು ಅಷ್ಟೇ. ವಿಭಿನ್ನ ದೃಷ್ಟಿಕೋನದಿಂದ ವಸ್ತು/ವಿಷಯ/ವ್ಯಕ್ತಿತ್ವಗಳನ್ನು ನೋಡುವುದು ನನಗೆ ಅಂಕಣಕ್ಕೆ ಬೇಕಾಗುವ ವಸ್ತು-ವಿಸ್ತಾರವನ್ನು ಒದಗಿಸುತ್ತದೆ ಎಂದು ನಾನು ನಂಬಿಕೊಂಡಿದ್ದೇನೆ. ಬರೀ ನಂಬಿಕೆಯಲ್ಲ ಅದು ನನ್ನ ಅನುಭವ. ಮತ್ತೆ, ನನ್ನ ಅಂಕಣ ಹೇಗೂ ಒಂದು ನಿರ್ದಿಷ್ಟ ವಿಷಯದ್ದಲ್ಲವಾದ್ದರಿಂದ (ಅಂದರೆ ರಾಜಕೀಯ/ ಪ್ರಸಕ್ತ ವಿದ್ಯಮಾನಗಳ ವಿಶ್ಲೇಷಣೆ, ವಿಜ್ಞಾನ ವಿಶೇಷ, ಕ್ರೀಡೆ, ಸಿನೆಮಾ ಅಥವಾ ಅಂತಹ ನಿರ್ದಿಷ್ಟ ಚೌಕಟ್ಟು ನನಗಿಲ್ಲ) ಅಮೀಬಾದಂತೆ ಅದು ಯಾವುದೇ ಆಕಾರ-ರೂಪ ತಾಳಬಹುದಾದ್ದರಿಂದ ವಿಪುಲವಾದ ಆಯ್ಕೆಗಳು. 'ಯು ಮೇಡ್ ಮೈ ಡೇ' ಎನ್ನುವ ಹಿತಾನುಭವ ಓದುಗರಿಗೆ ಆಗಬೇಕು ಎಂಬುದು ನನ್ನ ಬರವಣಿಗೆಯ ಮುಖ್ಯ ಉದ್ದೇಶ. ಅದಕ್ಕೆ ಪೂರಕವಾಗುವಂತೆ ವಿವಿಧ ಕಚ್ಚಾ ಸಾಮಗ್ರಿಗಳನ್ನು ಒಟ್ಟು ಸೇರಿಸಿ ಪಾಕ ಸಿದ್ಧಪಡಿಸುತ್ತೇನೆ. ಒಂಥರದಲ್ಲಿ ಫ್ರೂಟ್ ಸಲಾಡ್ ಅಥವಾ ಮಿಕ್ಸೆಡ್ ವೆಜಿಟೆಬಲ್ ಕರ್ರಿ ಇದ್ದ ಹಾಗೆ. ಇನ್ನು 'ಬಿಡುವಿಲ್ಲದ ದಿನಚರಿ' ಎಂಬಂಥ ಕ್ಲೀಷೆಯ ಪದಪುಂಜಗಳು ನನಗಿಷ್ಟವಿಲ್ಲ. ನನ್ನ ಮಟ್ಟಿಗೆ ಅಂಕಣ ಬರವಣಿಗೆಯ ತಯಾರಿಯೂ ದಿನಚರಿಯ ಒಂದು ಭಾಗವೇ. ಆದರೆ ಅದಕ್ಕೋಸ್ಕರ ಪ್ರತ್ಯೇಕವಾಗಿ ಧ್ಯಾನಕ್ಕೆ ಕುಳಿತಂತೆ ನಾನು ಕುಳಿತುಕೊಳ್ಳುವುದಿಲ್ಲ, ಬೇರೆ ಕೆಲಸಗಳನ್ನು ಮಾಡುತ್ತಿರುವಾಗಲೇ (ಬಟ್ಟೆಗಳಿಗೆ ಇಸ್ತ್ರಿ ಹಾಕುವುದಿರಲಿ, ಡಿಪಾರ್ಟ್‌ಮೆಂಟಲ್ ಸ್ಟೋರ್‌ನಲ್ಲಿ ಚೆಕ್‌ಔಟ್ ಕ್ಯೂನಲ್ಲಿ ನಿಂತಾಗ ಇರಲಿ) ಪ್ಯಾರಲಲ್ ಪ್ರೊಸೆಸಿಂಗ್ ರೀತಿಯಲ್ಲಿ ನಾನು ಬರವಣಿಗೆಯ ಚಿಂತನೆಯನ್ನೂ ಮಾಡುತ್ತಿರುತ್ತೇನೆ. ಮನಸ್ಸಿನಲ್ಲೇ ಲೇಖನದ ಬಿಲ್ಡಿಂಗ್ ಬ್ಲಾಕ್‌ಗಳನ್ನು ತಯಾರಿಸುತ್ತಿರುತ್ತೇನೆ. ಆಮೇಲೆ ಒಂದರ್ಧ ಗಂಟೆ ಬಿಡುವು ಮಾಡಿಕೊಂಡು ಅದನ್ನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿದರಾಯ್ತು. ನೆನಪಿರಲಿ, ಕಳೆದ ಹತ್ತು-ಹದಿನೈದು ವರ್ಷಗಳಲ್ಲಿ ಒಂದೇಒಂದು ಬರೆಹಕ್ಕೂ ನಾನು ಕಾಗದ-ಪೆನ್ನು ಬಳಸಿದ್ದಿಲ್ಲ. ನೇರವಾಗಿ ತಲೆಯಿಂದ ಕಂಪ್ಯೂಟರ್‌ಗೆ ವರ್ಗಾವಣೆ.

***೪. ತರಂಗ, ವಿಜಯ ಕರ್ನಾಟಕ, ವಿಜಯವಾಣಿ, ವಿಶ್ವವಾಣಿ ಪತ್ರಿಕೆಗಳಲ್ಲಿ ನಿಮ್ಮ ಅಪರೂಪದ ಲೇಖನಗಳನ್ನು ಓದಿ ಮೆಚ್ಚಿರುವ ಸಹೃದಯರು ನಿಮ್ಮಿಂದ ಕತೆ-ಕವಿತೆ-ಕಾದಂಬರಿ-ನಾಟಕಗಳನ್ನು ನಿರೀಕ್ಷಿಸುತ್ತಿದ್ದಾರಲ್ಲ. ಅವರಿಗೆ ನಿಮ್ಮ ಉತ್ತರ?***

ನೀವು ಕತೆ-ಕಾದಂಬರಿಗಳನ್ನೂ ಬರೆಯಬಲ್ಲಿರಿ, ಏಕೆ ಪ್ರಯತ್ನಿಸಬಾರದು?' ಎಂದು ನನಗೆ ಬೇರೆಯವರೂ ಈಹಿಂದೆ, ಅಥವಾ ಈಗಲೂ, ಕೆಲವೊಮ್ಮೆ ಹೇಳಿದ್ದಿದೆ. ನನ್ನಲ್ಲಿ ಅದೇನು ಪೊಟೆನ್ಷಲ್ ಇದೆ ಎಂದು ತಿಳಿದುಕೊಂಡು ಹೇಳುತ್ತಾರೋ ನಾನರಿಯೆ. ಆಗಲೇ ಹೇಳಿದಂತೆ ನನಗೆ ಚಿಕ್ಕಂದಿನಿಂದಲೂ non-fiction ಸಾಮಗ್ರಿಯ ಓದು-ಬರಹದಲ್ಲಿ ಆಸಕ್ತಿ. ನಾನು ಕತೆ ಎಂದು ಬರೆಯತೊಡಗಿದರೂ ಅದು ಒಂದೆರಡು ಪ್ಯಾರಗ್ರಾಫ್ ಬರೆದಾಗುವಾಗ ಒಂದು ಲೇಖನ, ಹರಟೆ, ಅಥವಾ ಲಲಿತಪ್ರಬಂಧದ ರೂಪು ಪಡೆಯಬಹುದೋ ಏನೊ ಎಂದು ನನಗನಿಸುತ್ತದೆ. ಭಾವನಾತ್ಮಕವಾಗಿ ಯೋಚಿಸುವುದು, ಆ ಭಾವನೆಗಳನ್ನು ಅಕ್ಷರರೂಪಕ್ಕೆ ಇಳಿಸುವುದು ಒಂದು ಸವಾಲೇ. ಆದರೆ ಕೆಲವೊಮ್ಮೆ ನನಗೆ ಅನಿಸುತ್ತದೆ. ಸಾಗರೋಲ್ಲಂಘನ ಮಾಡಿದ ಹನುಮಂತನಿಗೆ, ಮೊದಲು ತನ್ನ ಶಕ್ತಿಸಾಮರ್ಥ್ಯಗಳ ಅರಿವಿರಲಿಲ್ಲವಂತೆ. 'ನೀನು ಮಾಡಬಲ್ಲೆ, ಪ್ರಯತ್ನಿಸು' ಎಂದು ಜಾಂಬವಂತ ಮುಂತಾದವರೆಲ್ಲ ಹುರಿದುಂಬಿಸಿದ ಮೇಲೆ ಅವನು ಸಾಗರೋಲ್ಲಂಘನ ಮಾಡುವುದು ಸಾಧ್ಯವಾಯಿತಂತೆ. ಹಾಗಾಗಿ, 'ನೀವೂ ಕತೆ-ಕಾದಂಬರಿ ಬರೆಯಬಲ್ಲಿರಿ, ಶುರು ಹಚ್ಚಿಕೊಳ್ಳಿ' ಎಂಬ ಪ್ರೋತ್ಸಾಹದ ಮಾತುಗಳನ್ನು ಗಂಭೀರವಾಗಿ ಪರಿಗಣಿಸಲೇ ಎಂದುಕೊಳ್ಳುತ್ತೇನೆ. ಆದರೂ, ವೈಯಕ್ತಿಕವಾಗಿ ನನಗೆ 'ಮಾಹಿತಿಯೊಂದಿಗೆ ಮನರಂಜನೆ' ಅಥವಾ ಇಂಗ್ಲಿಷಲ್ಲಿ ಹೇಳುವುದಾದರೆ infotainment ರೀತಿಯ ಲಘು ಧಾಟಿಯ ಬರವಣಿಗೆಯೇ ಇಷ್ಟ. ನನ್ನ ಇಷ್ಟವಲ್ಲದ್ದನ್ನು ಒತ್ತಾಯಪೂರ್ವಕ ಹೇರಿಕೊಂಡು ಮಾಡುವುದಕ್ಕಿಂತ ನನಗಿಷ್ಟವಾದುದನ್ನೇ ಇನ್ನೂಇನ್ನೂ ಚೆನ್ನಾಗಿ ಮಾಡಿಕೊಂಡಿರುತ್ತೇನೆ ಎಂಬ ಧೋರಣೆ ನನ್ನದು. ನೋಡೋಣ, ಆದರೆ... ಹೋದರೆ... ಅಜ್ಜಿಗೆ ಮೀಸೆ ಬಂದರೆ... ಎತ್ತು ಕರು ಹಾಕಿದರೆ... ಕೋಣ ಹಾಲು ಕೊಟ್ಟರೆ... ಈ ಶ್ರೀವತ್ಸ ಜೋಶಿಯೂ ಒಂದು ಕತೆಯನ್ನೋ ಕಾದಂಬರಿಯನ್ನೋ ಬರೆದರೂ ಬರೆದಾನು!

***೫.ನಿಮ್ಮ ಬ್ಲಾಗಿನಲ್ಲಿ ಇಣುಕಿದರೆ ನೂರಾರು ಹಾಡುಗಳು ಓದುಗರ ಕಣ್ಣು ಸೆಳೆಯುತ್ತವೆ. ಈ ಹಾಡುಗಳ ಸಂಗ್ರಹದಲ್ಲಿ ನಿಮ್ಮ ಆಸಕ್ತಿ ಹೇಗೆ ಪ್ರಾರಂಭವಾಯಿತು?***

ನೀವು ಬಹುಶಃ ನನ್ನ 'ಪದ-ಶ್ರಾವ್ಯ' (sjoshi.podbean.com) ಬ್ಲಾಗ್‌ನ ವಿಚಾರ ಹೇಳುತ್ತಿದ್ದೀರಿ ಎಂದುಕೊಂಡಿದ್ದೇನೆ. ವಿಜಯ ಕರ್ನಾಟಕ ಪತ್ರಿಕೆಗೆ ಬರೆಯುತ್ತಿದ್ದ 'ಪರಾಗಸ್ಪರ್ಶ' ಅಂಕಣದ ಧ್ವನಿರೂಪವನ್ನು (podcast) ಪ್ರಕಟಿಸಲು ನಾನು ಆ ಬ್ಲಾಗ್ ಆರಂಭಿಸಿದ್ದೆ. ಆಮೇಲೆ ಪರಾಗಸ್ಪರ್ಶ ಅಂಕಣ ಮುಗಿಯಿತು. ಬೇರೆ ಪತ್ರಿಕೆಗಳಲ್ಲಿ ಬರೆಯಲು ಇನ್ನೂ ಆರಂಭಿಸಿರಲಿಲ್ಲ.ಆ ಬಿಡುವಿನ ಅವಧಿಯಲ್ಲಿ ನಾನು ಪದ-ಶ್ರಾವ್ಯ ಬ್ಲಾಗ್‌ನಲ್ಲಿ 'ರಾಗರಸಾಯನ' ಎಂಬ ಸರಣಿಯನ್ನು ಆರಂಭಿಸಿದೆ. ಕರ್ನಾಟಕ ಶಾಸ್ತ್ರೀಯ ಸಂಗೀತದ ಜನಪ್ರಿಯ ರಾಗಗಳ ಪೈಕಿ ಒಂದೊಂದು ವಾರ ಒಂದೊಂದು ರಾಗವನ್ನು ಆಯ್ದುಕೊಂಡು ಆ ರಾಗದ ಕುರಿತು ಸಂಕ್ಷಿಪ್ತ ವಿವರಣೆ, ಸ್ವಾರಸ್ಯಕರ ಅಂಶಗಳೇನಾದರೂ ಇದ್ದರೆ ಅವುಗಳ ದಾಖಲಾತಿ, ಮತ್ತು ಆ ರಾಗವನ್ನು ಆಧರಿಸಿದ ಕೃತಿಗಳು, ಚಿತ್ರಗೀತೆಗಳು, ವಾದ್ಯಸಂಗೀತ ಮುಂತಾಗಿ ಧ್ವನಿತುಣುಕುಗಳನ್ನು, ಯುಟ್ಯೂಬ್ ವಿಡಿಯೋಗಳನ್ನು ಒಟ್ಟುಸೇರಿಸಿ ಪ್ರಕಟಿಸುತ್ತಿದ್ದೆ.ಆ ಸರಣಿಯಲ್ಲಿ ಏಳೆಂಟು ಕಂತುಗಳಾಗುತ್ತಿದ್ದಂತೆ ಒಂಥರದ ಏಕತಾನತೆ ಬರತೊಡಗಿತು (ಎಂದು ನನಗೇ ಅನಿಸಿತು). ನಿಲ್ಲಿಸಿಬಿಟ್ಟೆ. ಆದರೂ ಒಂದು ಮಾತನ್ನು ಇಲ್ಲಿ ಹೇಳಬಯಸುತ್ತೇನೆ. ಚಿಕ್ಕಂದಿನಿಂದಲೂ ನನಗೆ ರೇಡಿಯೊ ಕೇಳಿ ಅಭ್ಯಾಸ.ಹಾಗಾಗಿ ಎಲ್ಲ ರೀತಿಯ ಸಂಗೀತಶ್ರವಣದಲ್ಲಿ ಆಸಕ್ತಿ ಮತ್ತು ಅಭಿರುಚಿ. ನಾನು ಸಂಗೀತವನ್ನು ಶಾಸ್ತ್ರೀಯವಾಗಿ ಕಲಿತವನಲ್ಲ. ನನ್ನ ಹಾಡುಗಾರಿಕೆ ಬಾತ್‌ರೂಮ್ ಸಿಂಗಿಂಗ್ ಮಾತ್ರ. ವಾದ್ಯಗಳನ್ನು ನುಡಿಸುವುದನ್ನು ಕಲಿತದ್ದಿಲ್ಲ.ಆದರೇನಂತೆ ನಾನೊಬ್ಬ connoisseur of music ಅಥವಾ ಸಂಗೀತದ ಅಭಿಮಾನಿ ಶ್ರೋತೃ ಎಂದು ಹೇಳಬಲ್ಲೆ. ಕ್ಯಾಸೆಟ್, ಸಿ.ಡಿ, ಮತ್ತು ಈಗ mp3 ರೂಪದಲ್ಲಿ ನನ್ನ ಬಳಿ ಸಂಗೀತದ ಸಂಗ್ರಹ ತುಂಬಾ ಇದೆ. ಮೆಲುವಾದ ವಾಲ್ಯೂಮ್‌ನಲ್ಲಿ ಸಂಗೀತ ಕೇಳುತ್ತ ಕೆಲಸ ಮಾಡುವುದು ನನ್ನ ಅಭ್ಯಾಸ. ಅದು ನನ್ನ ಮನಸ್ಸನ್ನು ಪ್ರಫುಲ್ಲವಾಗಿರಿಸುತ್ತದೆ ಎಂದು ನನ್ನ ಅನುಭವ.


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



ಪ್ರೇಮಿಗಳ ದಿನಾಚಾರಣೆ

# ಹೀಗೊಂದು ಪ್ರೇಮಪತ್ರ




ಕಾವ್ಯಾ ಕಡಮೆ ನಾಗರಕಟ್ಟೆ

ಪ್ರೀತಿಯ ನೀನು,

ಇಳಿಸಂಜೆಯ ಹೊಸ್ತಿಲಲ್ಲಿರುವ ಈ ತಂಪು ಸಮಯದಲ್ಲಿ ಹೀಗೆ ಕತ್ತಲೆಯಲ್ಲಿ ಕುಳಿತು ನಿನಗೆ ಪತ್ರ ಬರೆಯುವುದಕ್ಕಿಂತ ಹಿತವಾದ ಅನುಭವ ಬೇರೊಂದಿಲ್ಲ ಅಂತ ನಂಬಿದ್ದೇನೆ. ಮೊನ್ನೆ ರಜೆಗೆಂದು ಮನೆಗೆ ಹೋದಾಗ ಅಡುಗೆ ಖೋಲಿಯಲ್ಲಿ ಪಪ್ಪ ಅಮ್ಮನ ಸಣ್ಣ ದನಿ. ಇನ್ನೇನು ಒಂದು ವರ್ಷದಲ್ಲಿ ಎಂಎ ಮುಗಿಯುತ್ತದೆ,ಹುಡುಗನನ್ನು ನೋಡಲು ಶುರುಮಾಡಬಹುದು ಅಂತ. ಅಂದರೆ ಇನ್ನು ಒಂದೇ ವರ್ಷದಲ್ಲಿ ನಿನ್ನನ್ನು ಭೇಟಿಯಾಗಲಿದ್ದೇನೆ.ಆ ಹೊತ್ತು ನನ್ನ ಮನಸ್ಥಿತಿ ಹೇಗಿರಬಹುದು ಅಂತ ಅನುಕ್ಷಣ ಯೋಚಿಸಿ ಪುಳಕಗೊಳ್ಳುತ್ತೇನೆ.

ಇಂಥದೇ ಒಂದು ಕ್ಷಣ, ನನ್ನಲ್ಲಿ ಮೆಲುವಾದ ಅಲೆಯೊಂದು ಜಾಗ್ರತಗೊಳ್ಳುತ್ತದೆ. ಎಷ್ಟೋ ವರುಷಗಳಿಂದ ಅಸ್ಪಷ್ಟವಾಗಿ ಸತಾಯಿಸುತ್ತಿದ್ದ ಚಿತ್ರ ಚೂರು ಚೂರೇ ಸ್ಪಷ್ಟವಾಗುತ್ತ ಸಾಗಿಬಂದಂತೆ ಭಾಸವಾಗುತ್ತದೆ. ನಿನ್ನ ಈ ಮಸುಕು ಚಿತ್ರ ಈ ಮನದಲ್ಲಿ ರೂಪಗೊಳ್ಳತೊಡಗಿದ್ದು ಎಂದಿನಿಂದ ಅಂತ ಯೋಚಿಸಿದರೆ ಉತ್ತರವೇನು ಅಷ್ಟು ಸುಲಭದಲ್ಲಿ ಸಿಗುವುದಿಲ್ಲ. ಚಿಕ್ಕಂದಿನಲ್ಲಿ ಪಪ್ಪನ ಕಾಲ ಮೇಲೆ ಕುಳಿತು ನಕ್ಷತ್ರ ಎಣಿಸುತ್ತ ಕೇಳಿದ ಏಳು ಸಮುದ್ರ ಏಳು ಪರ್ವತಗಳಾಚೆಗಿಂದ ಬಿಳಿ ಕುದುರೆಯೇರಿ ಬರುವ ರಾಜಕುಮಾರನ ನಿಲುವಿನಲ್ಲಿ, ಅವನ ಸ್ಪರ್ಶಕ್ಕೆ ನೂರು ವರ್ಷಗಳ ನಿದ್ದೆಯಿಂದ ಎಚ್ಚರಾಗುವ ನಿದ್ರಾಸುಂದರಿಯ ಕಣ್ಣ ರೋಮಾಂಚದಲ್ಲಿ ಹುಡುಕಲೇನು ಇದಕ್ಕೆ ಉತ್ತರ? ಬೇಸಿಗೆಯ ಸಂಜೆಗಳ ಹಳದಿ ಮಿಶ್ರಿತ ಕೆಂಪು ಬಣ್ಣವನ್ನು ಕಂಡಾಗ ಕಾರಣವಿಲ್ಲದೇ ನನ್ನ ಕಣ್ಣುಗಳು ತೇವಗೊಳ್ಳುತ್ತವಲ್ಲ, ಆ ಮರೆವಿನ ಮೇಲೆ ಇರುತ್ತದೆಯೇ ನಿನ್ನ ಸ್ಫುಟವಾದ ಛಾಯೆ? ಸ್ಕೂಟಿಯ ಮೇಲೆ ಹೋಗುವಾಗ ಜೋರು ಮಳೆಗೆ ಸಿಕ್ಕಿ ನಡುವೆಯೆಲ್ಲಾದರೂ ಸ್ಕೂಟಿ ನಿಲ್ಲಿಸಿ ಆಸರೆಗೆಂದು ನಿಂತಾಗ, ಮನವನ್ನು ಒಂದು ಬಗೆಯ ಮೌನ ಆವರಿಸಿಕೊಂಡು ಕಂಪನ ಹುಟ್ಟಿಸುತ್ತದಲ್ಲ, ಆ ಘಳಿಗೆಗಿದೆಯೇ ನಿನ್ನ ಬಿಂಬದ ಹಂಗು? ನನಗೆ ಗೊತ್ತಿಲ್ಲ.



ಇಲ್ಲಿ ದಿನವೂ ಕಣ್ಣು ಬಿಟ್ಟೊಡನೆ ಸಂತೆ. ದಾರಿಯಲ್ಲಿ ಸಂತೆ. ಬಸ್ಸಿನಲ್ಲಿ ಸಂತೆ. ಯೂನಿವರ್ಸಿಟಿಯಲ್ಲಿ, ಕ್ಲಾಸುರೂಮಿನಲ್ಲಿ ಸಂತೆ. ಮನೆಯಲ್ಲೂ ಸಂತೆ. ನಿದ್ದೆಯಲ್ಲೂ, ಕನಸಿನಲ್ಲೂ ಎಲ್ಲೆಡೆ ಸಂತೆ.. ಎಲ್ಲಿ ನೋಡಿದರಲ್ಲಿ ಜನ, ಜನ, ಜನ. ಈ ಸಂತೆಯಲ್ಲಿ ಎಷ್ಟೋ ಕಣ್ಣುಗಳು ನನ್ನ ಕಣ್ಣುಗಳನ್ನು ಹುಡುಕುತ್ತವೆ. ಕೆಲವೊಮ್ಮೆ ನಾನು ಕೂಡ ಹಿಡಿತ ತಪ್ಪಿ ಸಂತೆಯಲ್ಲಿ ನನ್ನ ಕಣ್ಣುಗಳನ್ನೂ ತೇಲಿಬಿಟ್ಟಿದ್ದೇನೆ. ಹಸೀ ಮಣ್ಣಿನ ರಸ್ತೆಯ ಮೇಲೆ ಮಳೆ ಸುರಿದಾಗ ಕಾಲು ಜಾರುತ್ತದಲ್ಲ, ಇನ್ನೇನು ಬಿದ್ದೆ ಬಿದ್ದೆ ಅನ್ನಿಸುತ್ತದಲ್ಲ, ಅಂಥ ಭಾವ ಅದು. ಆದರೆ ಕ್ರಮೇಣ ಮಳೆ ನಿಲ್ಲುತ್ತದೆ, ನೆಲ ಒಣಗುತ್ತದೆ, ಮತ್ತೆ ನಿನ್ನ ನಿಶ್ಚಲ ಕನವರಿಕೆ ಯಾವತ್ತಿನಂತೆ ಶುರುವಾಗುತ್ತದೆ. ರಾತ್ರಿಯ ಕತ್ತಲೊಂದು ಮೆಲ್ಲಗೆ ನಸುಕಿಗೆ ಜಾರಿಕೊಳ್ಳುವಾಗ ನಿನ್ನ ಚಿತ್ರ, ಹಾರುವ ಮುಂಗುರುಳಿನಂತೆ, ಜಾರುವ ದಾವಣಿಯಂತೆ ನನ್ನ ದೈನಿಕವನ್ನು ಸೋಕಿ ಮರೆಯಾಗುತ್ತದೆ.

ನಿನ್ನ ಕುರಿತಾಗಿ ನನ್ನಲ್ಲಿ ಯಾವುದೇ ಫಿಲ್ಮೀ ನಿರೀಕ್ಷೆಗಳಿಲ್ಲ. ನೀನು ನನಗೆ ಟೀವಿಯ ಜಾಹಿರಾತಿನಲ್ಲಿ ತೋರಿಸುವಂತೆ ವಜ್ರದ ಸರ ತಂದು ತೊಡಿಸುವುದು ಬೇಡ, 'ಮಳೆಯಲಿ ಜೊತೆಯಲಿ' ಅಂತ ಗುಲಾಬಿ ಹೂವು ಹಿಡಿದು ನನ್ನ ಹಿಂದೆ ಮುಂದೆ ಸುತ್ತುವುದು ಬೇಡ, ನನ್ನ ಮೇಲೆ ಪುಟಗಟ್ಟಲೇ ಕವಿತೆ ಬರೆಯುವುದು ಬೇಡ, ಕೂದಲಿಗೆ ಜೆಲ್ ಹಚ್ಚಿ ಮೈಗೆಲ್ಲ ಡಿಯೋ ಹೊಡೆದುಕೊಂಡು ನನಗೆ ತಲೆನೋವು ತರಿಸುವುದೂ ಬೇಡ. ಇಂಥ ಎಲ್ಲಾ ಮಾಧ್ಯಮಪ್ರೇರಿತ ಆಯ್ಕೆಗಳನ್ನು ಬದಿಗಿಟ್ಟು ಒಮ್ಮೆ ಶುದ್ಧ ಮನುಷ್ಯನಾಗಿ ಬಾ, ಆತ್ಮಸಂಗಾತಿಯಾಗಿ ಬಾ, ನನ್ನ ಗೆಜ್ಜೆಯ ಸದ್ದಾಗಿ, ಕಾಡಿಗೆಯ ಕಪ್ಪಾಗಿ, ಸೂರ್ಯನ ಬೆಳಕಾಗಿ ಬಾ. ಏಕೆಂದರೆ ನಮ್ಮ ಸಂಬಂಧ ಮೊದಲ ಒಂದೂವರೆ ವರ್ಷ ಕೈಕೈಹಿಡಿದು ನಡೆದು, ಬದುಕಿನ ಮುಂದಿನ ಎಲ್ಲ ಅಧ್ಯಾಯಗಳೂ ಧಾರಾವಾಹಿಯ ಎಪಿಸೋಡುಗಳಂತೆ ಕ್ಲೀಷೆಯಾಗುತ್ತ ಸಾಗುವುದು ನನಗಿಷ್ಟವಿಲ್ಲ. ಹರೆಯದ ಹುಮ್ಮಸ್ಸಿನಲ್ಲಿ ಮೈಮರೆತು ಮುದ್ದಿಸಿದಂತೆ ಮಾತ್ರವಲ್ಲ, ನಮ್ಮ ಕೈಗಳ ಮೇಲೆ ನಿರಿಗೆಗಳು, ಹಣೆಯ ಮೇಲೆ ಸುಕ್ಕುಗಳು ಬಿದ್ದಾಗ ಕೂಡ ಒಬ್ಬರಿಗೊಬ್ಬರು ಆಸರೆಯಾಗಿರುವ ಸ್ವಪ್ನ ಕಾಣುತ್ತೇನೆ. ಹಾಗೆಯೇ ನಮ್ಮಿಬ್ಬರ ಖಾಸಗಿ ಕ್ಷಣಗಳು ಒಂದೇ ಬಿಂದುವಿನಲ್ಲಿ ಸಂಧಿಸುವ ಸಮಯಕ್ಕಾಗಿ ಮೌನದಿಂದ, ಸಾವಧಾನದಿಂದ, ಯಾವುದೇ ಭಾವಾವೇಶವಿಲ್ಲದೇ ಕಾಯುತ್ತಿದ್ದೇನೆ.

ಆದರೆ ಕೆಲವೊಮ್ಮೆ ಮಾತ್ರ ತೀರ ಭಾವುಕಳಾಗಿ ಬಿಡುತ್ತೇನೆ. ಬಹುಶಃ ಅದು ನನ್ನ ವಯಸ್ಸಿನ ಪ್ರಭಾವದಿಂದಿರಬಹುದು. ಸಂತೆಯಲ್ಲಿ ಕಳೆದುಹೋದಾಗ, ಚೆಂದಾಗಿ ಸೀರೆಯುಟ್ಟು ಕನ್ನಡಿಯ ಎದುರು ನಿಂತಾಗ, ಆರ್ಕುಟ್-ಫೇಸಬುಕ್ಕಿನಲ್ಲಿ ಊಹಿಸಲಸಹ್ಯವಾದ ಸ್ಕ್ರಾಪುಗಳು ಬರತೊಡಗಿದಾಗ, ಕಾರಣವೇ ಇಲ್ಲದೇ ಕಣ್ಣಿನಿಂದ ನೀರು ದಳದಳ ಹರಿಯುವಾಗ ಸುಮ್ಮನೇ ನಿನ್ನ ಎದೆಗೆ ಮೂಗು ಒತ್ತಿ ಜಗತ್ತನ್ನೇ ಮರೆತು ಮಲಗಿಬಿಟ್ಟಂತೆ ಕನಸು ಕಾಣುತ್ತೇನೆ. ಚಳಿಯ ರಾತ್ರಿಗಳಲ್ಲಿ ನಿನ್ನ ಕಣ್ಣುಗಳಲ್ಲಿನ ಮಿಂಚು ನನ್ನ ದೇಹ ಸೇರಿ ಬೆಚ್ಚಗಾದಂತೆ ನಲುಗುತ್ತೇನೆ, ನಿನ್ನ ನಡುಗುವ ಕೈಗಳ ಸ್ಪರ್ಶಕ್ಕೆ ಸುಖದಿಂದ ನರಳುವ ಆಟಕ್ಕೆ ಪುಳಕಗೊಳ್ಳುತ್ತೇನೆ. ಆದರೆ ಈ ಎಲ್ಲ ಬಿಂಬಗಳ ಹಿಂದಿರುವ ನಿನ್ನ ಚಹರೆ, ಎಂಥದದು? ಯಾವುದದು? ಉತ್ತರ ಮತ್ತೆ ಅಸ್ಪಷ್ಟ.

ನೀನು ಕೂಡ ಇದೇ ಭೂಮಿಯ ಮೇಲಿದ್ದೀ. ನಾನು ಕಾಣುವ ಚಂದ್ರನನ್ನೇ ನೀನೂ ಕಾಣುತ್ತಿದ್ದಿ, ನಾನು ಕರಗುವ ಬೆಳದಿಂಗಳಲ್ಲೇ ನೀನೂ ಕರಗುತ್ತೀ ಅಂತ ನೆನೆದರೆ ಸಂಭ್ರಮವಾಗುತ್ತದೆ,ನಿನ್ನನ್ನು ಕಾಣುವ ಬಯಕೆ ಮತ್ತಷ್ಟು ಉತ್ಕಟವಾಗುತ್ತದೆ. ನಿನ್ನ ಕುರಿತಾದ ಕನಸಿಗೂ ಶಬ್ದವಿದೆ, ಧ್ಯಾನಕ್ಕೂ ಸಹ! ಏಕಾಂತವನ್ನೂ ಮೀರಿದ ಧ್ಯಾನವಿದು. ಈ ಇಪ್ಪತ್ತೆರಡು ವರುಷಗಳ ದಿವ್ಯ ದೀರ್ಘ ತಪಸ್ಸಿನಿಂದ ನಿನಗಾಗಿ ಎಚ್ಚರಾಗ್ತೇನೆ ನಾನು.ನಿನ್ನ ಬರುವಿಕೆಗಾಗಿ ಹರ್ಷದಿಂದ, ಅಷ್ಟೇ ಪ್ರಾಮಾಣಿಕವಾಗಿ ಕಾಯುತ್ತ ಮನದ ದೆಣಪೆಯಲ್ಲಿ ನಿನ್ನನ್ನು ಸ್ವಾಗತಿಸಲು ತಯಾರಾಗಿ ನಿಂತಿದ್ದೇನೆ. ಹೇಳು,ನನ್ನನ್ನು ಕಾಡುತ್ತಿರುವ ಭಾವಗಳು ಈ ಕ್ಷಣದಲ್ಲಿ ನಿನ್ನನ್ನೂ ಕಾಡುತ್ತಿವೆಯೇ? ನೀನೂ ಕೂಡ ಈ ಹೊತ್ತು ಹೀಗೆ ಏಕಾಂತದಲ್ಲಿ ಪತ್ರ ಬರೆಯುತ್ತ ಕುಳಿತಿದ್ದೀಯಾ? ಹಾಗಂತ ನೆನೆದರೆ ನನ್ನೆದೆಯ ಮಂಟಪದಲ್ಲಿ ಝಲ್ಲನೆ ರೋಮಾಂಚನ.

(ಮುಂದಿನ ಪುಟಕ್ಕೆ)


Copyright © KCO – Brindavana

ಸಂಚಿಕೆ
೦೬
ಮಾರ್ಚ್ , ೨೦೧೭

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ




(ಹಿಂದಿನ ಪುಟದಿಂದ)

ನಿನ್ನ ಕುರಿತಾಗಿ ನನ್ನಲ್ಲಿ ಯಾವುದೇ ಭಾವಾತಿರೇಕವಿಲ್ಲ.ಇಡೀ ಜಗತ್ತನ್ನೇ ನಿನ್ನ ಸಲುವಾಗಿ ಬಿಟ್ಟುಬಿಡುತ್ತೇನೆ ಎಂಬ ಹುಂಬ ಆವೇಶವಿಲ್ಲ;ಈಗಿರುವ ಜಗತ್ತೆಲ್ಲ ನರಕ ನೀನು ಬಂದ ಮೇಲಿನದ್ದೆಲ್ಲ ಸ್ವರ್ಗವೇ ಎಂಬ ಹೈಸ್ಕೂಲು ಹುಡುಗಿಯ ಮನಸ್ಥಿತಿಯೂ ನನಗಿಲ್ಲ, ನಿನ್ನನ್ನು ಸಹಜವಾಗಿ ನನ್ನ ಮನದ ಕೋಣೆಗೆ ಸ್ವಾಗತಿಸಬೇಕು ನಾನು.ಈ ಮನದ ಕೋಣೆಯ ಮೊದಲ ಮತ್ತು ಕೊನೆಯ ರೂಮ್-ಮೇಟ್ ನೀನು.

ನನಗೆ ನಿನ್ನ ಜೊತೆಗೇ ವಯಸ್ಸಾಗಬೇಕು.ಹರೆಯದ ಆಕರ್ಷಣೆಯನ್ನೂ ಮೀರಿ ನಮ್ಮಿಬ್ಬರ ಆತ್ಮಗಳು ಒಂದಾಗಬೇಕು.ಇನ್ನೇನು ನನ್ನ ಕೈಗಳಿಗೂ ಮಸಾಲೆ ಪದಾರ್ಥಗಳ ಘಮ ಅಂಟಿಕೊಳ್ಳುವ ಮುನ್ನ, ನನ್ನ ಹಿಮ್ಮಡದಲ್ಲೂ ಬಿರುಕು ಮೂಡುವ ಮುನ್ನ, ಒಮ್ಮೆ ಬಾ.. ಒಬ್ಬರಿಗೊಬ್ಬರು ಉಸಿರುಗಟ್ಟಿಸದಂತೆ ಬದುಕು ಕಟ್ಟಿಕೊಳ್ಳೋಣ,ಯಾವುದೇ ಕೆಟ್ಟ ಕ್ಷಣದಲ್ಲೂ ಒಬ್ಬರ ಅಸಹಾಯಕತೆ ಮತ್ತೊಬ್ಬರಿಗೆ ಖುಷಿಕೊಡದಂತಿರಲಿ.

ಹೇಳು, ಹೇಗೆ ಮುಟ್ಟಲಿ? ಈ ನಿತ್ರಾಣ ಶಬ್ದಗಳಲ್ಲಿ ಹೇಗೆ ನಿಲುಕಲಿ ನಿನ್ನ? ನೀನೆಂದರೆ ಬರೀ ನೀನಲ್ಲ ಕಣೋ, ಅದು ನಾನೇ..

ಮನದ ರೂಮ್-ಮೇಟ್ ನ ನಿರೀಕ್ಷೆಯಲ್ಲಿ,

ನಿನ್ನವಳು.

(೨೦೦೧ನೇ ಇಸವಿಯಲ್ಲಿ ಕನ್ನಡಪ್ರಭ ಪತ್ರಿಕೆ ಏರ್ಪಡಿಸಿದ್ದ ಪ್ರೇಮಪತ್ರ ಸ್ಪರ್ಧೆಯಲ್ಲಿ ಈ ಪತ್ರ ಮೊದಲನೆಯ ಬಹುಮಾನ ಪಡೆದಿತ್ತು. ಕಳೆದ ತಿಂಗಳು ವಿಶ್ವದಾದ್ಯಂತ ಆಚರಿಸಿದ ಪ್ರೇಮಿಗಳ ದಿನಾಚರಣೆಯ ಪ್ರಯುಕ್ತ ಈ ಪತ್ರವನ್ನು ನಿಮ್ಮೊಡನೆ ಹಂಚಿಕೊಳ್ಳುತ್ತಿದ್ದೇವೆ.)

## ಕವನ

### *ನಾ ಕಂಡ ಮೊದಲ ಸಲ!!!*



ಶ್ರೀವತ್ಸ ಕುಲಕರ್ಣಿ

ಕಂಡೆ ಇಂದೇ ನಿನ್ನನು,
ಮಾತು ಮರೆತೇ ಹೋದೆನು!
ನಿನ್ನ ಕಮಲದ ಕಣ್ಣನು,
ನೋಡಿ ಒಳಹೊಕ್ಕಲು ನಾ ಬಂದೆನು!!

ಮಾತು ಬಾರದೆ, ಮೌನ ತಾಳದೆ, ಕವಿತೆ ಮುಂದೆ ಬಂತೆಂದನು,
ನಿನ್ನ ಸನಿಹಕೆ, ನನ್ನ ಬರುವಿಕೆ, ಮೋಡಿಮಾಡಿತು ಎಂದನು!
ಬಂದು ನಿಂತೆನು, ಕಂಡು ಸೋತೆನು, ಏನು ಹೇಳಲಿ ಎಂತನು,
ಶ್ವೇತ ವಸ್ತ್ರದಿ ಸಿಂಗರಿಪಳೀಕೆ, ಇವಳೇ ಇನ್ ನನ್ನಾಕೆ ಎಂದೆನುತ್ತ
ಅವಳ ಬಳಿಯೇ ನಿಂತೆನು!!

### *US ಮೇಲೆ ಪ್ಯಾರ್ ಗೆ ಹೋಗ್ಬಿಟ್ಟೈತೆ!!!*

ನಮ್ದೂಕೆ US ಮೇಲೆ ಪ್ಯಾರ್ ಗೆ ಹೋಗ್ಬಿಟ್ಟೈತೆ,
Peace of Mindಏ ಸಿಗ್ತಾ ಇಲ್ಲ ನಮ್ದೂಕೆ,
ಸಿಗೋ ಸಂಬಳ ಸಾಕಾಯ್ತಿಲ್ಲ ನಮ್ದೂಕೆ,
ಪ್ರಮೋಷನ್, ಸುದ್ದೀನೆ ಇಲ್ಲ ಸದ್ಯಕೆ,
So, ಪ್ಯಾರ್ ಗೆ ಹೋಗ್ಬಿಟ್ಟೈತೆ...
ನಮ್ದೂಕೆ US ಮೇಲೆ ಪ್ಯಾರ್ ಗೆ ಹೋಗ್ಬಿಟ್ಟೈತೆ!!

ವೈಸು(ವಯಸ್ಸು) ಜಾಸ್ತಿ ಆಗ್ತಾ ಐತೆ ನಮ್ದೂಕೆ,
ಕೂದಲ್ ಬೆಳ್ಳಗ್ ಆಗೋಯ್ತ್ ನಮ್ದೂಕೆ,
ಎಷ್ಟೇ EMI ಕಟ್ಟುದ್ರು Home Loan ತೀರ್ತಾ ಇಲ್ಲ ನಮ್ದೂಕೆ,
Trumpನ ಕಾಟ ತಡ್ಕಕ್ ಆಯ್ತಿಲ್ಲ ಸದ್ಯಕ್ಕೆ,
So, ಪ್ಯಾರ್ ಗೆ ಹೋಗ್ಬಿಟ್ಟೈತೆ...
ನಮ್ದೂಕೆ US ಮೇಲೆ ಪ್ಯಾರ್ ಗೆ ಹೋಗ್ಬಿಟ್ಟೈತೆ!!

ಗಾಡಿ ಹೊಡ್ಕೊಂಡ್ ಹೋಗ್ತಾ ಇದ್ದೆ ನಮ್ದೂಕೆ,
ನಮ್ PM Phone ಬಂತು, Status Update ಕೆಳಕ್ಕೆ,
Status Update ಮಾಡೋಣ ಅನ್ನೋ ಅಷ್ಟೊತ್ಗೆ,
Flash Light ಹಾಕೊಂಡ್ Follow ಮಾಡ್ದ ಪೊಲೀಸಪ್ಪ ನನ್ ಹಿಂದಕ್ಕೆ,
So, ಪ್ಯಾರ್ ಗೆ ಹೋಗ್ಬಿಟ್ಟೈತೆ...
ನಮ್ದೂಕೆ US ಮೇಲೆ ಪ್ಯಾರ್ ಗೆ ಹೋಗ್ಬಿಟ್ಟೈತೆ!!

## ಕವನ

### *....ಒಲವ ಸ್ವರ....*



ಲಕ್ಷ್ಮಿ ಕೋಲಳ್

ವಿನಿಮಯವಾಗುತಿಹುದು ಇಲ್ಲಿ
ವಿರಹದ ಗಾನಾಮೃತ
ಸವಿಮಯವಾಗುತಿಹುದು ಚೆಲ್ಲಿ
ಸ್ನೇಹದ ತಾನ ತರಂಗ
ಪುಟಿಯುತಿಹುದು ನೋಡಲ್ಲಿ
ಪ್ರಣಯದ ಪಲ್ಲವಿಯ ಪಯಣ
ಸಂಚಿಲ್ಲದಾ ಹೃದಯದಲಿ
ಮಿಡಿದಿಹುದೊಂದು ಇಂಚರಾ
ಕಂಠಗಳಲಿ ಉಲಿದಿಹುದು ಏನೋ ಕಂಪನಾ
ನಮ್ಮೊಲವಿನ ರಾಗಸುಧೆಯ ಮೊದಲಿನಾ ಈ ಸ್ವರಾ
ಪ್ರೀತಿ ಪ್ರೇಮದಾ ಪರಿಚಯವೇ ಅದರ ಆಧಾರ..!!


Copyright © KCO – Brindavana

ಸಂಚಿಕೆ
೦೬
ಮಾರ್ಚ್ , ೨೦೧೭

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಬದುಕಿನ ಬಣ್ಣ ಮತ್ತು ಬಣ್ಣದ ಬದುಕು



ಕಾವ್ಯಾ ಕಡಮೆ ನಾಗರಕಟ್ಟೆ

**ಬೇ**ರೆ ಕಡೆಗಳಲ್ಲಿ ಹೇಗೋ ಗೊತ್ತಿಲ್ಲ, ಆದರೆ ನಮ್ಮ ಉತ್ತರ ಕರ್ನಾಟಕದ ಜರ್ನಲಿಸಂ ಡಿಪಾರ್ಟಮೆಂಟುಗಳಲ್ಲಿ ಮಾತ್ರ ಕೋರ್ಸು ಸೇರುವ ಹುಡುಗಿಯರ ಸಂಖ್ಯೆ ಕಣ್ಣಿಗೆ ರಾಚುವಷ್ಟು ಕಡಿಮೆ. ನಮ್ಮ ಸೀನಿಯರ್ಸ್ ಮೂವತ್ತು ಜನರಲ್ಲಿ ಕೇವಲ ನಾಲ್ಕು ಜನ ಹುಡುಗಿಯರಿದ್ದರು. ಆದರೆ ಕ್ಲಾಸಿನಲ್ಲಿ ಅವರ ಮಾತೇ ನಡೆಯುತ್ತಿತ್ತು ಎನ್ನುವುದು ಬೇರೆ ವಿಷಯ. ನಮ್ಮ ಕ್ಲಾಸಿನಲ್ಲಿ ಕೂಡ ನಾವು ಏಳೇ ಹುಡುಗಿಯರು ಇದ್ದೆವು. ಇಲ್ಲಿ ಮುಖ್ಯವಾಗಿ ಹೇಳಬೇಕಾದುದೆಂದರೆ ನಮ್ಮ ಕ್ಲಾಸಿನ ಹುಡುಗರ್ಯಾರೂ ನಮ್ಮನ್ನು ಹುಡುಗಿಯರು ಅಂತ ಪ್ರತ್ಯೇಕವಾಗಿ ನೋಡಿದ್ದೇ ಇಲ್ಲ. ನಾವು ತಟಕ್ಕೆಂದು ಕೇಳುವ ಸಣ್ಣ ಸಣ್ಣ ಪ್ರಶ್ನೆಗಳಿಗೆ ಉತ್ತರಿಸುವಾಗ ಬೆವರುತ್ತಿರಲಿಲ್ಲ, ನಾವು ಜೊತೆಗಿದ್ದಾಗ ಬೇರೆ ಡಿಪಾರ್ಟಮೆಂಟಿನ ಹುಡುಗಿಯರ ಟಾಪ್ ನ ಅಳತೆಯ ಬಗ್ಗೆಯೋ ಅಥವಾ ಅವರ ಅವರ ದಾವಣಿಯ ಮುದ್ದಾದ ಸುಕ್ಕುಗಳ ಬಗ್ಗೆಯೋ ಅಥವಾ ಅವರ ಮುಂಗುರುಳು ಸಹಜವಾಗಿ ಹಾರುತ್ತದೋ ಇಲ್ಲಾ ಅದರ ಹಿಂದೆ ಬ್ಯೂಟಿಷಿಯನ್ ಗಳ ಕೈವಾಡವಿದೆಯೋ ಎಂಬುದರ ಬಗ್ಗೆಯೋ ನಿಸ್ಸಂಕೋಚವಾಗಿ ಚರ್ಚಿಸಬಲ್ಲವರಾಗಿದ್ದರು. ನಾವು ಕೂಡ ನಿಮಗೆ ಹುಡುಗಿಯರು ಅಂದರೆ ಹಣೆಯ ಮೇಲಿಷ್ಟು ಕೂದಲು ಬಿಟ್ಟು, ತುಸು ಬೆಳ್ಳಗಿದ್ದು ಪರ್ಫ್ಯೂಮ್ ಮೂಗಿಗೆ ಹೊಡೆಯುವಂತಿದ್ದರೆ ಸಾಕು ಮಕ್ಕಳೇ ಕಣ್ಣುಮುಚ್ಚಿ ಹಿಂದೆ ಹೋಗಿಬಿಡುತ್ತೀರಿ ಅಂತ ರೇಗಿಸುತ್ತಿದ್ದೆವು. ಇದೆಲ್ಲವನ್ನೂ ಇಲ್ಲಿ ಏಕೆ ಹೇಳಲೇಬೇಕು ಅನ್ನಿಸಿತೆಂದರೆ ಗಂಡು ಹೆಣ್ಣಿನ ಸಂಬಂಧ ನಗರಗಳಲ್ಲಿ ಹೇಗೆ ಮೆಲ್ಲಗೆ ಹೊಸ ರೂಪ, ಹೊಸ ಅಂಗಿ ತೊಟ್ಟು ಸಹಜವಾಗುತ್ತಿದೆ ಎಂಬುದನ್ನು ಈ ಮಹಿಳಾ ದಿನಾಚರಣೆಯ ಹೊತ್ತಿನಲ್ಲಿ ನೆನೆಯಲೇಬೇಕು ಅಂತ ಅನ್ನಿಸಿತು. ಆ ಮೂಲಕ ಸ್ತ್ರೀವಾದದ ಎಲ್ಲೆ ಮೀರಿ ಹೆಣ್ಣಿನ ವ್ಯಕ್ತಿತ್ವ ವಿಕಸಿತವಾಗುತ್ತ ನಡೆದಿದೆ ಎಂದು ದಿಟ್ಟವಾಗಿ ನುಡಿಯಬಹುದು.

ಒಮ್ಮೆ ಹೀಗಾಯಿತು. ನಮ್ಮ ಡಿಪಾರ್ಟಮೆಂಟಿನಲ್ಲಿ ರಾಜ್ಯಮಟ್ಟದ ಮೀಡಿಯಾ ಫೆಸ್ಟ್ ಆಯೋಜಿಸಿದ್ದೆವು. ಅಷ್ಟು ದೊಡ್ಡ ಇವೆಂಟ್ ಎಂದರೆ ಫೆಸ್ಟ್ ಹತ್ತಿರ ಬರುತ್ತಿದ್ದಂತೆ ಅದೂ ಇದೂ ಕೆಲಸ ಅಂತ ರಾತ್ರಿ ಒಂಬತ್ತು ಹೊಡೆದೇಬಿಡುತ್ತಿತ್ತು. ಆಗ ಮನೆಯಿಂದ ಪಪ್ಪ ಫೋನ್ ಮಾಡಿ ಪೀಜಿಯ ತನಕ ಒಬ್ಬಳೇ ಹೋಗಬೇಡ, ಕ್ಲಾಸಿನ ಹುಡುಗರನ್ಯಾರಾದರನ್ನೂ ಜೊತೆಗೆ ಕರೆದುಕೊಂಡು ಹೋಗು ಅಂತ ಹೇಳುತ್ತಿದ್ದರು. ಪಪ್ಪ ಅಮ್ಮನ ಮುಂದೆ ಕೂಡ ಇವನು ನನ್ನ ಫ್ರೆಂಡ್ ಅಂತ ಯಾವುದೇ ಹಿಂಜರಿತವಿಲ್ಲದೇ ಇಂದಿನ ಹುಡುಗಿಯರು ಪರಿಚಯ ಮಾಡಿಕೊಡುತ್ತಾರೆ.

ಮೊದಲೆಲ್ಲ ಟಾಯ್ಲೆಟ್ಟಿಗೆ ಹೋಗಬೇಕೆಂದರೂ ಹುಡುಗಿಯರು "ಲೇ, ಪ್ಲೀಸ್ ಬಾರಲೇ" ಅಂತ ತಮ್ಮ ಸ್ನೇಹಿತೆಯರನ್ನು ಜೊತೆಗೆ ಕರೆಯುತ್ತಿದ್ದರು. ಆದರೆ ಇಂದು ಆಕೆ ಒಬ್ಬಳೇ ಮಾರ್ಕೆಟ್ಟಿಗೆ ಶಾಪಿಂಗ್ ಹೋಗಬಲ್ಲಳು, ತನ್ನಿಷ್ಟದ ಪಾನೀಪುರಿಯನ್ನು ಒಬ್ಬಳೇ ಸವಿಯಬಲ್ಲಳು, ಬಿಸಿಲಿನಿಂದ ಕಂಗೆಟ್ಟಾಗ ಒಬ್ಬಳೇ ಹೋಗಿ ಎಳನೀರನ್ನೋ, ಕಬ್ಬಿನಹಾಲನ್ನೋ ಕೋಲ್ಡ್ ಬದಾಮ್ ಮಿಲ್ಕನ್ನೋ ಕುಡಿಯುವ ನಿರಾಳತೆಯನ್ನು ಅನುಭವಿಸಬಲ್ಲಳು, ಇಷ್ಟದ ಸಿನಿಮಾವನ್ನು ಒಬ್ಬಳೇ ಹೋಗಿ ಕುಳಿತು ನೋಡಿ ಬಂದು ಹೊಸತನದಲ್ಲಿ ಕಂಗೊಳಿಸಬಲ್ಲಳು. ಚಿನ್ನದ ಕಂಪನಿಯವರೊಂದು ಜಾಹಿರಾತು ಕೊಡುತ್ತಾರಲ್ಲ, 'Beautifully you' ಅಂತ, ಅಷ್ಟೇ ನಿರಮ್ಮಳ, ನಿಷ್ಕಪಟ ಆತ್ಮವಿಶ್ವಾಸದ ಗೆರೆಯಿದು.. ಆ ಗೆರೆಯುದ್ದಕ್ಕೂ ತನ್ನ ತೀಕ್ಷ್ಣ ದೃಷ್ಟಿಯನ್ನು ಅಷ್ಟೇ ಸೂಕ್ಷ್ಮವಾಗಿ ಬೀರಬಲ್ಲಳು. ತನ್ನ ಸ್ವಂತ ನಿರ್ಧಾರವನ್ನೂ, ಅನಿಸಿಕೆಗಳನ್ನೂ ಯಾವ ಕಳವಳವೂ ಇಲ್ಲದೇ ಯಾರ ಹಂಗೂ ಇಲ್ಲದೇ ನಿಶ್ಚಿತವಾಗಿ ಪ್ರಕಟಿಸಬಲ್ಲಳು.

(ಮುಂದಿನ ಪುಟಕ್ಕೆ..)



ವಿಶ್ವ ಮಹಿಳಾ ದಿನಾಚರಣೆ

ಕವನ

### ಮಹಿಳಾದಿನದಂದು



ಅಹೀಶ್ ಭಾರದ್ವಾಜ

ಮಹಿಳಾದಿನದಂದು,
ಪುಢಾರಿಯೊಬ್ಬನ ಭಾಷಣ ನಡೆದಿತ್ತು ಸ್ತ್ರೀವಿಮೋಚನೆಯೆಂದು
ಹಿಂದೆ ನಡೆಸುತ್ತಾನೆ ವೇಶ್ಯಾವಾಟಿಕೆಯ ದಂಧೆಯೊಂದು!
ಬೂಟಾಟಿಕೆಯೇ ಇದೆಲ್ಲ!

ಮಹಿಳಾದಿನದಂದು,
ಮಹಿಳಾ ವಿಮೋಚನೆ ಅಧ್ಯಕ್ಷೆ ಕೂಗಿ ಸಾರಿದಳು, ಎಲ್ಲಿಯವರೆಗೀ ದೌರ್ಜನ್ಯ
ಅವಳ ಮನೆಯಲ್ಲೇ ನಡೆದಿದೆ ನಿತ್ಯವೂ ಸೊಸೆಯ ಮೇಲೆ ದೌರ್ಜನ್ಯ!
ಬೂಟಾಟಿಕೆಯೇ ಇದೆಲ್ಲ!

ಮಹಿಳಾದಿನದಂದು,
ಕಛೇರಿಯಲ್ಲಿ ಅಧಿಕಾರಿಯ ಸ್ತ್ರೀಶಕ್ತಿ, ದೌರ್ಜನ್ಯಗಳ ಉವಾಚ;
ಕಚ್ಚೆ ಭದ್ರ ಇರದ ಅವನ ಲೈಂಗಿಕ ದೌರ್ಜನ್ಯದ ಬಂಡಾಟ!
ಬೂಟಾಟಿಕೆಯೇ ಇದೆಲ್ಲ!

ಮಹಿಳಾದಿನದಂದು,
ಪುರುಷ ಮಹಾಶಯರ ಮಹಿಳೆಯ ಮೇಲಿನ ಎಂದೂ ಇರದ ಅನುಕಂಪ;
ದಿನವೂ ಸಾಗಿದೆ ತನ್ನ ಹೆಂಡತಿಯೊಡನೆ ರಂಪ!
ಬೂಟಾಟಿಕೆಯೇ ಇದೆಲ್ಲ!

ಮಹಿಳಾದಿನದಂದು,
ಮಹಿಳಾಮಣಿಗಳ ಕೂಗು! ನಿಲ್ಲಲಿ ನಮ್ಮ ಮೇಲಿನ ದಬ್ಬಾಳಿಕೆ;
ಮನೆಯಲ್ಲಿ ನಿಲ್ಲಲಿಲ್ಲ ಕೆಲಸದ ಹುಡುಗಿಯ ಮೇಲಿನ ದಬ್ಬಾಳಿಕೆ!
ಬೂಟಾಟಿಕೆಯೇ ಇದೆಲ್ಲ!

ಮಹಿಳಾದಿನದಂದು,
ಏನೆಂದು ಗುರುತಿಸಲಿ ಹೇಳಿ ನಿಮ್ಮನು?
ಗೊತ್ತಿಲ್ಲದಿದ್ದರೆ, ಕುಳಿತಿಕೋ ಸುಮ್ಮನೆ ನೀನು;
ಬೂಟಾಟಿಕೆಯ ಮಾತು ಸಾಕಿನ್ನು!
ಇದು ಬೂಟಾಟಿಕೆ ಅಲ್ಲ!!


Copyright © KCO – Brindavana

ವಿಶ್ವ ಮಹಿಳಾ ದಿನಾಚರಣೆ

(..ಹಿಂದಿನ ಪುಟದಿಂದ)

ಇವೆಲ್ಲಕ್ಕೂ ಕಾರಣಗಳಲ್ಲಿ ಬಹುಶಃ ಮಾಧ್ಯಮದ ಪಾತ್ರವೂ ಮುಖ್ಯವಿರಬಹುದು. ತನ್ನ ಒಂದು ಸಂದರ್ಶನದಲ್ಲಿ ಐಶ್ವರ್ಯ ರೈ 'I am proud to be a woman' ಅಂತ ಹೇಳಿದ್ದೂ ಅಥವಾ ಶೀಲಾ ಕಿ ಜವಾನಿಯಲ್ಲಿ ಕತ್ರಿನಾ 'ಕಿಸಿ ಔರ ಕಿ ಮುಝುಕೊ ಜರೂರತ ಕ್ಯಾ, ಮೈ ತೋ ಖುದ್ ಸೇ ಪ್ಯಾರ ಜತಾವೂ' ಎಂದು ಆತ್ಮವಿಶ್ವಾಸದಿಂದ ಉಸುರಿದ್ದೂ ಇಂದಿನ ಹುಡುಗಿಯರ ಹೊಸ ವ್ಯಕ್ತಿತ್ವದ ಬೆನ್ನೆಲುಬಾಗಿದ್ದೂ ಸ್ವಲ್ಪಮಟ್ಟಿಗೆ ಸತ್ಯ. ನಮ್ಮ ಮನೆಯ ಕೆಲಸಕ್ಕೆ ಬರುವ ಚೆನ್ನವ್ವ ಕುಡಿದು ಬರುವ ಗಂಡನಿಗೆ ದಿನವೂ ತಾನೇ ಹೊಡೆಯುತ್ತಿದ್ದಳು. ಇಂಟರ್ನೆಟ್ ಎಂಬ ಮಾಯಾಜಾಲ ಮುಖ್ಯಭೂಮಿಕೆಗೆ ಬಂದಮೇಲಂತೂ ಜಗತ್ತಿನ ಎಲ್ಲ ಸಂಗತಿಗಳನ್ನೂ ಆಕೆ ತಿಳಿದುಕೊಳ್ಳುತ್ತಿದ್ದಾಳೆ. ಮಣಿಪುರದಲ್ಲಿ ನಡೆದ ಹಿಂಸೆಯ ಕುರಿತಾಗಿಯೂ ಫೇಸಬುಕ್ಕಿನಲ್ಲಿ 'ಕಾಸ್' ಕ್ರಿಯೇಟ್ ಮಾಡಿ ತನ್ನದೇ ರೀತಿಯಲ್ಲಿ ಪ್ರತಿಭಟಿಸಿದ್ದಾಳೆ. ಇಂದು ಜಗತ್ತಿನ ಯಾವ ಸಂಗತಿಯೂ ಅವಳ ಕೈಗೆಟುಕದಷ್ಟು ದೂರದಲ್ಲಿ ಇಲ್ಲ. ಇವಳಿಗೆ ಖಂಡಿತವಾಗಿಯೂ 'ಮಹಿಳಾ ದಿನಾಚರಣೆ'ಯ ಪ್ರತ್ಯೇಕತೆ ಅವಶ್ಯಕತೆಯೂ ಇಲ್ಲ, ಅನಿವಾರ್ಯವೂ ಅಲ್ಲ.

***

ಆದರೆ ಸಂಕಟದ ಸಂಗತಿಯೆಂದರೆ ಮೇಲೆ ಹೇಳಿದ ಎಲ್ಲ ಬಗೆಯ ಹೆಣ್ಣುಮಕ್ಕಳು ಒಳಗೊಳ್ಳುವುದು ಕೇವಲ ೫% ನಷ್ಟು ಮಹಿಳಾ ಜನಸಂಖ್ಯೆಯನ್ನು ಮಾತ್ರ. ಉಳಿದ ಹೆಣ್ಣುಮಕ್ಕಳು ಇಂದಿಗೂ ಮನೆಯಿಂದ ಹೊರಗೆ ಹೆಜ್ಜೆಯಿಡಲು ಮನೆಯವರ ಮರ್ಜಿ ಕಾಯುತ್ತಾರೆ. ಎಷ್ಟೋ ಆಫೀಸುಗಳಲ್ಲಿ ವೈಯಕ್ತಿಕ ಹಿಂಸೆಯನ್ನು ಮೌನವಾಗಿ ಅನುಭವಿಸುತ್ತಿದ್ದಾರೆ, ಹೆಣ್ಣು ಎಂಬ ಒಂದೇ ಕಾರಣಕ್ಕೆ 'ಯಾರಿಗೆ ಬೇಕ್ರಿ ರಗಳೆ' ಎನ್ನಿಸಿಕೊಂಡು ಎಷ್ಟೋ ಇಂಟರ್ವ್ಯೂಗಳಲ್ಲಿ ಅನುತ್ತೀರ್ಣರಾಗುತ್ತಿದ್ದಾರೆ. ಒಂದೇ ಕೊಡ ನೀರಿನ ಸಲುವಾಗಿ ಆರು ಮೈಲಿ ನಡೆದೇ ಜೀವ ಸವೆಸುವವರಿದ್ದಾರೆ, ಸ್ವಂತ ಹೊಟ್ಟೆಯ ಕುಡಿಗಳನ್ನು ವರ್ಷಾನುಗಟ್ಟಲೆ ನೋಡಲಾರದೇ ಬತ್ತಿದ ಕಣ್ಣಳಲ್ಲಿ ಕಾಣದ ಬಂಧುಗಳ ಬರುವಿಕೆಗಾಗಿ ಕಾಯುತ್ತಿರುವ ಜೈಲು ಹಕ್ಕಿಗಳಿದ್ದಾರೆ, ಸಂಜೆಯಾಗುತ್ತಲೇ ಎಬ್ಬಿಸಿಕೊಂಡು ಆರಿದ ತುಟಿ- ಕೆನ್ನೆಗಳಿಗೆ ರಂಗು ಬಳಿದುಕೊಂಡು ಫೇರ್ ಅಂಡ್ ಲವ್ಲಿಯನ್ನೇ ಕೂದಲಿಗೂ ಹಚ್ಚಿಕೊಂಡು ಸೆಟ್ ಮಾಡುತ್ತ ಕಣ್ಣಿನ ಸನ್ನೆಗಳನ್ನು ತನ್ನದೇ ವೃತ್ತಿಯ ಹಿರಿಯರಿಂದ ಹೊಸದಾಗಿ ಕಲಿಯುತ್ತಿರುವ ಹದಿನೈದು ವರುಷದ ತಂಗಿಯರೂ ಇಲ್ಲೇ, ಇದೇ ಜಗತ್ತಿನಲ್ಲಿ, ನಮ್ಮ ಕಣ್ಣಳತೆಯಿಂದ ತುಸುವೇ ಮರೆಯಲ್ಲಿ, ಕತ್ತಲಿನಲ್ಲಿ ಇದ್ದಾರೆ. ಅವರ ಕಷ್ಟಗಳನ್ನು ತುಸುವಾದರೂ ದೂರಮಾಡಲು, ಅವರ ಅಸಹಾಯಕತೆಯನ್ನು ಚೂರಾದರೂ ಹೊಡೆದೋಡಿಸಲು, ಅವರ ಬದುಕಿನಲ್ಲಿ ಬೇರೆ ಬಣ್ಣಗಳೂ ಇವೆ ಅಂತ ಸಮಾಜಕ್ಕೆ ಮತ್ತು ಸ್ವತಃ ಅವರಿಗೇ ತೋರಿಸಿಕೊಡಲು ಮಹಿಳಾ ದಿನಾಚರಣೆ ಎಂಬ ಪ್ರತ್ಯೇಕವಾದ ಆಚರಣೆ ಖಂಡಿತ ಬೇಕು. ಇದೊಂದು ದಿನವಾದರೂ ಒಟ್ಟಿಗೆ ಕುಳಿತು ಕತ್ತಲಲ್ಲಿರುವ ಈ ಗೆಳತಿಯರ ಸೌಖ್ಯಕ್ಕಾಗಿ ತುಸು ಸಮಯ ವ್ಯಯಿಸಬೇಕು, ವರ್ಷಪೂರ್ತಿ ಅವರ ಹಕ್ಕುಗಳಿಗಾಗಿ ಜಾಗೃತಿ ಮೂಡಿಸಬೇಕು ಎಂಬುದೇ ನನ್ನ ನಂಬಿಕೆ.



## ಮಿನಿ ಕಥೆ

### ಆತನೂ .... ಆಕೆಯೂ .....



ಸರಿತ ನವಲಿ

**ಆತ :**

ಅಂದು 'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ'ಯ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಬಹಳ ಸಂತೋಷದಲ್ಲಿದ್ದ. ಯಶಸ್ವೀ ಚಲನಚಿತ್ರ ನಿರ್ದೇಶಕನಾದ ಆತನ ಹೆಚ್ಚಿನ ಚಲನಚಿತ್ರಗಳು ಮಹಿಳಾ ಸ್ವಾವಲಂಬನೆ - ಸಮಾನತೆ, ಮಹಿಳೆ ಮುಖ್ಯ ಪಾತ್ರ ವಹಿಸಿ ಸ್ತ್ರೀ ಶೋಷಣೆಯ ವಿರುದ್ಧ ಹೋರಾಡಿ ಯಶಸ್ಸನ್ನು ಗಳಿಸುವ ಕಥೆಗಳನ್ನು ಬಿಂಬಿಸಿದ್ದವು. ಅನೇಕ ಪುರಸ್ಕಾರಗಳನ್ನು ಪಡೆದಿದ್ದ ಆತ ಅಂದಿನ ಸಮಾರಂಭದಲ್ಲಿಯೂ ಆ ಎಲ್ಲ ವಿಷಯಗಳನ್ನೇ ಗಂಟೆಗಟ್ಟಲೆ ಮಾತನಾಡಿ ಅಲ್ಲಿ ಸೇರಿದ್ದ ಸಭಿಕರಿಂದ ಚಪ್ಪಾಳೆ, ಪ್ರಶಂಸೆ ಗಳಿಸಿದ್ದ.

**ಆಕೆ :**

ಅಂದು 'ಮಹಿಳಾ ಪೊಲೀಸ್ ಠಾಣೆ' ಯಲ್ಲಿ ದೂರು ಸಲ್ಲಿಸಲು ಬೆಂಚಿನ ಮೇಲೆ ಕುಳಿತಿದ್ದಳು. ತುಂಬಾ ದುಃಖದಲ್ಲಿದ್ದಳು. ಹಲವಾರು ವರುಷಗಳ ವೈವಾಹಿಕ ಜೀವನದಲ್ಲಿ ಪತಿಯಿಂದ ಹಿಂಸೆಗೊಳಗಾಗಿ, ಶೋಷಿತಗೊಂಡು ನೊಂದಿದ್ದಳು. ಹೆತ್ತವರ ಮನನೋಯಿಸದೆ, ಮಕ್ಕಳ ಜೀವನದ ಕಾಳಜಿವಹಿಸಿ ತನ್ನೆಲ್ಲ ನೋವುಗಳನ್ನು ನುಂಗಿ ಬದುಕಿದ್ದಳು. ಅಂದು ಎಲ್ಲಿಂದಲೋ 'ಪ್ರೇರಣೆ' ಪಡೆದಂತಿದ್ದ ಆಕೆ ತನ್ನ ಬದುಕಿನ ಚಿತ್ರಣವನ್ನು ತೆರೆದಿಟ್ಟಾಗ ಪೊಲೀಸ್ ಠಾಣೆಯಲ್ಲಿನ ಎಲ್ಲರ ಕಣ್ಣಲ್ಲಿ ನೀರು ತುಂಬಿತ್ತು.

* * * * *

ಆತನ ಫೋನ್ ರಿಂಗಣಿಸಿದಾಗ, ವೇದಿಕೆಯಿಂದ ಪಕ್ಕಕ್ಕೆ ಸರಿದು ಮಾತನಾಡಿದ. ಗಾಬರಿಗೊಂಡು, ಬೆವೆತುಹೋಗಿ ಅಲ್ಲೇ ಹತ್ತಿರದಲ್ಲಿದ್ದ ಕುರ್ಚಿಯಲ್ಲಿ ಕುಸಿದು ಕುಳಿತ ಆತನ ಕಣ್ಣ ಮುಂದೆ ತಾನೇ ಕಥೆ ಬರೆದು, ನಿರ್ದೇಶಿಸಿದ್ದ 'ಪ್ರೇರಣೆ' ಚಲನಚಿತ್ರದ ದೃಶ್ಯಗಳು ಸುಳಿದು ಹೋದವು....

## ನಾವು ನೋಡಿದ ಸಿನೆಮಾ








Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ




## ನಾನು ಓದಿದ ಪುಸ್ತಕ

ದಾಶರಥಿ ಘಟ್ಟು

*......"ಜೀವನವೆಂಬ ಗದ್ದೆಯನ್ನು ಕರ್ತವ್ಯವೆಂಬ ನೇಗಿಲಿನಿಂದ ಉಳಬೇಕು.ಬೆಳೆದು ಬಂದ ಪೈರನ್ನು ನಿಷ್ಕಾಮವೆಂಬ ಕುಡುಗೋಲಿಂದ ಕೊಯ್ಯಬೇಕು;ಬಂದ ಕಾಳನ್ನು ಸೇವೆ ಎಂಬ ಒನಕೆಯಿಂದ ಕುಟ್ಟಬೇಕು.ದಾನವೆಂಬ ಗೆರಸೆಯಿಂದ ......"*

**ಬಾ**ಗಲೋಡಿ ದೇವರಾಯರ 'ಸಮಗ್ರ ಕಥೆಗಳು' ಪುಸ್ತಕವನ್ನು ಇತ್ತೀಚೆಗೆ ಓದಿದೆ. ೧೯೮೫ ರಲ್ಲಿ ತಮ್ಮ ೫೮ನೇ ವಯಸ್ಸಿನಲ್ಲಿ ಕಾಲವಾದ ದೇವರಾಯರು ಮಾಸ್ತಿಯವರ ಕಾಲದಲ್ಲಿ ಕಥೆ ಬರೆದವರೆಂದೂ, ಮಾಸ್ತಿಯವರೇ ದೇವರಾಯರ ಮೊದಲ ಕಥಾ ಸಂಕಲವನ್ನು ೧೯೪೮ರಲ್ಲಿ (ದೇವರಾಯರ ೨೧ನೇ ವಯಸ್ಸು) ಪ್ರಕಟಿಸಿದರೆಂದೂ ಪುಸ್ತಕದ ಪ್ರಸ್ತಾವನೆಯಲ್ಲಿ ಕೆ. ಸತ್ಯನಾರಾಯಣರವರು ಹೇಳುತ್ತಾರೆ. ಮಾಸ್ತಿಯವರೇ ತಾವು ಪ್ರಕಟಿಸಿದ ಸಂಕಲನದ ಮುನ್ನುಡಿಯಲ್ಲಿ "ಸಣ್ಣ ಕತೆಗಳು ತಕ್ಕಷ್ಟು ಸಂಖ್ಯೆಯಲ್ಲಿ ಬರುತ್ತಿರುವ ಈ ದಿನದಲ್ಲಿ ಶ್ರೀ ಬಾಗಲೋಡಿ ದೇವರಾಯರ ಕತೆಗಳು ಅವರದೇ ಆದ ಒಂದು ವಸ್ತುವೈಶಿಷ್ಟ್ಯ, ಕಥನ ಪದ್ಧತಿ, ಉಚಿತಶೈಲಿ, ರಸಸಿದ್ಧಿಗಳಿಂದ ನಿರಾಯಾಸವಾಗಿ ಒಂದು ಮೇಲ್ಮಟ್ಟವನ್ನು ಮುಟ್ಟುತ್ತವೆ" ಎಂದು ಬರೆದಿದ್ದಾರೆ.




ಈ ಕಥಾ ಸಂಕಲನದಲ್ಲಿ ಅವರು ಬರೆದ ಎಲ್ಲ ಇಪ್ಪತ್ತಾರು ಕಥೆಗಳಿವೆ. ಈ ಎಲ್ಲ ಕಥೆಗಳೂ ಮತ್ತೆ ಮತ್ತೆ ಓದಬೇಕೆನಿಸುವಂತಹ ಕಥೆಗಳೇ. ಪ್ರತಿ ಕಥೆಯನ್ನು ಓದಿ ಮುಗಿಸಿದಾಗಲೂ ಈ ಕಥೆ, ವಸ್ತು ಮತ್ತು ಹಂದರಕ್ಕಿಂತ ಉದಾತ್ತವಾದುದೇನನ್ನೋ ಹೇಳುತ್ತದೆ ಎಂಬ ಭಾವನೆ ನಮ್ಮಲ್ಲಿ ಮೂಡಿ, ಅದರ ಬಗ್ಗೆ ಯೋಚಿಸುವಂತೆ ಮಾಡುತ್ತದೆ. ಬಾಗಲೋಡಿಯವರೇ ತಮ್ಮ ಒಂದು ಸಂಕಲನದಲ್ಲಿ ಬರೆದಿರುವಂತೆ "ಈ ಕಥೆಗಳನ್ನು ಓದುಗರು ಆಳವಾದ ಭಾವದಿಂದ, ದಾರ್ಶನಿಕ ದೃಷ್ಟಿಯಿಂದ, ವಿಚಾರದಿಂದ ಓದಿದರೆ ಕೃತಜ್ಞನಾಗುವೆನು. ನನ್ನ ಕಥೆಗಳೆಲ್ಲವೂ ದೇವರು-ಧರ್ಮ-ಮನುಷ್ಯ-ಜೀವನ-ಮರಣ ಎಂಬ ಐದು ಪರಮತತ್ವಗಳ ಆಧಾರದ ಮೇಲೆ ನಿಂತಿರುವುವು ಎಂಬುದನ್ನು ದಯವಿಟ್ಟು ಓದುಗರು ಗಮನಿಸಬೇಕು."

ನಾನು ಈ ಸಂಕಲನದಲ್ಲಿ ಮತ್ತೆ ಮತ್ತೆ ಓದಿದ ಕಥೆ "ಪವಾಡ ಪುರುಷ". ಇದು 'ಸರ್ವಾರ್ಥ ಸಿದ್ಧಿ' ಎಂಬ ಬೌದ್ಧ ಭಿಕ್ಕುವಿನ ಕಥೆ. "ಸರ್ವಾರ್ಥ ಸಿದ್ಧಿ ರುಗ್ಣ ಶಯ್ಯೆಯಲ್ಲಿ ಶಾಂತನಾಗಿ ಒರಗಿ, ತನ್ನ ನಿರ್ವಾಣ ಕಾಲದ ನಿರೀಕ್ಷೆಯಲ್ಲಿರುವ ದೃಶ್ಯದೊಂದಿಗೆ ಕಥೆ ಪ್ರಾರಂಭವಾಗುತ್ತದೆ. ಭಿಕ್ಕುವಿನ ಪಾದಮೂಲದಲ್ಲಿ ಕೌಶಾಂಬಿಯ ರಾಜನಾದ ಶಾಂತವರ್ಮನೂ, ಸುತ್ತಲೂ ಅವನ ಶಿಷ್ಯರೂ, ನೆರೆಹೊರೆಯ ವಿಹಾರಗಳ ಭಿಕ್ಕುಗಳೂ, ನಗರಶ್ರೇಷ್ಠಿಗಳೂ, ಪುರವಾಸಿಗಳೂ, ಸುತ್ತಮುತ್ತಲಿನ ರಾಜ್ಯಗಳ ರಾಜಕುವರರೂ, ರಾಯಭಾರಿಗಳೂ, ಭಿಕ್ಷುಣಿಯರ ವಿಹಾರದ ಅಧ್ಯಕ್ಷೆ ಅಪರಾಜಿತೆ ಮತ್ತು ಇತರ ಪ್ರತಿಷ್ಠಿತರೂ ಕಣ್ಣೀರುದುಂಬಿ, ಕೈ ಮುಗಿದು, ನೀರವ ವದನರಾಗಿ ನೆರೆದಿದ್ದಾರೆ."

ಸನ್ನಿಹಿತವಾದ ಭಿಕ್ಕುವಿನ ಮರಣಕಾಲವನ್ನು ದೇವರಾಯರು ವಿವರಿಸಿರುವ ರೀತಿ ನೋಡಿ, "ಈ ತೆರನ ಮರಣ ಮರಣವಲ್ಲ. ಇದು ಮಹೋತ್ಸವ. ಇಂತಹ ಮೃತ್ಯುವು ಜೀವನ ನಾಟಕದ ಮಂಗಳ. ಆಯಸ್ಸು ತುಂಬಿ ಸಾಯುವುದರಲ್ಲಿ ಏನೂ ವಿಶೇಷವಿಲ್ಲ. ನರಕೀಟಗಳೂ ಕ್ರಿಮಿಕೀಟಗಳೂ ಹೀಗೆಯೇ ಸಾಯುವವು. ಆದರೆ ಶ್ರೇಯಸ್ಸು ತುಂಬಿ ಅನಂತರ ಸಾಯುವುದು ವಿರಳ. ಕೀರ್ತಿಪುಂಜನಾಗಿ, ಸೂರ್ಯನು ಪಶ್ಚಿಮ ದಿಗಂತದಲ್ಲಿ ಅಮೋಘ ಕಾಂತಿಯಿಂದ ಶೋಭಿತನಾಗಿ ಕಣ್ಮರೆಯಾಗುವಂತೆ ಕಣ್ಮರೆಯಾಗುವುದು ಎಲ್ಲರ ಭಾಗ್ಯವಲ್ಲ. ಇದು ಪೂಜ್ಯನಾದ ಸರ್ವಾರ್ಥ ಸಿದ್ಧಿಗೆ ಲಭಿಸಿತ್ತು. ಸಹಸ್ರಾರು ಜನರಿಂದ 'ತಂದೆ' ಎಂದೆನ್ನಿಸಿಕೊಂಡು, ಸ್ತುತ್ಯನಾಗಿ, ಪ್ರಾತಃಸ್ಮರಣೀಯನಾಗಿ, 'ತ್ರಿಪಿಟಕಾಚಾರ್ಯ', 'ಅಹಿಂಸಾಧರ್ಮ ಪ್ರದೀಪ' ಎಂದು ಖ್ಯಾತಿಪಡೆದು, ರಾಜಮಹಾರಾಜರುಗಳಿಂದಲೂ, ಜನಸ್ತೋಮದಿಂದಲೂ ವಂದಿತನಾಗಿ, ನಗರದಲ್ಲೆಲ್ಲ ತನ್ನ ವರ್ಚಸ್ಸನ್ನೂ ಸಾತ್ವಿಕ ಅಧಿಕಾರವನ್ನೂ ಸ್ಥಾಪಿಸುವುದು ಎಲ್ಲ ಭಿಕ್ಕುಗಳಿಂದ, ಕ್ಷಪಣಕರಿಂದ, ಸನ್ಯಾಸಿಗಳಿಂದ ಆಗುವ ಮಾತೆ?"

ಭಿಕ್ಕು ಸರ್ವಾರ್ಥ ಸಿದ್ಧಿ ಅಸದೃಶ ಅಹಿಂಸಾ ಧರ್ಮನಿಷ್ಠ.ಚಿಕ್ಕ ಪ್ರಾಯದವನಾದ ರಾಜಾ ಶಾಂತವರ್ಮನಿಗೆ ಗುರು, ಮಂತ್ರಿ ಮಾತ್ರವಲ್ಲದೆ, ತಂದೆಯಂತೆ ನೋಡಿಕೊಂಡು ರಾಜ್ಯಭಾರದ ಕ್ರಮವನ್ನು ಅವನಿಗೆ ಕಲಿಸುವುದಲ್ಲದೆ, ಆಡಳಿತ ಸೂತ್ರಗಳನ್ನು ತನ್ನ ಕೈಯಲ್ಲಿಟ್ಟುಕೊಂಡು ರಾಜ್ಯವನ್ನು ಶಾಂತಿ, ಸುಭಿಕ್ಷೆ ಮತ್ತು ನ್ಯಾಯಗಳಿಂದ ಪಾಲಿಸಿದವನು. ಇವನ ಸಾತ್ವಿಕ ವರ್ಚಸ್ಸಿನಿಂದ ಇಡೀ ಕೌಶಾಂಬಿಯಲ್ಲೇ ಹಿಂಸೆ, ಪಾಶವೀಯತೆ, ಕ್ರೌರ್ಯ, ನರಬಲಿ ಮತ್ತು ಪಶುಬಲಿಗಳು ಹೇಳಹೆಸರಿಲ್ಲದಂತಾಗಿತ್ತು.ಅನೇಕ ಸ್ವದೇಶೀ ಮತ್ತು ವಿದೇಶೀ ಪ್ರವಾಸಿಗರು ಕೌಶಾಂಬಿಯನ್ನು ಸಂದರ್ಶಿಸಿ ಅಲ್ಲಿನ ಅಹಿಂಸೆ, ಸುಭಿಕ್ಷೆ, ಸಂತೋಷ ಮತ್ತು ನ್ಯಾಯಪರತೆಗಳನ್ನು ಕೊಂಡಾಡಿದ್ದಾರೆ.ಕಥೆಯಲ್ಲಿ ಉದ್ಧರಿಸಿದಂತೆ ದಕ್ಷಿಣ ದೇಶದ ಚೆಂಗಲ್ವರಾಯನೆಂಬುವವನು ಕೌಶಾಂಬಿಯ ಸುಭಿಕ್ಷ ಮತ್ತು ಸಮೃದ್ಧಿಗಳನ್ನು ದಾಖಲಿಸುತ್ತಾ, ".... ರಾಜಗುರು ಸರ್ವಾರ್ಥ ಸಿದ್ಧಿಯಿಂದ ಈ ದೇಶಕ್ಕೆ ಧರ್ಮ, ಅರ್ಥ, ಕಾಮ, ಮೋಕ್ಷಗಳೆಲ್ಲವೂ ಸಿದ್ಧಿಸಿವೆ" ಎಂದು ಬರೆಯುತ್ತಾನೆ.

ರಾಜ್ಯದ ಇಂತಹ ಸುಭಿಕ್ಷೆಗೆ ಕಾರಣನಾದ ಸನ್ಯಾಸಿ ಸರ್ವಾರ್ಥ ಸಿದ್ಧಿ ಉಜ್ಜಯಿನಿಯ ರಾಜಮನೆತನಕ್ಕೆ ಸೇರಿದ ಶ್ರೇಷ್ಠ ಕ್ಷತ್ರಿಯ ವಂಶಜನು.ಅರಸರ ದಳಪತಿಗಳಲ್ಲೊಬ್ಬನಾಗಿದ್ದವನು.ಪ್ರಚಂಡ ಬಾಹು ಎಂಬ ಹೆಸರಿನ ಇವನು ಅನೇಕ ಯುದ್ಧಗಳಲ್ಲಿ ಪರಾಕ್ರಮದಿಂದ ಕಾದಾಡಿದವನು.ಆದರೆ ಅಪ್ರತಿಮ ಭುಜಬಲಿಯಾದ ಈತನು ಯೋಧವೃತ್ತಿಯನ್ನು ತ್ಯಜಿಸಿ, ದೀಕ್ಷಾಬದ್ಧನೂ, ಧರ್ಮಕಿಂಕರನೂ ಆಗಿ ಸರ್ವಾರ್ಥ ಸಿದ್ಧಿಯಾದನು.ಈತನಿಗೆ ದೀಕ್ಷೆ ಕೊಟ್ಟ ಗುರು ಭಿಕ್ಕು ಸುಬದ್ಧನು ಶಾಕ್ಯ ಮುನಿ ಭಗವಾನ್ ಬುದ್ಧದೇವರ ಕೊನೆಯ ಶಿಷ್ಯ.ಕೌಶಾಂಬಿಯ ಹಿಂದಿನ ರಾಜ ರುದ್ರದಮನಾಂಕಿತ ಶೋಣಿಕ ತೇತುವು ಅತ್ಯಾಚಾರಿಯೂ ನಿರಂಕುಶನೂ ಅನೀತಿಪರನೂ ಆಗಿದ್ದನು. ರಾಜ್ಯದಲ್ಲಿ ಪಶುಬಲಿ, ನರಬಲಿಗಳಿಗೆ ಮೊದಲು ಮಾಡಿದನು.ದುರ್ಮಾರ್ಗರ ಜಾತ್ರೆಯನ್ನು ಸೇರಿಸಿಕೊಂಡು ಆಮೋದ-ಪ್ರಮೋದ, ಹಿಂಸೆ, ಅತ್ಯಾಚಾರಗಳಲ್ಲಿ ನಿರತನಾದನು.ವಿಹಾರದ ವಿಹಾರಗಳೆಷ್ಟೋ ನೆಲಸಮವಾದವು.ಆದರೆ ಸರ್ವಾರ್ಥ ಸಿದ್ಧಿಯು ಅತಿ ಪ್ರತಿಷ್ಠನೂ, ಬಲಿಷ್ಠನಾದ ಉಜ್ಜಯಿನಿಯ ರಾಜನ ಮಿತ್ರನೂ ಆಗಿದ್ದರಿಂದ ಅವನ ಗೊಡವೆಗೆ ಹೋಗಿರಲಿಲ್ಲ. ಶೋಣಿಕ ತೇತು ಬರಿಯ ಧರ್ಮಲಂಡನಲ್ಲದೆ ಪ್ರಜಾಪೀಡಕನೂ ಆಗಿದ್ದನು. "ಯಾವೊಬ್ಬ ಯುವಸ್ತ್ರೀಯ ಮಾನ, ಗರತಿಯ ಪಾತಿವ್ರತ್ಯ, ಸೆಟ್ಟಿಯ ಹಣಕಾಸು, ಒಕ್ಕಲಿಗನ ಗೋಧಾನ್ಯ-ಯಾವುದೂ ಈ ಮದಾಂಧನ ಲೋಭ ಲಾಲಸೆಗಳಿಂದ ಉಳಿಯುವುದು ದುಷ್ಕರವಾಯಿತು". "ಸಜ್ಜನರ ಆರ್ತನಾದ ಗಗನಕ್ಕೇರಿತು. ಖಳರಿಗೆ, ನೀಚರಿಗೆ, ಹೋಳಿಯ ಹಬ್ಬವಾಯಿತು".

(ಮುಂದಿನ ಪುಟಕ್ಕೆ..)


Copyright © KCO – Brindavana

ಸಂಚಿಕೆ
೦೯
ಮಾರ್ಚ್, ೨೦೧೭



(..ಹಿಂದಿನ ಪುಟದಿಂದ)

ಇಂತಹ ದಿನಗಳಲ್ಲೇ ಒಂದು ದಿನ ಭಿಕ್ಷುಣಿಯರ ವಿಹಾರದ ಅಧ್ಯಕ್ಷೆಯಾದ ಅಪರಾಜಿತೆಯು ಸರ್ವಾರ್ಥ ಸಿದ್ಧಿಯ ಬಳಿಗೆ ಬಂದು "ವಿಹಾರಗಳಲ್ಲಿ ಪಶುಬಲಿಯನ್ನು ಮಾಡಬೇಕೆಂಬ ಕಟ್ಟಾಜ್ಞೆಯಂತೆ.ಅವಲೋಕಿತೇಶ್ವರನೆ!ಎಷ್ಟೊಂದು ನಾವು ಸಹಿಸಬೇಕು?" ಎಂದು ಅತ್ತಳಂತೆ. "ಬುದ್ಧಕಿಂಕರನಾದ,ಅಹಿಂಸಾಧರ್ಮ ದೀಕ್ಷಾಬದ್ಧನಾದ, ವಿನಯಾನುಸಾರಿಯಾದ ಭಿಕ್ಕು ಏನು ಮಾಡಿಯಾನು? ಗೃಹಸ್ಥ ಜೀವನದಲ್ಲಿರುವ ಕಾಲವಾಗಿದ್ದಿದ್ದರೆ ತನ್ನ ಬಾಹುಬಲ, ಉಜ್ಜಯಿನಿಯ ಅರಸರ ಬೆಂಬಲದಿಂದ ಈ ನೀಚರನ್ನು ನಿರ್ನಾಮ ಮಾಡುತ್ತಿದ್ದನು".

ಹೀಗಿರುವಾಗ ಒಂದು ದಿನ ಭಿಕ್ಕು ಸರ್ವಾರ್ಥ ಸಿದ್ಧಿಯು ಧರ್ಮೋಪದೇಶವನ್ನು ಕೇಳಲು ರುದ್ರದಮನನನ್ನು ವಿಹಾರಕ್ಕೆ ಆಹ್ವಾನಿಸಿರುವನೆಂದೂ,ಆ ಆಹ್ವಾನವನ್ನು ರಾಜನು ಸ್ವೀಕರಿಸಿರುವನೆಂದೂ ವಾರ್ತೆ ಹಬ್ಬಿತು. ಜನ ಈ ಸುದ್ದಿಯ ಪರಿಣಾಮದ ಬಗ್ಗೆ ಯಾವುದೇ ವಿಶ್ವಾಸವನ್ನಿಟ್ಟುಕೊಳ್ಳಲಿಲ್ಲ. ಮೈಯ್ಯೆಲ್ಲ ವಿಷ ತುಂಬಿದ ಹಾವು ಸಂತನಾಗುವುದು ಸಾಧ್ಯವೇ? ಈ ದುಷ್ಟನ ಗೋಜಿಗೆ ಬಡ ಸನ್ಯಾಸಿ ಕೈ ಸುಡಿಸಕೊಳ್ಳದಿದ್ದರೆ ಸಾಕೆಂದು ಜನ ಮಾತನಾಡಿಕೊಂಡರು. ಆದರೆ ಜನ ಹೀಗೆ ಗುಜುಗುಜು ಎನ್ನುತ್ತಿರುವಾಗಲೇ ಪವಾಡ ಸಂಭವಿಸಿತು. "ಅತಿ ಕಠಿಣ ಲೋಹವೇ ಅಗ್ನಿಯ ಜ್ವಾಲೆಗೆ ಭಸ್ಮೀಭೂತವಾಗುವಂತೆ, ತಥಾಗತನ ಧರ್ಮಪ್ರಭೆ ಅಧರ್ಮ ತಮಸ್ಸನ್ನು ಉಚ್ಚಾಟನೆಗೊಳಿಸಿತು. ಘೋರ ಪಾಪಿಯೂ, ತಾಮಸಿಯೂ ಅದಾತನ ಮೃಗತೃಷ್ಣೆಯಿಂದ ತುಂಬಿದ ಹೃದಯವು ಧರ್ಮಅಗ್ನಿಯಲ್ಲಿ ಜ್ವಲಿತವಾಗಿ ಶುದ್ಧವಾಗಿ ವಿಭೂತಿಯಾಯಿತು". ಭಿಕ್ಕು ಪವಾಡವನ್ನು ಮಾಡಿ ಪವಾಡ ಪುರುಷನೆನಿಸಿದ. "ಯಾವ ಮುಹೂರ್ತದಲ್ಲಿ ಈ ಅನಿರ್ವಚನೀಯವಾದ ಪವಾಡ ನಡೆಯಿತೋ ಆ ಮುಹೂರ್ತಾನಂತರ ಶೋಣಿತಕೇತುವಿನ ಮುಖವನ್ನು ಯಾರೂ ಕಾಣಲಿಲ್ಲ". ಅವನು ತನ್ನ ಶೇಷಾಯುಷ್ಯವನ್ನಿಡೀ ಅಜ್ಞಾತವಾಸದಲ್ಲಿ ಕಳೆದನು.ನಂತರ ಅವನ ಅಂತಿಮ ಅಪೇಕ್ಷೆಯಂತೆ ಅವನ ಮಗ ಅಹವಕೇತುವನ್ನು 'ಶಾಂತಿವರ್ಮ'ನೆಂಬ ಹೆಸರನ್ನಿಟ್ಟು ಪಟ್ಟಕ್ಕೇರಿಸಿದರು. ಶಾಂತಿವರ್ಮನು ತೀರಾ ಹಸುಳೆಯಾದ್ದರಿಂದ ಸರ್ವಾರ್ಥ ಸಿದ್ಧಿಯೇ ಗತ್ಯಂತರವಿಲ್ಲದೆ ಮಗುವಿನ ರಕ್ಷಕನಾಗಿ ರಾಜ್ಯಭಾರದ ಸೂತ್ರಗಳನ್ನು ತನ್ನ ಕೈಯಲ್ಲಿಟ್ಟುಕೊಳ್ಳಬೇಕಾಯಿಯು."ಈತನ ಕಾಲದಲ್ಲಿ ಕೌಶಾಂಬಿಯು ಉನ್ನತಿಯ ಪರಾಕಾಷ್ಠೆಯನ್ನೇರಿತು. ಶಾಂತಿ, ಸದ್ಧರ್ಮ, ಸುಭಿಕ್ಷೆ, ಸಮೃದ್ಧಿಗಳು ಬಂದು ನೆರೆದವು." ಪ್ರಜೆಗಳನ್ನು ಮಕ್ಕಳಂತೆ ಪಾಲಿಸಿ, ಕೀರ್ತಿಪುಂಜನಾದ ಸರ್ವಾರ್ಥ ಸಿದ್ಧಿ ಇಂದು ಕೀರ್ತಿಶರೀರಿಯಾಗುವುದರಲ್ಲಿದ್ದನು".

ಪೂಜ್ಯಪಾದನೂ ಅರ್ಹತನೂ ಅಹಿಂಸಾಧರ್ಮ ಪ್ರದೀಪನೂ ಆದ ಸರ್ವಾರ್ಥ ಸಿದ್ಧಿಯು ಕಣ್ತೆರೆದು ನೆರೆದಿದ್ದ ಭದ್ರ ಗಣದೆಡೆಗೆ ತಿರುಗಿ, ತನ್ನ ಪ್ರಸ್ಥಾನ ಕಾಲ ಸನ್ನಿಹಿತವಾಗಿರುವುದರಿಂದ, ಕೊನೆಯ ಉಪದೇಶವನ್ನು 'ಮನಸ್ಸಿಟ್ಟು' ಕೇಳಿ ತಮ್ಮ ಸ್ವಸ್ಥಾನಗಳಿಗೆ ಹಿಂದಿರುಗುವಂತೆ ಸೂಚಿಸುತ್ತಾನೆ.ಎಲ್ಲಾ ಧರ್ಮಗಳ ಸಾರವೇ ಮೂರ್ತಿವೆತ್ತಂತಿರುವ ಆ ಉಪದೇಶವೇ ಎಷ್ಟು ಅಮೋಘವಾಗಿದೆ ನೋಡಿ. "ಜೀವನವೆಂಬ ಗದ್ದೆಯನ್ನು ಕರ್ತವ್ಯವೆಂಬ ನೇಗಿಲಿನಿಂದ ಉಳಬೇಕು. ಬೆಳೆದು ಬಂದ ಪೈರನ್ನು ನಿಷ್ಕಾಮವೆಂಬ ಕುಡುಗೋಲಿಂದ ಕೊಯ್ಯಬೇಕು;ಬಂದ ಕಾಳನ್ನು ಸೇವೆ ಎಂಬ ಒನಕೆಯಿಂದ ಕುಟ್ಟಬೇಕು.ದಾನವೆಂಬ ಗೆರೆಸೆಯಿಂದ ಗೆರೆಸಿ, ಸ್ವಾರ್ಥವೆಂಬ ಜಳ್ಳು ಉಮಿ ಹೊಟ್ಟುಗಳನ್ನು ಕಳೆಯಬೇಕು;ಎಂದರೆ ಕಣಜ ತುಂಬುವುದು. ಶಿಷ್ಯರೆ, ವಿನಯಾನುಸಾರವಾಗಿ ಧರ್ಮಾನುಷ್ಠಾನಗಳನ್ನು ಮಾಡುತ್ತಿರುವುದು ಮಾತ್ರವಲ್ಲದೆ, ಲೋಕಕಲ್ಯಾಣಕ್ಕಾಗಿ ನೇಮದಿಂದ ಜೀವವನ್ನು ಸವೆಯಿರಿ. ಇನ್ನು ಮುಂದೆ ಶಾರ್ಗರವನು ನಿಮ್ಮ ಅಧ್ಯಕ್ಷನು. ಅಮಿತಾಭನ ದಯೆಯಿಂದ ನಿಮಗೆ ಅರ್ಹತ್ ಪದವಿ ಲಭಿಸಲಿ. ಓಂ ನಮೋ ಭಗವತೇ ಬುದ್ಧಾಯ" ಎಂದು ಬೀಳ್ಕೊಟ್ಟನು.

ಎಲ್ಲರೂ ನಿರ್ಗಮಿಸುತ್ತಿರುವಾಗ ಸರ್ವಾರ್ಥ ಸಿದ್ಧಿಯು "ಶಾರ್ಗರವ" ಎಂದು ತನ್ನ ಜ್ಯೇಷ್ಠ ಶಿಷ್ಯನನ್ನು ಕರೆಯುತ್ತಾನೆ. ನಾಳೆ ತನ್ನ ಸ್ಥಾನದಲ್ಲಿ ಇರತಕ್ಕ ಅವನಿಗೆ, ತನ್ನ ಜೀವನದಲ್ಲಿ ಏನಾದರೂ ಸಂದೇಹಾಸ್ಪದ,ಸಂದಿಗ್ಧ ವಿಚಾರ ಕಂಡಿದೆಯೇ ಎಂದು ಕೇಳುತ್ತಾನೆ. ಮುಂದುವರಿಸುತ್ತಾ ಭಿಕ್ಕು ತನ್ನ ಜ್ಯೇಷ್ಠ ಶಿಷ್ಯನಿಗೆ ಶೋಣಿತಕೇತುವಿನ ವಿಷಯದ ಸತ್ಯವೇನೆಂದು ಹೇಳುತ್ತಾನೆ. ಅಪರಾಜಿತೆ ಭಿಕ್ಕುವಿನ ಬಳಿ ಬಂದು ಗೋಳಿಟ್ಟಿದ್ದುದು ರಾಜ ಪ್ರಾಣಿ ಬಲಿಯ ಆಜ್ಞೆ ಮಾಡಿದನೆಂದಲ್ಲ. ಬದಲಾಗಿ ತನ್ನ ಕಾಮತೃಷೆಗಾಗಿ ತನ್ನನ್ನೇ ಕಾಡುತ್ತಿದ್ದಾನೆಂದು.ಭಿಕ್ಕು ನಂತರ,ಕ್ಷತ್ರಿಯನಾದ ರಾಜನು,ಕ್ಷತ್ರಿಯ ವಂಶ ಸಂಜಾತಳೇ ಆದ ಅಪರಾಜಿತೆಯನ್ನು ಬಹಿರಂಗವಾಗಿ ಪಡೆಯುವುದರಿಂದ,ಕ್ಷತ್ರಿಯ ಕುಲದ ಮರ್ಯಾದೆಯೇ ಹೋಗುವುದರಿಂದ,"ಧರ್ಮೋಪದೇಶದ ನೆಪ ಮಾಡಿ" ರಹಸ್ಯವಾಗಿ ತನ್ನ ವಿಹಾರಕ್ಕೆ ಬರಬೇಕೆಂದೂ,ಅಪರಾಜಿತೆಯನ್ನು ಅವನ ತೃಷ್ಣೆಗೆ ಬಲಿಕೊಡಲು ಅಲ್ಲಿ ಕರೆಸಿರುತ್ತೇನೆಂದೂ,".... ನಿನ್ನ ಮೃಗತೃಷ್ಣೆ ಗೌಪ್ಯವಾಗಿ, ರಹಸ್ಯವಾಗಿ ಈಡೇರಲಿ.ನೆಪಕ್ಕೆ ಜನಜಂಗುಳಿಯ ಕಣ್ಣಿಗೆ ಮಣ್ಣೆರಚಲು,'ಧರ್ಮೋಪದೇಶಕ್ಕೆ ಹೋಗುವೆನು' ಎಂದು ಊರಲ್ಲೆಲ್ಲಾ ಸಾರಿ ಇಲ್ಲಿಗೆ ಬಾ. ಒಬ್ಬಂಟಿಗನಾಗಿ ಬಾ. ಬೇರಾವ ಪ್ರಾಣಿಗೂ ನಿನ್ನ ಉದ್ದೇಶ ತಿಳಿಯದಿರಲಿ. .... " ಎಂದು ಮಹಾರಾಜನಿಗೆ ಪತ್ರ ಬರೆದು ತಿಳಿಸಿದೆ ಎನ್ನುತ್ತಾನೆ. ಮುಂದುವರೆಸುತ್ತಾ "...ನಾನು ಹೇಳಿದಂತೆ ಶೋಣಿತಕೇತು ಒಬ್ಬಂಟಿಗನಾಗಿ ಇಲ್ಲಿಗೆ ಬಂದನು.ಕಾಮದ ಮಂಕಿನಿಂದ ಬುದ್ಧಿಭ್ರಂಶವೂ ಆಗಿತ್ತು."

ಕಥೆಯ ಕೊನೆಯನ್ನು ನೋಡಿ

"ಇನ್ನು ಹೆಚ್ಚೇನೂ ಉಳಿದಿಲ್ಲ... ನನ್ನ ಪ್ರಾಣವಾಯು ನಾಭಿಯಲ್ಲಿ ಬಂದು ನಿಂತಿದೆ. ಇನ್ನು ಹೊತ್ತಿಲ್ಲ.... ಏಕಾಕಿಯಾಗಿ ಬಂದ ಆ ದುರಾತ್ಮನನ್ನು ಇದೇ ನನ್ನೀ ಕೈಗಳಿಂದ ನಾನು ಕತ್ತು ಹಿಸುಕಿ ಕೊಂದೆನು. ಪಾಪಭೋಗದಿಂದ ಶಿಥಿಲವಾಗಿದ್ದ ಆ ದೇಹ ನನ್ನ ಕೈಗಳಲ್ಲಿ ಸುಲಭವಾಗಿಯೇ ಮುರಿಯಿತು.... ".

ಶಿಷ್ಯ ಅವಾಕ್ಕಾಗಿ ಸ್ತಂಭೀಭೂತನಾಗಿ ನಿಂತಿದ್ದನು.

"ಒಂದು ಕ್ಷಣ ಕೇಳು.... ಅತಿ ಗಹನವಾದುದನ್ನು ಹೇಳುತ್ತೇನೆ... ಪ್ರಾಣವಾಯು ಕಂಠಗತವಾಗಿದೆ....ನಾನು ಈ ಕಥೆಯನ್ನು ನಿನಗೆ ಹೇಳಿದುದು ಪಶ್ಚಾತ್ತಾಪದಿಂದಲ್ಲ. ಆತ್ಮಲಾಂಛನದಿಂದಲ್ಲ. ಸರ್ವಥಾ ಅಲ್ಲ... ನಿನಗೆ ಕರ್ತವ್ಯಜ್ಞಾನಕ್ಕಿರಲಿ ಎಂದು ಹೇಳಿದ್ದೇನೆ. ನೀನು ನನ್ನ ಉತ್ತರಾಧಿಕಾರಿ. ನಾಳೆ ಸಂಘದ ಭಾರವನ್ನು ಹೊರತಕ್ಕವನು. ನಿನಗೆ ಕರ್ತವ್ಯಜ್ಞಾನಕ್ಕಿರಲಿ ಎಂದು ಹೇಳಿದೆ. ತಿಳಿದಿರಲಿ... ಮುಗಿಯಿತು...ಓಂ ಮಣಿಪದ್ಮೇ.... ". ಪೂಜ್ಯಪಾದನೂ ಅಹಿಂಸಾಧಾರ್ಮ ಪ್ರದೀಪನೂ ಪವಾಡಪುರುಷನೂ ಆದ ಭಿಕ್ಕು ಸರ್ವಾರ್ಥಸಿದ್ಧಿ ನಿರ್ವಾಣವನ್ನೈದಿದನು.

ಅಹಿಂಸಾ ಪರಮೋಧರ್ಮಃ (ಗೀತೆ)

ಪರಿತ್ರಾಣಾಯ ಸಾಧೂನಾಂ, ವಿನಾಶಾಯ ಚ ದುಷ್ಕೃತಾಂ

ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ... " (ಗೀತೆ)



Copyright © KCO – Brindavana



ಉಷ ಕಾರಂತ್



ಟೀ ತೋಟ, ಕಳಸ



ಏರ್ಕಾಡ, ಕೇರಳ



ಸೂರ್ಯಾಸ್ತ, ಮಂಗಳೂರು ಬೀಚ್



ಕನ್ಯಾಕುಮಾರಿ ಬೀಚ್



ನಾವು ನೋಡಿದ ಸಿನಿಮಾ

ರಾಘವೇಂದ್ರ ಕುಂದಲಗುರ್ಕಿ

## ಕಿರಿಕ್ ಪಾರ್ಟಿ ತಂಡದೊಡನೆ ಪಾರ್ಟಿಯೋ ಪಾರ್ಟಿ..!




**ಕ**ನ್ನಡ ಚಲನ ಚಿತ್ರದಲ್ಲಿ ಹೊಸತನ ತುಂಬಿ, ಯುವ ಜನತೆಯ ಕಾಲೇಜು ಜೀವನವನ್ನು ಮೆಲಕುಹಾಕುವಂತೆ ಮಾಡಿದ ಹೊಸ ಚಿತ್ರ ರಕ್ಷಿತ್ ಶೆಟ್ಟಿ - ರಶ್ಮಿಕಾ ಅಭಿನಯದ ರಿಷಬ್ ಶೆಟ್ಟಿ ನಿರ್ದೇಶನದ ಕಿರಿಕ್ ಪಾರ್ಟಿ. ಅಮೇರಿಕದಲ್ಲೂ ಭರ್ಜರಿಯಾಗಿ ತುಂಬಿದ ಗೃಹಗಳಿಗೆ ಪ್ರದರ್ಶಿತವಾದ ಚಿತ್ರ. ಈ ತಂಡದೊಡನೆ ನ್ಯೂಜೆರ್ಸಿಯ ನಾರ್ತ್ ಬ್ರುನ್ಸ್ವಿಕ್ ಚಿತ್ರ ಮಂದಿರದಲ್ಲಿ ಚಿತ್ರ-ಸಂವಾದ ನಡೆಯಿತು .



ಎಲ್ಲ ಪ್ರಶ್ನೆಗಳಿಗೂ ತಾಳ್ಮೆಯಿಂದ ಉತ್ತರ ನೀಡಿದ ರಕ್ಷಿತ್ ಶೆಟ್ಟಿ, ಚಿತ್ರ ಕಥೆಯ ಬಹುಭಾಗ ಅವರ ಜೀವನದ ಸ್ವಂತ ಕಾಲೇಜು ಅನುಭವದಿಂದ ಬಂದ ವಿಷಯವನ್ನು ಹಂಚಿ ಕೊಂಡರು. ಇನ್ನೊಂದು ಪ್ರಶ್ನೆಗೆ ತಾವು ಕನ್ನಡ ಚಿತ್ರರಂಗದಲ್ಲಿ ಶಂಕರ ನಾಗ್ ರಂತೆ ಹೆಸರು ಮಾಡಬೇಕೆಂಬ ಹಂಬಲವನ್ನು ವ್ಯಕ್ತಪಡಿಸಿದರು. ತಮ್ಮ "ಸಿಂಪಲ್ ಆಗಿ ಒಂದು ಲವ್ ಸ್ಟೋರಿ"ಯ ಬಗ್ಗೆಯೂ ಹಲವು ವಿಷಯಗಳನ್ನು ಹಂಚಿ ಕೊಂಡರು.

ಚಿತ್ರದ ನಿರ್ದೇಶಕರಾದ ರಿಷಬ್ ಶೆಟ್ಟಿ ತಮ್ಮ ಜೀವನದ ಹೊಸ ಬಾಳ ಸಂಗಾತಿಯೊಡನೆ ಎಲ್ಲರೊಡನೆ ಬೆರೆತಿದ್ದು ಬಂದ ಎಲ್ಲರಿಗೂ ಬಹಳ ಸಂತಸವನ್ನುಂಟು ಮಾಡಿತ್ತು. ಎಲ್ಲರೊಡನೆ ಬೆರೆತು , ಸೆಲ್ಫೀ , ಫೋಟೋ ಗಳಿಗೆ ನಗುನಗುತ್ತಾ ಪೋಸ್ ಕೊಟ್ಟು ಮರೆಯಲಾರದ ಸಂಜೆಮಾಡಿದರು.

ಬೃಂದಾವನದ ಅಧ್ಯಕ್ಷರಾದ ಡಾ.ಅಶೋಕ್ ಕಟ್ಟಿಮನಿ, ಮಲ್ಲಿಕ್ ಪ್ರಸಾದ್ ಹೂಗುಚ್ಛದೊಂದಿಗೆ ಆತ್ಮೀಯವಾಗಿ ಬರಮಾಡಿಕೊಂಡರು.



**ಬೆಳಗೆದ್ದು ಯಾರ ಮುಖವ ನಾನು ನೋಡಿದೆ**
**ಅಂದಾನೋ ಅದೃಷ್ಟಾನೋ ಮುಂದೆ ಕುಂತಿದೆ**
**ನಿನ್ನೆ ಕಂಡ ಕನಸು ಬ್ಲಾಕ್ ಅಂಡ್ ವೈಟ್ ಇಂದು ಬಣ್ಣ ಆಗಿದೆ..**

ಮನದಲ್ಲಿ ಗುನುಗುತ್ತ ಹೊರಟೆವು


Copyright © KCO – Brindavana

ಸಂಚಿಕೆ
೦೬
ಮಾರ್ಚ್ , ೨೦೧೭

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

# ಮತ್ತೆ ಗರ್ಭಕೆ




***"..ಮೈ ತಡವಬೇಕೆಂಬ ಆಸೆ ಆಯಿತು. ಚಿಕ್ಕವನಿದ್ದಾಗ ಸವರುತ್ತಿದ್ದ ಕೈ, ಮಗ ದೊಡ್ಡವನಾಗುತ್ತಾ ಹಿಂಜರಿಯಿತೇ ತಲೆ ಸವರಲು? ಒಂದೇ ಒಂದು ಸಲ ಮಗನ ತಲೆಯನ್ನು ತೊಡೆಯ ಮೇಲಿಟ್ಟುಕೊಂಡು ....."***

**ಸಂ**ಜೆಯ ತಂಪು ಮನೆಯನ್ನು ತಣ್ಣಗಿರಿಸಿದಂತಿತ್ತು. ಒಂದೊಂದೇ ಕಿಟಕಿಯ ಬಾಗಿಲು ಹಾಕುತ್ತಾ ಬಂದೆ. ಹಾಗೇಯೇ ಕುರ್ಚಿಗೆ ಒರಗಿ ಟಿ.ವಿ.ಯನ್ನು ಹಾಕಿದಾಗ, ವಾರ್ತೆಗಳು ಬರುತ್ತಿತ್ತು. ಎಲ್ಲಾ ವಾಹಿನಿಯವರಿಗೆ "ಬ್ರೇಕಿಂಗ್ ನ್ಯೂಸ್" ಕೊಡುವ ಸ್ಪರ್ಧೆ. ದೇಶ, ರಾಜ್ಯಗಳ ವಿಷಯವೇ ಬೇಕೆಂದಿಲ್ಲ. ಯಾರ ಮನೆಯದ್ದಾಗಿರಬಹುದು, ವೈಯಕ್ತಿಕ ವಿಚಾರವಾಗಿರಬಹುದು, ಸುದ್ದಿ ಬಿತ್ತರಿಸಿ ತಮ್ಮ ವಾಹಿನಿಯ ಟಿ.ಆರ್.ಪಿ. ಹೆಚ್ಚಿಸಿಕೊಂಡರಾಯಿತು. ಸಮಾಜದ ಬಗ್ಗೆ ಕಾಳಜಿ ಅಷ್ಟರಲ್ಲೇ.


ಕಿವಿ,ಕಣ್ಣು,ಮನ ಎಲ್ಲವನ್ನೂ ಸೆಳೆಯಿತು ಸುದ್ದಿ. "ಹಿಮಪಾತ, ಯೋಧರ ಸಾವು.ಮನೆ ಮುಟ್ಟಿದ ಯೋಧನ ಶವ. ಮನೆಯವರ ಆಕ್ರಂದನ. ಊರಿಗೆ ಊರೇ ಯೋಧನಿಗೆ ನಮನ". ತೋರಿಸಿದ್ದೇ ತೋರಿಸುತ್ತಾ, ಹೇಳಿದ್ದನ್ನೇ ಹೇಳುತ್ತಾ ಮನ ಕಲಕುವ ದೃಶ್ಯವನ್ನು ಬಿತ್ತರಿಸುತ್ತಿದ್ದರು. ಮನಸ್ಸು ಒಂದೊಂದೇ ದೃಶ್ಯವನ್ನು ನೋಡುತ್ತಾ ನನ್ನನ್ನು ಇಪ್ಪತ್ತು ವರ್ಷಗಳ ಹಿಂದೆ ಕೊಂಡೊಯ್ಯಿತು.

ಹೇಗೆ ಮರೆಯಲಿ ಆ ದಿನ? ಮರೆತು ಬಿಡು ಎಂದು ಮನಸ್ಸು, ಹೃದಯ ಹೇಳಿದರೂ ಮರೆಯಲಾರೆ. ವಯಸ್ಸು ಆಗುತ್ತಾ ಎಲ್ಲವನ್ನೂ ಮರೆಯುತ್ತೇವಂತೆ. ಆದರೆ ನನಗೇಕೆ ಮರೆವು ಬಾರದು?ಮುಪ್ಪು ಮೈಗಾಗಿತ್ತೇ ಹೊರತು ಮನಸ್ಸಿಗಲ್ಲ, ನನೆಪಿಗಲ್ಲ, ವೇದನೆಗಲ್ಲ. ಅಂದು ಕೆಲಸ ಮುಗಿಸಿ ಮನೆಗೆ ಬರುತ್ತಿದ್ದೆ. ಮನೆಯ ದಾರಿಯಲ್ಲಿ ಏನೋ ಅಸಹಜ ವಾತಾವರಣ.ಅಲ್ಲಲ್ಲಿ ಇಬ್ಬರು ಮೂವರ ಗುಂಪು. ಸರಿಯಿಲ್ಲವೆಂದೆನಿಸಿತು. ಕೇಳೋಣವೆಂದರೆ ಯಾರೂ ನನ್ನ ಮುಖ ನೋಡುತ್ತಿಲ್ಲ. ಮನೆಯ ಬಾಗಿಲು ತೆಗೆದು ಓಳಹೊಕ್ಕೆ.ಎರಡನೆಯ ಮಗ ಇನ್ನೂ ಶಾಲೆಯಿಂದ ಬಂದಿರಲಿಲ್ಲ. ಮನೆಯ ಕಿಟಕಿಯಿಂದ ನೋಡಿದಾಗ ಎದಿರು ಮನೆಯ ಶ್ರೀಮತಿ ಪಕ್ಕದ ಮನೆಯ ಹಿರಿಯಮ್ಮನೊಂದಿಗೆ ನಮ್ಮ ಮನೆಗೇ ಬರುತ್ತಿದ್ದಾರೆ. ಏಕೋ ಅಳುಕುಂಟಾಯಿತು. ಹೊಟ್ಟೆಯಲ್ಲಿ ತಳಮಳ. ಬಾಗಿಲು ತಟ್ಟುವ ಮುಂಚೆಯೇ ಹೋಗಿ ಬಾಗಿಲು ತೆಗೆದೆ. ಇಬ್ಬರ ಮುಖವೂ ಕೇಳಬಾರದ್ದು ಕೇಳಿದಂತೆ, ಹೇಳಲಾಗದ್ದು ಹೇಳ ಹೊರಟಂತೆ ಕಾಣುತ್ತಿತ್ತು. ಏನೂ ಮುಚ್ಚಿಡುವ ಸ್ಥಿತಿಯಲ್ಲಿ ಇಬ್ಬರೂ ಇದ್ದಂತಿಲ್ಲ.

"ಬನ್ನಿ, ಕುಳಿತುಕೊಳ್ಳಿ" ಎಂದೆ.ಹಿರಿಯಮ್ಮ ಹತ್ತಿರ ಬಂದು,"ಊಟ ಆಯಿತಾ? ಕಾಫೀ ಏನಾದರೂ ಕುಡಿದ್ಯಾ?" ಎಂದು ಕೇಳಿದಾಗ, ಏನಕ್ಕೆ ಪೀಠಿಕೆ ಎಂದು ಊಹಿಸಲು ಸಾಧ್ಯವಾಗಲಿಲ್ಲ. ವಿಶಾಲು, ಗಟ್ಟಿ ಮನಸ್ಸು ಮಾಡಿಕೋ. ನಿನ್ನ ಮಗನಿಗೆ ಅಪಘಾತ ಆಗಿದೆಯಂತೆ. ತುಂಬಾ ಚಿಂತಾಜನಕ ಸ್ಥಿತಿಯಂತೆ. ಶ್ರೀಮತಿಗೆ ಸೇನೆಯ ಕಮಾಂಡರ್ನಿಂದ ಫೋನ್ ಬಂದಿತ್ತು" ಹಿರಿಯಮ್ಮನ ಮಾತುಗಳು ಮಿಂಚು,ಸಿಡಿಲು ಎಲ್ಲವೂ ಒಟ್ಟಿಗೆ ಅಪ್ಪಳಿಸಿದಂತಾಯಿತು. ಅರಗಿಸಿಕೊಳ್ಳಲಾಗದ ಸತ್ಯ.

ನನ್ನ ಮೊದಲನೆಯ ಮಗ ಯಾವುದೋ ಗಂಡಾಂತರ ಸ್ಥಿತಿಯಲ್ಲಿದ್ದಾನೆ, ನಾನೇನೂ ಮಾಡಲಾರೆ."ದೇವರನ್ನು ಬೇಡಿಕೊಳ್ಳೋಣ ಅವನು ಹುಷಾರಾಗಿ ಬರುವಂತೆ". ಹಿರಿಯಮ್ಮ ಹೇಳಿದರೂ ಅವರ ಸ್ವರ ನಡುಗುತ್ತಿತ್ತು. ನೇರವಾಗಿ ಕೇಳಿದೆ,"ಹಿರಿಯಮ್ಮ ಏನಾಯ್ತು ನನ್ನ ಮಗನಿಗೆ?". ಆಗ ಹೇಳಿದರು,"ಮಿಲಿಟರಿ ವಾಹನ ತಿರುವಿನಲ್ಲಿ ಅಪಘಾತಕ್ಕೀಡಾಯಿತಂತೆ, ಪೆಟ್ಟಿಗೆಯೊಂದು ತಲೆಯ ಮೇಲೆ ಬಿದ್ದು ರಕ್ತಸ್ರಾವವಾಗಿದೆಯಂತೆ, ಆಸ್ಪತ್ರೆಯಲ್ಲಿದ್ದಾನಂತೆ". ಒಂದೊಂದೇ ಮಾತುಗಳನ್ನು ಕೇಳುತ್ತಾ ಕೇಳುತ್ತಾ ನನ್ನ ಮೈ ತಣ್ಣಗಾದಂತೆನಿಸಿತು. ಕ್ಷಣವೊಮ್ಮೆ ಎಲ್ಲವೂ ಬರಿದಾದಂತಾಯಿತು. ಪಾಪ ಎಷ್ಟು ನರಳುತ್ತಿರುವನೋ, ಎಷ್ಟು ಮನೆಯವರನ್ನೆಲ್ಲಾ ನೆನಪಿಸಿಕೊಳ್ಳುತ್ತಿದ್ದಾನೋ?ಅಮ್ಮಾ ಎಂದು ನರಳಿದರೂ ಹೇಗೆ ಹೋಗಲಿ? ಪಂಜಾಬಿಗೆ ಯಾರು ಕರೆದುಕೊಂದು ಹೋಗುತ್ತಾರೆ ನನ್ನ? ತಂದೆಯಿಲ್ಲದೆ ಬೆಳೆದ ಮಕ್ಕಳು. ಸಂಬಂಧಿಯೊಂದಿಗೆ ಈಗಲೇ ಹೊರಡಲೇ ಎಂದು ಹಿರಿಯಮ್ಮನನ್ನು ಕೇಳಿದಾಗ ಅವರು ತಡವರಿಸಿದರು, "ಹೋಗುವುದು ಬೇಡ, ಅವರೇ ಅವನನ್ನು ಇಲ್ಲಿಗೆ ಕರೆತರುವರಂತೆ"

"ಏನು ಈ ಸ್ಥಿತಿಯಲ್ಲಿ?" ಪ್ರಶ್ನಿಸಿದಾಗ ಹಿರಿಯಮ್ಮನ ಬಳಿಯಲ್ಲಿ ಇನ್ನಾವ ಸಬೂಬುಗಳಿರಲಿಲ್ಲ. ಆಗ ಶ್ರೀಮತಿಯವರು,"ವಿಶಾಲು ನಿನ್ನ ಮಗನನ್ನು ಉಳಿಸಲು ಸಾಧ್ಯವಾಗಿಲ್ಲವಂತೆ" ಎಂದು ಗಟ್ಟಿಯಾಗಿ ಅಳಲಾರಂಭಿಸಿದರು. ನನ್ನನ್ನು ತಬ್ಬಿ ಅಳುತ್ತಿದ್ದವರನ್ನೇ ನೋಡುತ್ತಾ ಬೆಪ್ಪಳಂತೆ ಕುಳಿತಿದ್ದೆ. ಅರ್ಥವಾಗುತ್ತಿಲ್ಲವೋ ಅಥವಾ ಮನಸ್ಸು, ಹೃದಯ ಅರ್ಥ ಮಾಡಿಕೊಳ್ಳಲು ಒಪ್ಪುತ್ತಿಲ್ಲವೋ ಒಂದೂ ಅರಿಯದು. ಒಂದು ಹನಿ ಕಣ್ಣೀರೂ ಬರದು."ಅತ್ತು ಬಿಡೇ ವಿಶಾಲು" ಎಂದು ಹೇಳಿದಾಗ ಏಕೋ ಏನೋ ಯಾವ ಭಾವನೆಯೂ ಬರುತ್ತಿಲ್ಲ, ಏನೂ ಅನಿಸುತ್ತಿಲ್ಲ, ಏನೂ ಆಗಿಲ್ಲವೆಂದೇ ಅನ್ನಿಸುತ್ತೆ. ಮಗ ಎಲ್ಲೋ ಇದ್ದಾನೆ, ಆರು ತಿಂಗಳಿಗೊಮ್ಮೆಯೋ, ವರ್ಷಕ್ಕೊಮ್ಮೆಯೋ ಬರುತ್ತಾನೆ. ಇವರೆಲ್ಲಾ ಸುಮ್ಮನೆ ಏನೋ ಹೇಳುತ್ತಿದ್ದಾರೆ, ರಾತ್ರಿ ಒಂದು ಎಸ್.ಟಿ.ಡಿ ಮಾಡಿ ಅವನ ಹತ್ತಿರ ಮಾತಾನಾಡಿದರೆ ಎಲ್ಲಾ ಸರಿಯಾಗುತ್ತೆ ಅಂತ ಮನಸ್ಸು ಸಮಾಧಾನ ನೀಡಿತು. ಆದರೆ ಒಬ್ಬೊಬ್ಬರೇ ಸಂಬಂಧಿಗಳು ಮನೆಗೆ ಬರಲು ಪ್ರಾರಂಭಿಸಿದರು. ಸುಮಾರು ಘಂಟೆಗಳ ನಂತರ ಅಕ್ಕ ಮನೆಗೆ ಬಂದವಳೇ ತಬ್ಬಿ ಅಳಲಾರಂಭಿಸಿದಳು. "ದೇವರೇಕೆ ನಮ್ಮ ಮಗುವನ್ನು ಕಿತ್ತುಕೊಂಡ?" ಎಂದು ಗೋಳಾಡಿದಾಗ ಮೈ ನಡುಗಿತು, ಹೃದಯ ಹಿಂಡಿತು. ಮುಖ ಮುಚ್ಚಿಕೊಂದು ಅತ್ತೆ. ಯಾರನ್ನೂ ನೋಡುವ, ಮಾತನಾಡಿಸುವ ಇಚ್ಛೆ ಇರಲಿಲ್ಲ. ಯಾರ ಸಮಾಧಾನದ ಮಾತೂ ಕಿವಿಗೆ ಕೇಳದು. ಕಿವಿ ಕೇಳ ಬಯಸಿದ್ದು ಒಂದೇ ಶಬ್ಧ, "ಅಮ್ಮಾ" ಎಂಬ ದೊಡ್ಡ ಮಗನ ಕರೆ.ಮನಸ್ಸಿನ ಮೂಲೆಯಲ್ಲೊಂದು ಆಸೆ,ಇದೆಲ್ಲಾ ಸುಳ್ಳಿರಬಹುದೆಂದು.



(ಮುಂದಿನ ಪುಟಕ್ಕೆ)


Copyright © KCO – Brindavana

ಸಂಚಿಕೆ
೦೬
ಮಾರ್ಚ್ , ೨೦೧೭

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

(ಹಿಂದಿನ ಪುಟದಿಂದ)

ಮನಸ್ಸಿನ ಮೂಲೆಯಲ್ಲೊಂದು ಆಸೆ, ಇದೆಲ್ಲಾ ಸುಳ್ಳಿರಬಹುದೆಂದು. ನಂತರವೆಲ್ಲಾ ಒಬ್ಬೊಬ್ಬರೇ ಬರುವುದು, ಏನಾಯಿತೆಂದು ಕೇಳುವುದು, ಅಂತ್ಯಕ್ರಿಯೆ ಯಾವಾಗ ಎಂದು ವಿಚಾರಿಸುವುದು. ಇನ್ನೆರಡು ದಿನಗಳಲ್ಲಿ ದೇಹವನ್ನು ವಿಮಾನ ನಿಲ್ದಾಣದಲ್ಲಿ ಪಡೆಯಬೇಕೆಂದು ಕೇಳಿಬಂತು. ಯಾರೋ ಕುಡಿಸುತ್ತಿದ್ದರು, ತಿನ್ನಿಸುತ್ತಿದ್ದರು, ತಲೆ ನೋವೆಂದಾಗ ಮಾತ್ರೆ ಕೊಟ್ಟು ಮಲಗಿಸುತ್ತಿದ್ದರು. ಎರಡನೆಯ ಮಗ ಆಗಾಗ ಬಂದು ನೋಡಿ ಅಳುತ್ತಿದ್ದ.

ಕೊನೆಗೂ ಬಂತು ಆ ಕರಾಳ ದಿನ. ಎರಡು ಸೂಟ್ ಕೇಸ್ ಜೊತೆಯಲ್ಲಿ ಹೋಗಿದ್ದ ಮಗ,ಮರದ ಪೆಟ್ಟಿಗೆಯೊಳಗೆ ಮಲಗಿ ಬಂದಿದ್ದ. ಅಕ್ಕ ಜೋರಾಗಿ ಗೋಳಾಡುತ್ತಿದ್ದಳು. ಮನೆಯಲ್ಲಿ ಕಾಲಿರಿಸಲೂ ಜಾಗವಿಲ್ಲದಷ್ಟು ಜನ. ಒಬ್ಬೊಬ್ಬರೇ ಸಮಾಧಾನ ಹೇಳುತ್ತಿದ್ದರು. ಕಂಡರಿಯದವರು, ಕೇಳರಿಯದವರು ಯಾರಿವರು? ಕೊನೆಗೂ ನನ್ನ ಸರದಿ. ಅಕ್ಕ ಅಂತಿಮ ದರ್ಶನಕ್ಕೆ ನನಗೆ ಹೆಗಲು ಕೊಟ್ಟಳು. ಯಾವಾಗಲೂ ಮಗ ಬಂದಾಗ ಆತುರದಿಂದ ನೋಡಲು ಓಡುತ್ತಿದ್ದವಳಿಗೆ ಕಾಲಿಗೆ ಬೇಡಿ ಹಾಕಿದಂತಾಗಿತ್ತು. ಪೆಟ್ಟಿಗೆಯ ತುಂಬಾ ಹೂವಿನ ಹಾರಗಳು.ಬದುಕಿದ್ದಾಗ ಒಮ್ಮೆಯೂ ದೇಶಕ್ಕಾಗಿ ಕೆಲಸ ಮಾಡುತ್ತಿದ್ದೀಯಾ ಅಂತ ಒಬ್ಬರೇ ಒಬ್ಬರು ಹಾರ ಹಾಕದವರು ಈಗೇಕೆ ಹಾಕಬೇಕು? ಎಷ್ಟು ಭಾರವಾಗುತ್ತಿದೆಯೋ? ಮೈ ತಡವಬೇಕೆಂಬ ಆಸೆ ಆಯಿತು. ಚಿಕ್ಕವನಿದ್ದಾಗ ಸವರುತ್ತಿದ್ದ ಕೈ ಮಗ ದೊಡ್ಡವನಾಗುತ್ತಾ ಹಿಂಜರಿಯಿತೇ ತಲೆ ಸವರಲು? ಒಂದೇ ಒಂದು ಸಲ ಮಗನ ತಲೆಯನ್ನು ತೊಡೆಯ ಮೇಲಿಟ್ಟುಕೊಂಡು "ನೋವು ಹೋಯಿತೇ? ಏನಾದರೂ ಹಚ್ಚಲೇ?" ಎಂದು ಕೇಳುವ ತವಕ. ಬಾಯಿ ಒಣಗಿ ಹೋಗಿತ್ತು.ಸ್ವರ, ಶಬ್ದಗಳು ಗಂಟಲಲ್ಲೇ ಉಳಿದವು. ಬಗ್ಗಿ ನೋಡಿದೆ. ಗುರುತೇ ಸಿಗದಷ್ಟು ಪೆಟ್ಟು ತಿಂದ ಮುಖ. ತಡೆಯಲಾಗದ ಆಘಾತ."ಇವನು ನನ್ನ ಮಗನೇ?" ನಂಬಲಾರೆ. ಕರುಳು ಕಿತ್ತು ಬಂತು. ಕೋಟಿ ಕೋಟಿ ಜನರಲ್ಲಿ ದೇವರು ನನ್ನ ಮಗನನ್ನು ಹೇಗೆ ಹುಡುಕಿದ? ಜೀವನದ ಸವಿಯನ್ನೇ ನೋಡದ ಜೀವ,"ಏಕೆ ದೇವರೇ ಕ್ಷಮಿಸಲಾರದ ತಪ್ಪಾದರೂ ನಾನು ಏನು ಮಾಡಿದ್ದೆ?". ವಿಚಾರಗಳನ್ನು ಕಡಿಯುವಂತೆ ಯಾರೋ ಒಬ್ಬರು ಬೇಗ ಬೇಗ ಮಾಡಿಸಿ, ತಡವಾಗುತ್ತಿದೆಯೆಂದರು. ಇಪ್ಪತ್ತಾರು ವರುಷಗಳ ಕರುಳಿನ ಸಂಬಂಧಕ್ಕೆ ವಿದಾಯ ಹೇಳಲು ಐದು ನಿಮಿಷವೂ ಕೊಡದ ನಿರ್ದಯಿಗಳೇ ಇವರು?.ಇನ್ಯಾರೋ, "ಎಂ.ಎಲ್.ಎ. ಬಂದ್ರು ಜಾಗ ಬಿಡಿ" ಅಂದರು. ಬಂದವರು "ನಮ್ಮ ಊರಿಗೇ ಹೆಸರು ಮಾಡಿಕೊಟ್ಟ ನಿಮ್ಮ ಮಗ" ಎಂದಾಗ ಯಾರಿಗೆ ಬೇಕು ಈ ಹೆಸರು? ಮುಂದೆ ಓದಲು ಬಯಸಿದ್ದರೂ ಹಣದ ವ್ಯವಸ್ಥೆಯಿಲ್ಲದೆ ಮಿಲಿಟರಿ ಸೇರಿದ್ದ ಮಗ. ಆಗ ಯಾರೂ ನಾನಿದ್ದೇನೆ ಎಂದು ಬಂದಿರಲಿಲ್ಲ.ಈಗೇಕೆ ಅಶ್ರುತರ್ಪಣ?ಎಲ್ಲರನ್ನೂ ಕಳುಹಿಸಿ ಒಬ್ಬಳೇ ಮಗನನ್ನು ನೋಡಿ ಮಾತಾಡಿಸುವ ಬಯಕೆ ಹಾಗೆಯೇ ಮುದುಡಿತು, ಜನರ ನೂಕುನುಗ್ಗಲನ್ನು ನೋಡಿ, ಬೇರೆ ದೇಶಗಳಲ್ಲಿ ಅಂತ್ಯಕ್ರಿಯೆ ಸಮಯದಲ್ಲಿ ಮನೆಯವರಿಗಾಗಿಯೇ ಸ್ವಲ್ಪ ಸಮಯ ನೀಡಲಾಗುತ್ತಂತೆ. ವೈಯಕ್ತಿಕ ಜೀವನಕ್ಕೆ ಬೇರೆಯವರು ಪ್ರವೇಶಿಸಲು ಹಿಂಜರಿಯುತ್ತಾರಂತ ಕೇಳಿದ್ದೆ. ನಮ್ಮಲ್ಲೇಕೆ ಅಂತಿಮಕ್ರಿಯೆ ಸಾರ್ವಜನಿಕವಾಗಿದೆ? ಎಲ್ಲರನ್ನೂ ಧಿಕ್ಕರಿಸಬೇಕು, ನನ್ನನ್ನು ಬಿಟ್ಟು ಬಿಡಿ ಎಂದು ಕೂಗಿ ಹೇಳಬೇಕು, ಮಗನನ್ನು ತಬ್ಬಿ ತಲೆಯ ಮೇಲೊಂದು ಮುತ್ತಿಟ್ಟು ಕೊನೆಯ ಬಾರಿ ನೋಡಿ ವಿದಾಯ ಹೇಳಬೇಕು ಅಂದುಕೊಳ್ಳುತ್ತಿರುವಾಗಲೇ ಎತ್ತಿಯೇ ಬಿಟ್ಟರು ನನ್ನ ಮಗನನ್ನು. ಎಷ್ಟೊಂದು ಕ್ರೂರಿ ಜಗತ್ತು, ದೇವರು ನಿರ್ದಯಿ, ಏಕೆ ಬದುಕಬೇಕು ಎಂದು ಕೂಗಾಡಿದಾಗ, "ನೋಡು ನಿನ್ನ ಎರಡನೆಯ ಮಗ ಕಂಗಾಲಾಗಿದ್ದಾನೆ, ಅವನಿಗೆ ಸಮಾಧಾನ ಮಾಡುವುದು ಬಿಟ್ಟು ನೀನೇ ಅತ್ತರೆ?" ಎಂದು ಹಿರಿಯಮ್ಮ ಹೇಳಿದಾಗ ಎರಡನೆಯ ಮಗ ಬಂದು ತಬ್ಬಿಕೊಂಡ. ಮೊದಲ ಬಾರಿ "ಅಮ್ಮಾ" ಎಂದು ಕರೆದವನು ನನ್ನನ್ನು ಬಿಟ್ಟು ಹೋದ ಮೇಲೆ ಇದ್ದರೆಷ್ಟು, ಹೋದರೆಷ್ಟು ಎಂದು ಬರಿದಾದ ಒಡಲು ಹೇಳಿದರೆ, ಇನ್ನೊಂದೆಡೆ ಎರಡನೆಯ ಮಗನೆಡೆಗೆ ಮಾತೃ ಹೃದಯ ಮಿಡಿಯಿತು.

ದಿನಗಳು, ವಾರಗಳು, ಮಾಸಗಳು, ವರುಷಗಳೇ ಉರುಳಿದವು. ಹಸಿವೆ, ನಿದ್ದೆ ಎಂದಿನಂತೆ. ಯಾರಾದರೂ ಮಗ ತನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲಾ, ಸರಿಯಾಗಿ ಓದುತ್ತಿಲ್ಲ, ಮನೆಗೆ ಬರುವುದೇ ಇಲ್ಲ ಎಂದು ಮಾತನಾಡಿದಾಗ ದೂರು ಹೇಳುವುದಕ್ಕಾದರೂ ಮಗ ಇದ್ದಾನಲ್ಲ ಎಂದು ನೋವಾಗುತ್ತಿತ್ತು. ದಿನಗಳುರುಳುತ್ತಿದ್ದಂತೆ ಕಳೆದುಕೊಂಡಿದ್ದು ನನ್ನ ಮಗನನ್ನೇ ಎನ್ನುವ ಸತ್ಯ ಅರಿವಾಗುತ್ತಿದೆ. ಒಮ್ಮೆ ತಲೆ ನೇವರಿಸಬೇಕು, ಮಗನನ್ನು ತಬ್ಬಿಕೊಳ್ಳಬೇಕೆಂಬ ಆಸೆ ಬತ್ತುತ್ತಿದೆ. ದೇವರೇ, ಒಂದೇ ಒಂದು ಸಲ ನನ್ನ ಮಗನನ್ನು ಪುನಃ ಮಡಿಲಲ್ಲಿ ಮಲಗಿಸು" ಎಂದು ಮೂಕವಾಗಿ ರೋಧಿಸುತ್ತಿರುವಾಗ ಯಾರೋ ಮಡಿಲಲ್ಲಿ ಮಲಗಿದಂತಾಯಿತು. ಕಣ್ಣೀರು ಒರೆಸಿಕೊಂಡು ನೋಡಿದೆ.ಎರಡನೇ ಮಗನ ಮಗು ತೊಡೆಯೇರಿತ್ತು. ಕೈಯನ್ನು ಕೊರಳ ಸುತ್ತಾ ಹಾಕಿ,"ಅಜ್ಜೀ ಮಲಗಿಸ್ತೀಯಾ?"ಎಂದು ಕೇಳಿದಾಗ ಇಪ್ಪತ್ತು ವರುಷಗಳಿಂದ ತಡೆದಿಟ್ಟ ಕಣ್ಣೀರು ನುಗ್ಗಿ ಬಂತು. ಮಗುವನ್ನು ತಬ್ಬಿಕೊಂಡೆ. ಹಣೆಗೆ, ತಲೆಗೆ ಮತ್ತೆ ಮತ್ತೆ ಮುತ್ತಿಟ್ಟೆ. ಹೇಳಲಾರದ ಅನುಭವ. ಮೊಮ್ಮಗು ತಬ್ಬಿಬ್ಬಾಗಿ ನನ್ನನ್ನೇ ನೋಡುತ್ತಿತ್ತು. ಮಗುವಿನ ಮುಗ್ಧ ನೋಟ ಏಕೆ ಬದುಕಿರಬೇಕು ಎಂಬ ನನ್ನ ಪ್ರಶ್ನೆಗೆ ಉತ್ತರಿಸಿದಂತಿತ್ತು.ನನ್ನ ಆಸರೆಯಲ್ಲಿ ಮೊಮ್ಮಗುವೋ, ಮಗುವಿನ ಆಸರೆಯಲ್ಲಿ ನಾನೋ ತಿಳಿಯದಾದೆ.

ಋತು ಚಕ್ರ ತಿರುಗುವುದು, ಕಾಲನೆದೆ ಮರುಗುವುದು ।
ಮೃತನ ಮಣ್ಣಿಂದ ಹೊಸ ಹುಲ್ಲು ಮೊಳೆಯುವುದು ॥
ಕ್ಷಿತಿ ಗರ್ಭ ಧರಿಸುವಳು ಮತ್ತುದಿಸುವುದು ಜೀವ ।
ಸತತ ಕೃಷಿಯೇ ಪ್ರಕೃತಿ ಮಂಕುತಿಮ್ಮ ॥

— ಡಿ. ವಿ. ಜಿ.

***ಕಳೆದ ಸಂಚಿಕೆಯ 'ಹೀಗೊಂದು ಪ್ರಶ್ನೆ' ಛಾಯಾಚಿತ್ರಗಳಿಗೆ ಒಂದು ಸಾಲಿನ 'ತಲೆಬರಹ' ಬರೆದು ಕಳುಹಿಸಿದವರು.***





೧. "ಕೊಂಬೆಗೆ ಕಾಯಿ ಭಾರವೆ? ಹೆತ್ತ ತಾಯಿಗೆ ಮಗುವು ಭಾರವೆ?"

- ಅನಿಲ್ ಭಾರದ್ವಾಜ್

೨. "ಮರವಾಗಿ ಬಗ್ಗದ್ದು, ಮಂಟಪವಾಗಿ ಬಗ್ಗೀತೆ?"

- ವಿನೋದ್ ಶ್ಯಾಂಸುಂದರ್

"ಗೋಪುರವು ನೀರೊಳಗೋ? ನೀರು ಗೋಪುರದೊಳಗೋ?"

- ಅನಿಲ್ ಭಾರದ್ವಾಜ್


Copyright © KCO – Brindavana

ಸಂಚಿಕೆ
೦೯
ಮಾರ್ಚ್ , ೨೦೧೭



# ಸುಳ್ಳಿನ ಬಳ್ಳಿ



ಕಥಾ ಸಮಯ

ಅನಿಲ್ ಭಾರದ್ವಾಜ

*“.....ನೀನು ಹೇಳುವ ಒಂದೊಂದು ಸುಳ್ಳಿಗೂ, ಮುಳ್ಳಿನ ಬಳ್ಳಿಯಿಂದ ಚುಚ್ಚುವೆ.ಎಂಟಕ್ಕಿಂತ ಹೆಚ್ಚು ಸುಳ್ಳು ಹೇಳಿದರೆ ಆ ಬಳ್ಳಿ ನಿನ್ನ ಸಂಪೂರ್ಣ ಮುತ್ತಿಕೊಳ್ಳುತ್ತದೆ. ಇಲ್ಲವಾದರೆ ನಾನು ಸೋಲೊಪ್ಪಿ, ನಿನಗೆ ಉಪಟಳ ಕೊಡುವುದು ಬಿಡುವೆ.....”*

‘ಅಪ್ಪಾ, ಸ್ವಲ್ಪ ಹೊತ್ತು ಐಪ್ಯಾಡಿನಲ್ಲಿ ಆಟ ಆಡ್ತೀನಿ. ಆಮೇಲೆ ಸ್ಕೂಲ್ ಕೆಲಸ ಎಲ್ಲಾ ಮಾಡ್ತೀನಿ, ’ತಂದೆಯಲ್ಲಿ ಯಾಚಿಸಿದ ಆರನೇ ತರಗತಿಯಲ್ಲಿ ಓದುತ್ತಿದ್ದ ಬಾಲಕ. ‘ನನ್ನ ತಲೆ ತಿನ್ನಬೇಡ. ನನಗೆ ತುಂಬಾ ಸುಸ್ತಾಗಿದೆ.ರೂಮಿಗೆ ಹೋಗಿ ನಿನ್ನ ಹೋಂ ವರ್ಕ್ ಮುಗಿಸು,’ ಕಛೇರಿಯಿಂದ ಬಳಲಿ ಬಂದಿದ್ದ ಅಪ್ಪ ಮಗನಿಗೆ ಆದೇಶಿಸಿದ. ನಗರದಲ್ಲಿರುವ ಐಟಿ ಕಂಪನಿಯೊಂದರಲ್ಲಿ ಗಣಕಯಂತ್ರ ಇಂಜಿನಿಯರಾಗಿ ಆತನ ಕಸುಬು. ಹೆಚ್ಚಾಗಿ ಒತ್ತಡವೇ ಇರುವ ಕೆಲಸ ಅವನದಾಗಿತ್ತು. ”ಬಿಸಿಬಿಸಿ ಹುಳಿ-ಅನ್ನ ಆರಿದಕ್ಷತೆ ಆಗಿಹೋಯ್ತು.ಬೇಗ ಊಟ ತಿಂದು, ಪೈಜಾಮ ಹಾಕಿ ಮಲಗಕ್ಕೆ ನಡಿ. ತುಂಬಾ ಹೊತ್ತಾಗಿ ಹೋಯ್ತು.ಹಾಸಿಗೆ ಮೇಲೆ ನಿನಗೆ ರಾಜಕುಮಾರಿ ಕಥೆ ಹೇಳ್ತೀನಿ, ”ಅಡಿಗೆಮನೆಯಲ್ಲಿ ಮರುದಿನದ ಡಬ್ಬಿಗೆ ಚಪಾತಿ ಮಾಡುತ್ತಿದ್ದ ಅಮ್ಮ ಪುಟ್ಟ ಮಗಳಿಗೆ ಚೀರಿದಳು. ಮನೆಯ ಹತ್ತಿರದಲ್ಲೇ ಇರುವ ಕಛೇರಿಯೊಂದರಲ್ಲಿ ವ್ಯಾಪಾರೋದ್ಯಮ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಳು ಅಮ್ಮ. ಮಗಳು ನಿರ್ಲಕ್ಷ್ಯವಾಗಿ ತನ್ನ ಪುಟಾಣಿ ಪ್ಲಾಸ್ಟಿಕ್ ಬೊಂಬೆಗೆ ತಲೆಬಾಚುತ್ತಿದ್ದಳು. ಹೀಗೆ ಅಪ್ಪ-ಅಮ್ಮ ಮತ್ತು ಮಕ್ಕಳ ನಡುವಿನ ಸಿಡಿಮಿಡಿ ರಾತ್ರಿ ಹತ್ತರ ತನಕ ನಡೆಯಿತು. ಅಡುಗೆಮನೆ ಮುಚ್ಚಿ, ತುಸುಕಾಲ ವಿಶ್ರಾಂತಿಸಲು ಅಮ್ಮ ನಡುಮನೆಗೆ ಬಂದಳು. ಅಲ್ಲಿ ದೂರದರ್ಶನದಲ್ಲಿ ವಾರ್ತೆಗಳು ಜೋರಾಗಿ ಕೇಳುತ್ತಿತ್ತು. ಎದುರಿನ ಸೋಫಾ ಮೇಲೆ ಕೈಕಾಲು ವಿಸ್ತರಿಸಿ, ಜ್ಞಾನತಪ್ಪಿದವನಂತೆ ಗೊರಕೆ ಹೊಡೆದುಕೊಂಡು ಅಪ್ಪ ಮಲಗಿದ್ದ. ಅವನ ಕಾಲು ಸ್ವಲ್ಪ ಸರಿಸಿ ಸೋಫಾದ ತುದಿಯಲ್ಲಿ ಉತ್ಸಾಹಗುಂದಿದವಳಂತೆ ಕುಳಿತು, ತನ್ನ ಐಫೋನ್ ಮೇಲೆ ತೋರ್ಬೆರಳು ಬೀಸಲಾರಂಭಿಸಿದಳು ಅಮ್ಮ.

ಇದು ದೀಪಕ್-ಶಾಂತಿಯವರ ಮನೆಯಲ್ಲಿ ಬಹುಶಃ ಪ್ರತಿ ದಿನ ನಡೆಯುವ ಪ್ರಸಂಗ. ಅವರ ಬಿಡುವಿಲ್ಲದ ಈ ಜೀವನ ಚಕ್ರ ರಭಸವಾಗಿ ತಿರುಗುತ್ತಿತ್ತು.ಕಾಲ ಮತ್ತು ನೈಜ ಪ್ರೀತಿಯ ಅಭಾವ ಅವರನ್ನು ಯಂತ್ರವನ್ನಾಗಿ ಮಾರ್ಪಾಡುಮಾಡಿತ್ತು.ಅವರ ಚಲನ-ವಲನವೆಲ್ಲ ಕೃತಕ ಹಾಗೂ ಹೂರಣವಿಲ್ಲದ ರೊಟ್ಟಿಯಂತಾಗಿ,ಅವರ ಈ ಕೊರತೆ ಜೀವನದ ಗುಣಮಟ್ಟದಿಂದ ಬಹಳ ಸುಂಕ ಹಿಂಡಿಕೊಂಡಿತ್ತು. ಈ ಕಾರಣಗಳಿಂದ ದೀಪಕ್ ಮಾನಸಿಕವಾಗಿ ಸ್ವಲ್ಪ ದುರ್ಬಲನಾಗಿದ್ದ. ಸಂಸಾರದಲ್ಲಿ ಆಸಕ್ತಿ ಕಡಿಮೆ ಯಾಗಿತ್ತು, ನಿದ್ರೆಯ ಶಿಸ್ತಿಲ್ಲದ ಅವನನ್ನು ಮಧ್ಯರಾತ್ರಿ ದುಃಸ್ವಪ್ನಗಳು ಕಂಪಿಸಿ ಎಚ್ಚರಿಸುತ್ತಿತ್ತು.

ಅದೊಂದು ಕೃಷ್ಣಜನ್ಮಾಷ್ಟಮಿಯ ದಿನ. ಬೆಳಗಿನ ಜಾವ ಎದ್ದು ಕೃಷ್ಣದೇವರ ಪೂಜೆ ಮಾಡಿ, ರಾತ್ರಿ ರೋಹಿಣಿ ನಕ್ಷತ್ರ ಬರುವ ತನಕ ಉಪವಾಸವಿದ್ದು, ಅರ್ಘ್ಯ ಕೊಟ್ಟು, ಭಕ್ಷ್ಯ-ಭೋಜ್ಯಾದಿಗಳನ್ನು ನೈವೇದ್ಯಕ್ಕಿಟ್ಟು, ನಂತರ ಭುಂಜಿಸುವುದು ಲೋಕಾರೂಢಿ ವಾಡಿಕೆ. ‘ಶಾಂತಿ, ಈವತ್ತು ನನಗೆ ಉಪವಾಸ ಮಾಡಲು ಆಗೋಲ್ಲ. ಜ್ವರ ಬರುವ ಹಾಗಿದೆ,’ ನೆಪ ಹಾಕಿದ ದೀಪಕ್. ‘ಛೇ ಛೇ! ಅದೆಷ್ಟು ಸರಾಗವಾಗಿ ಸುಳ್ಳು ಹೇಳುತ್ತಿದ್ದೀಯ ನೋಡು?’ ಛೀಮಾರಿ ಹಾಕಿತು ಅವನ ಬೆನ್ನೇರಿದ್ದ ವಿಚಿತ್ರ ಪ್ರಾಣಿ. ಅದರ ಆಕಾರ ದೀಪಕನಿಗೆ ಅಥವಾ ಇತರರಿಗೆ ಕಾಣುತ್ತಿರಲಿಲ್ಲವಾದರೂ,ಅದು ಅವನನ್ನು ಪದೇಪದೇ ಕಾಡುತ್ತಿತ್ತು. ‘ನಿನಗೆ ಸುಳ್ಳು ಹೇಳುವುದು ಒಂದು ದೊಡ್ಡ ದುರಭ್ಯಾಸವಾಗಿ ಹೋಗಿದೆ.ನಿನ್ನ ಜೀವನ ಸತ್ಯದಿಂದ ಬಹಳ ದೂರವಾಗುತ್ತಿದೆ, ಜೋಕೆ!,’ ಎಚ್ಚರಿಸಿತು ಆ ಪ್ರಾಣಿ. ‘ಸುಮ್ಮನೆ ನನ್ನ ಮೇಲೆ ಮಿಥ್ಯಾರೋಪ ಮಾಡುವುದು ಬಿಟ್ಟು, ನನ್ನ ಬೆನ್ನಿನ ಮೇಲೆ ಬೇತಾಳದಂತೆ ಕುಳಿತುಕೊಳ್ಳದೆ, ಜಾಗ ಖಾಲಿ ಮಾಡು, ಮೂತಿಮುರಿದ ದೀಪಕ್. ‘ಹಾಗಿದ್ದರೆ ನಿನಗೊಂದು ಸವಾಲು.ನಿನಗೆ ಈ ದಿನ ಪೂರ್ತಿ, ಅಂದರೆ ರೋಹಿಣಿ ನಕ್ಷತ್ರ ಬರುವ ವರೆಗೆ ಕಾಲಾವಧಿ ಕೊಡುವೆ.ನೀನು ಹೇಳುವ ಒಂದೊಂದು ಸುಳ್ಳಿಗೂ, ಮುಳ್ಳಿನ ಬಳ್ಳಿಯಿಂದ ಚುಚ್ಚುವೆ.ಎಂಟಕ್ಕಿಂತ ಹೆಚ್ಚು ಸುಳ್ಳು ಹೇಳಿದರೆ ಆ ಬಳ್ಳಿ ನಿನ್ನ ಸಂಪೂರ್ಣ ಮುತ್ತಿಕೊಳ್ಳುತ್ತದೆ. ಇಲ್ಲವಾದರೆ ನಾನು ಸೋಲೊಪ್ಪಿ, ನಿನಗೆ ಉಪಟಳ ಕೊಡುವುದು ಬಿಡುವೆ. ಒಪ್ಪಿಗೆಯೇ?,’ ಪ್ರಶ್ನಿಸಿತು ವಿಚಿತ್ರ ಪಶು. ‘ಎಂಟು ಸುಳ್ಳು?! ನಾನು ಒಂದು ದಿನದಲ್ಲಿ ಹೇಳುವುದು?! ಅಸಾಧ್ಯ!! ನಿನ್ನ ಸವಾಲು ಒಪ್ಪಿದ್ದೇನೆ,’ಗರ್ವದಿಂದ ಹೇಳಿದ ದೀಪಕ್.

ಅವರಸದಲ್ಲೇ ಸ್ನಾನ-ಸಂಧ್ಯಾದಿಗಳನ್ನು ಮಾಡಿ, ಪೂಜಾಸಾಮಗ್ರಿ ಅಣಿಗೊಳಿಸುತ್ತಿದ್ದ ದೀಪಕ್. ‘ಆ ಬೆಳ್ಳಿ ಪಾತ್ರೆ ತೊಳೆದು ಸ್ವಲ್ಪ ದಿನ ಆಯಿತು. ಸೋಪ್ ಹಾಕಿ ತೊಳಿದಿರಿ ತಾನೇ?,’ ಶಾಂತಿ ಕೇಳಿದಳು. ಹಾಗೆಯೇ ಬರೀ ನೀರಿನಲ್ಲಿ ಗಲವರಿಸಿದ್ದ ದೀಪಕ್ ಹೌದೆಂದು ಹುಸಿನುಡಿದ. ‘ಅಯ್ಯಮ್ಮಾ!’ ಮುಳ್ಳಿನ ಚುಚ್ಚಿಗೆ ಚೀರಿದ ದೀಪಕ್. ‘ಏನಾಯ್ತು?’ ಕೇಳಿದ ಶಾಂತಿಗೆ “ಏನಿಲ್ಲ, ಬೆನ್ನಲ್ಲಿ ಸ್ವಲ್ಪ ನರ ಹೊರಳಿದೆ” ಎಂದು ಹೇಳಿ ಚುಚ್ಚಿನ ಗಣನೆ ಎರಡಾಗಿಸಿದ.

ಕಛೇರಿಗೆ ಹೊರಡಲು ಒಂದು ಘಂಟೆಗೆ ಮೇಲಾಗಿ ತಡವಾದ್ದರಿಂದ ತನ್ನ ಮೇಲಧಿಕಾರಿಗೆ ಫೋನಿನಿಂದ ವರ್ತಮಾನ ಕಳುಹಿಸಿದ: “ನನ್ನ ಮಗಳಿಗೆ ಸ್ವಲ್ಪ ಹುಷಾರಿಲ್ಲದ ಕಾರಣ ವೈದ್ಯರ ಬಳಿ ಕರೆದುಕೊಂಡು ಹೋಗಬೇಕಾಯಿತು. ಎರಡು ಘಂಟೆ ನಿಧಾನವಾಗಿ ಆಫೀಸಿಗೆ ಬರುತ್ತೇನೆ.” ಬೆನ್ನಿನ ಚಳಕು ಈಗ ಮೂರೆಂದು ಕಿವಿಯಲ್ಲಿ ವ್ಯಂಗ್ಯವಾಗಿ ಹೇಳಿತು ಪ್ರಾಣಿ.

‘ಸಂಜೆ ಸ್ವಲ್ಪ ಬೇಗ ಮನೆಗೆ ಬನ್ನಿ. ದೇವರ ಗುಡಿಗೆ ಹೋಗಿ ದರ್ಶನ ಮಾಡಿ, ಹಾಗೆಯೇ ಜಾನಕಿಬಾಯಿಯವರ ಮನೆಯಲ್ಲಿ ಪೂಜೆ ಮತ್ತು ಊಟಕ್ಕೆ ಹೋಗಬೇಕು,’ ವಿವರಿಸುತ್ತಾ ಮಕ್ಕಳನ್ನು ಶಾಲೆಯ ಬಸ್ಸಿಗೆ ಬಿಡಲು ತ್ವರಿತವಾಗಿ ಓಡಿಸಿಕೊಂಡು ನಡೆದಳು ಶಾಂತಿ.

ಈಚೀಚೆಗೆ ಕಛೇರಿಯಲ್ಲಿ ದೀಪಕನ ಕಾರ್ಯಾಚರಣೆ ಸಾಧಾರಣಕ್ಕೂ ಕಡಿಮೆಯೇ ಇತ್ತು. ಕೆಲಸ ಉಳಿಸಿಕೊಳ್ಳುವ ಬಗ್ಗೆ ಸದಾ ಆಲೋಚಿಸುತ್ತಿದ್ದ. ‘ದೀಪಕ್, ನಾನು ಬರೆದಿರುವ ಸಾಫ್ಟ್ವೇರ್ ಪ್ರೋಗ್ರಾಮ್ನಲ್ಲಿ ಕೆಲವು ತೊಡಕಿದೆ. ಸ್ವಲ್ಪ ಸಹಾಯ ಮಾಡುತ್ತೀರಾ?’ ಸಹೋದ್ಯೋಗಿಯೊಬ್ಬ ಕೋರಿಕೊಂಡ. ದೋಷ ಏನೆಂದು ತಿಳಿದಿತಾದರೂ, ಕುಯುಕ್ತಿಯಿಂದ ತನಗೆ ಅದರ ಬಗ್ಗೆ ಗೊತ್ತಿಲ್ಲವೆಂದ ದೀಪಕ್ ನಾಲ್ಕನೇ ಇರಿತದ ನೋವಿಗೆ ಮುಲುಗಿದ.

‘ಸಂಜೆ ನನ್ನ ಮಗನ ಶಾಲೆಯಲ್ಲಿ ಶಿಕ್ಷಕರೊಂದಿಗೆ ಮಾತುಕತೆ ಇದೆ.ಸ್ವಲ್ಪ ಬೇಗ ಹೊರಡಬೇಕು.ನಾಳೆ ಈವತ್ತಿನ ಮಿಕ್ಕ ಕೆಲಸ ಮುಗಿಸುವೆ,’ಎಂದು ದೇವಸ್ಥಾನಕ್ಕೆ ಹೊರಟ ದೀಪಕ್. ನಿರಂಕುಶವಾಗಿ ಹರಿಯುತ್ತಿದ್ದ ಅವನ ಮಿಥ್ಯಾಲಹರಿಯನ್ನು ಕಂಡು ಪಶು ಗಹಗಹಿಸಿ ನಕ್ಕು,‘ಪಂಚಮ’ ಎಂದು ಚುಚ್ಚಿ ಪಿಸುಗುಟ್ಟಿತು. ತನಗಿರುವ ಸುಳ್ಳಿನ ರೋಗದ ಅರಿವಿಲ್ಲದೆ ದೀಪಕ್ ದಿನ ಮುಂದುವರಿಸಿದ. ಸಂಸಾರ ಸಮೇತ ದೇವಸ್ಥಾನಕ್ಕೆ ಸೇರುವಷ್ಟರಲ್ಲಿ ಸಂಜೆಯ ಮಹಾಮಂಗಳಾರತಿ ಆಗಿಯೇ ಹೋಗಿತ್ತು. ‘ಏನು ಲೇಟಾಯ್ತು ಬಂದದ್ದು?’ ಕೇಳಿದ ಗುರುತಿನವರಿಗೆ ದೀಪಕನ ಉತ್ತರ ಆರನೇ ಶೂಲೆಗೆ ಕಾರಣವಾಯಿತು: ‘ದಾರಿಯಲ್ಲಿ ವಾಹನ ಸಂದಣಿ ಹೆಚ್ಚಾಗಿತ್ತು.ಅಲ್ಲದೆ ಒಂದೆರಡು ಅಪಘಾತಗಳು ಬೇರೆ’.

(ಮುಂದಿನ ಪುಟಕ್ಕೆ)


Copyright © KCO – Brindavana

(ಹಿಂದಿನ ಪುಟದಿಂದ)

ದೇವರ ದರ್ಶನ ನಮಸ್ಕಾರಾದಿಗಳನ್ನು ಮುಗಿಸಿ ಜಾನಕೀಬಾಯಿಯವರ ಮನೆಗೆ ಹೊರಟಿತು ಅವರ ಸವಾರಿ.

'ಜಾನಕಿಬಾಯಿಯವರ ಮನೆಗೆ ಹೋಗಲೇಬೇಕೇ? ನನಗೇನೋ ಈವತ್ತು ಸ್ವಲ್ಪವೂ ಆಸಕ್ತಿಯೇ ಇಲ್ಲ. ಮನೆಗೆ ಹೋಗುವ,' ಹಲುಬಿದ ದೀಪಕ್. 'ಇಲ್ಲ. ದೊಡ್ಡವರು ಕರೆದಿದ್ದಾರೆ ಅಂದಮೇಲೆ ಹೋಗಲೇಬೇಕು,' ಆಜ್ಞಾಪಿಸಿದಳು ಶಾಂತಿ.

ಜಾನಕಿಬಾಯಿಯವರ ಮನೆ ಹಬ್ಬಕ್ಕೆ ಸಂಪೂರ್ಣವಾಗಿ ಸಜ್ಜಾಗಿತ್ತು -- ಕೃಷ್ಣ ರಂಗೋಲಿ ಹೆಜ್ಜೆಗಳು,ತುಳಸಿ ಬೃಂದಾವನದ ಅಲಂಕಾರ,ನೈವೇದ್ಯಕ್ಕಾಗಿ ಇಟ್ಟಿದ್ದ ತರಾವರಿಯ ತಿಂಡಿ-ತಿನಿಸುಗಳು:ಚಕ್ಕುಲಿ, ಕೋಡುಬಳೆ, ತೇಂಗೋಳು, ವಿವಿಧ ಉಂಡೆ ಮತ್ತು ಪಾಯಸಗಳು. ಹೋಳಿಗೆ,ಗೊಜ್ಜಿನ ಅವಲಕ್ಕಿ, ಬಿಸಿಬೇಳೆಭಾತ್ ಇತ್ಯಾದಿ. 'ಬಹಳ ಖುಷಿಯಾಯಿತು ನೀವು ಬಂದದ್ದು,' ಮನೆ ಯಜಮಾನರು ದೀಪಕನಿಗೆ ಹೇಳಿದರು. 'ನಮಗೂ ಅಷ್ಟೆ. ನಿಮ್ಮ ಮನೆಗೆ ಬರಲು ಬೆಳಗ್ಗಿನಿಂದ ಎದುರುನೋಡುತ್ತಿದೆ,' ಹೇಳಿದ ದೀಪಕ್ ಏಳನೇ ತಿವಿತಕ್ಕೆ ಗೋಳಿಟ್ಟಾಗ , ಶಾಂತಿ ಎಲ್ಲರಿಗೂ ತಿಳಿಗೊಳಿಸಿದಳು, 'ದೀಪಕ್ ಗೆ ಸ್ವಲ್ಪ ಬೆನ್ನು ಹಿಡಿದುಕೊಂಡಿದೆ.'ಊಟೋಪಚಾರ ಮುಗಿಸಿ ಎಲ್ಲರೂ ಮನೆಗೆ ಹೊರಟರು. 'ಆಂಟೀ, ಅಡಿಗೆ ಬಹಳ ರುಚಿ ಇತ್ತು. ನಮ್ಮ ಅಮ್ಮನ ಅಡುಗೆಯೇ ಜ್ಞಾಪಕಕ್ಕೆ ಬರುತ್ತಿತ್ತು,' ಬಾಯ್ತುಂಬಾ ಹೊಗಳಿದ ದೀಪಕ್. ಎಲ್ಲರೂ ಒಬ್ಬರನೊಬ್ಬರು ಬೀಳ್ಕೊಟ್ಟರು.

ಕಾರಿನಲ್ಲಿ ಕುಳಿತಾಕ್ಷಣ ಅವನ ರಾಗವೇ ಬೇರೆ ಆಯಿತು. 'ಅಡಿಗೆ ನನಗೆ ಏನೂ ಹಿಡಿಸಲಿಲ್ಲ - ಬಿಸಿಬೇಳೆಭಾತ್ ಉಪ್ಪು ಕ್ಷಾರ. ಹೋಳಿಗೆನಾ ಅದು? ಪರೀಕ್ಷೆಯ ರೊಟ್ಟಿನಂತೆ ಇತ್ತು. ಆ ಕಲ್ಲು ಕೋಡುಬಳೆ ತಿಂದು ಈಗಲೂ ನೋಯುತ್ತಿದೆ ನನ್ನ ಹಲ್ಲು.' ಬೆನ್ನು ಮೇಲಿದ್ದ ಪ್ರಾಣಿ ವಿಜಯೋನ್ಮತ್ತನಾಗಿ 'ಅಷ್ಟಮ! ಸೋಲಿನ ಶಿಕ್ಷೆಗೆ ಎಣೆಯಾಗು!' ಎಂದು ಅಟ್ಟಹಾಸದಿಂದ ನಕ್ಕಿತು.

'ಯಾರು ನೀನು? ನನ್ನನ್ನೇಕೆ ಹೀಗೆ ಕಾಡುತ್ತಿದ್ದೀಯ? ನನ್ನ ಬೆನ್ನು ಬಿಟ್ಟು ತೊಲಗು,' ಕುಪಿತನಾಗಿ ಹೇಳಿದ ದೀಪಕ್. 'ಅಯ್ಯೋ ಮೂರ್ಖ! ನಾನು ಯಾವ ವಿಷ ಜಂತುವೂ ಅಲ್ಲ. ನಿನ್ನ ಬೆನ್ನಮೇಲೆಯೂ ಹೇರಿಕೊಂಡಿಲ್ಲ. ನಾನು ನಿನ್ನ ಮನಸ್ಸಾಕ್ಷಿ. ನಿನ್ನಂತರಂಗ. ನೀನು ನಿನಗೇ ಮೋಸಮಾಡಿಕೊಂಡಿರುವೆ. ಅನುಭವಿಸು,' ಎಂದು ಖೇದದಿಂದ ನುಡಿಯಿತು. ಸುಳ್ಳಿನ ಬಳ್ಳಿ ದೀಪಕ್ ನ ಆವರಿಸಲಾರಂಭಿಸಿತು. ಅವನ ಕಣ್ಣಲ್ಲಿ ಕತ್ತಲು ಕಟ್ಟುತ್ತಿತ್ತು. ಹೆದರಿ ನಡುಗುತ್ತಾ ಕಿಟಾರೆಂದು ಕೂಗಿದನು.

ದಿಗ್ಭ್ರಾಂತನಾಗಿ ಸೋಫಾ ಮೇಲೆ ಬೆಚ್ಚಿಬಿದ್ದು ಕುಳಿತನು ದೀಪಕ್. 'ಘಂಟೆ ಹತ್ತೂವರೆ ಆಯಿತು. ಹಾಸಿಗೆ ಮೇಲೆ ಹೋಗಿ ಮಲಗಬಾರದೆ?' ಗದರಿಸಿದಳು ಶಾಂತಿ.

'ಸದ್ಯ. ಅದೊಂದು ಕೆಟ್ಟ ಕನಸಷ್ಟೆ. ಚೆನ್ನಾಗಿಯೇ ಹೆದರಿದ್ದೆ,' ಯೋಚಿಸಿಕೊಂಡು ಬಚ್ಚಲಮನೆ ಕಡೆ ಹೊರಟ ದೀಪಕ್.

"ಸತ್ಯವಂತರ ಸಂಗವಿರಲು ತೀರ್ಥವೇತಕೆ? ನಿತ್ಯಜ್ಞಾನಿಯಾದ ಮೇಲೆ ಚಿಂತೆಯಾತಕೆ?'
-- ಪುರಂದರದಾಸರು




ಕವನ

## ಸ್ಪರ್ಶ


ಸರಿತ ನವಲಿ

ಓ ಗೆಳತಿ,

ಮುದ್ದು ಮುಖದ ಕಂದನಾಗಿ,
ಹಿಡಿಯ ಹೋದ ಚೆಂಡಿಗಾಗಿ,
ಪುಟ್ಟ ಹೆಜ್ಜೆ ಸೊಟ್ಟಗಾಗಿ,
ಮಂಡಿ ತರಚಿ ಗಾಯವಾಗಿ,
ಅಳುತಲಿರಲು ಭಯವಾಗಿ;
ಅಮ್ಮ ತಬ್ಬಿ ಮುತ್ತನೀಡ,
ಅಪ್ಪ ಬಂದು ಎತ್ತಿ ಆಡ,
ಅರಿವ ಸ್ಪರ್ಶ ಮಮತೆ ನೋಡೆ । ೧

ಕನಸು ಮನಸು ತುಂಬಿಹೋಗಿ,
ಮುದವ ಕೊಡುವ ವೀಣೆಯಾಗಿ,
ಮದನ ಬಿಟ್ಟ ಬಾಣ ತಾಗಿ,
ಎದೆಯು ಬಯಸೆ ಪ್ರೀತಿಗಾಗಿ,
ಶುಭ ಗಳಿಗೆ ಯೋಗವಾಗಿ;
ಅವಳು ನಾಚಿ ಕೈಯ ನೀಡೆ,
ಅವನು ಮೆಚ್ಚಿ ಜೊತೆಯಗೂಡೆ,
ಅರಿವ ಸ್ಪರ್ಶ ಪುಳಕ ನೋಡೆ । ೨

ಶಕ್ತಿಗುಂದಿ ಕೃಶವಾಗಿ,
ಬೆನ್ನು ಬಾಗಿ ದೇಹ ತೂಗಿ,
ಕಣ್ಣು ಮಂಜು ಮಸುಕಾಗಿ,
ಕಾಲು ನಡುಗಿ ಗೋಡೆಗೊರಗಿ,
ಅರಸೆ ಊರುಗೋಲಿಗಾಗಿ;
ಮಗನು ಕೈಯ ಆಸರೆ ನೀಡೆ,
ಮಗಳು ತಾಯ ಅಕ್ಕರೆಯ ಕೊಡೆ,
ಅರಿವ ಸ್ಪರ್ಶ ನಂಬಿಕೆ ನೋಡೆ । ೩


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ




## ಭಾಷೆಯ ಬೆಳವಣಿಗೆಯೂ.... ಅವನತಿಯೂ

**ಯಾವ ಒಂದು ಕಾಲಘಟ್ಟದಲ್ಲಿ ಒಂದು ಭಾಷಿಕರ ಗುಂಪು ತಮ್ಮ ಸ್ಥಳೀಯ ಭಾಷೆಯನ್ನು ಬಿಟ್ಟು ಬೇರೆ ಪ್ರಭಾವಿ ಭಾಷೆಯನ್ನು ಬಳಸಲು ಪ್ರಾರಂಭಿಸುತ್ತಾರೋ ಆಗ ಸ್ಥಳೀಯ ಭಾಷೆಯ ಅವನತಿಗೆ ಕಾರಣವಾಗುತ್ತದೆ.**

ಮಾನವಕುಲದ ಭಾಷೆಯ ಹುಟ್ಟಿನ ಮೂಲ ಯಾವಾಗಾಯಿತೆಂದು ನಿಖರವಾಗಿ ಹೇಳಲು ಕಷ್ಟವಾದರೂ, ಅದರ ವಿಕಾಸದ ಪ್ರಕ್ರಿಯೆ ಸಾವಿರಾರು ವರ್ಷಗಳಿಂದ ಸಾಗಿಬಂದಿದೆ. ಭಾಷಾಪಂಡಿತರ ಪ್ರಕಾರ ಕ್ರಿ.ಪೂ. ೮೦೦೦ ವರ್ಷದಲ್ಲಿ ಸರಿಸುಮಾರು ಇಪ್ಪತ್ತು ಸಾವಿರ ಭಾಷೆಗಳು ಬಳಕೆಯಲ್ಲಿದ್ದವೆಂದು ಅಂದಾಜು ಮಾಡಲಾಗಿದೆ. ಅಂದಿನಿಂದ ಈವರೆಗಿನ ಭಾಷಾಚರಿತ್ರೆಯನ್ನು ನೋಡಿದರೆ ಅವುಗಳ ನಾಶ ಹಾಗು ಅವನತಿಗಳೇ ಹೆಚ್ಚು. ಸದ್ಯದ ಕಾಲಮಾನದಲ್ಲಿ ಐದು ಸಾವಿರಕ್ಕೂ ಹೆಚ್ಚು ಭಾಷೆಗಳು ಈ ಜಗತ್ತಿನಲ್ಲಿ ಬಳಕೆಯಲ್ಲಿದೆ. ಮುಂದಿನ ಶತಮಾನದ ವೇಳೆಗೆ ಇದರಲ್ಲಿ ಅರ್ಧದಷ್ಟು ಭಾಷೆಗಳು ನಶಿಸಿಹೋಗಬಹುದೆಂದು ಭಾಷಾಪಂಡಿತರ ಲೆಕ್ಕಾಚಾರ. ಇಂದಿನ ಪರಿಸ್ಥಿತಿಯನ್ನು ಅವಲೋಕಿಸಿದರೆ ಭಾಷೆಯ ಬೆಳವಣಿಗೆಯಲ್ಲಿ ಬಹಳಷ್ಟು ಅಂತರವಿದೆ. ಕೆಲವು ಭಾಷೆಗಳು ಹೆಚ್ಚು ಪ್ರಗತಿಗೊಂಡು ಪ್ರಭಾವಿ ಭಾಷೆಯಾಗಿವೆ, ಹಾಗೆಯೇ ಇನ್ನು ಕೆಲವು ನಶಿಸಿ ಹೋಗುತ್ತಿವೆ ಅಥವಾ ವಿನಾಶದ ಅಂಚಿನಲ್ಲಿ ಕೂತಿವೆ.

ಈ ನಿಟ್ಟಿನಲ್ಲಿ ಭಾಷೆಯ ಬೆಳವಣಿಗೆಯ ಹಿನ್ನೆಲೆಯನ್ನು ನೋಡಿದರೆ ಭಾಷೆಯ ಅಳಿವು ಉಳಿವಿಗೆ ಕಾರಣವಾಗುವ ನಾನಾರೀತಿಯ ಕಾರಣಗಳನ್ನು ತಿಳಿಯುವುದು ಸೂಕ್ತ. ಹಾಗೆಯೇ ಭಾಷೆಗಳು ಹೇಗೆ ಪ್ರಭಾವಶಾಲಿಯಾಗುತ್ತವೆ, ನಶಿಸಿಹೋಗುತ್ತವೆ ಮತ್ತು ಪ್ರಮುಖವಾಗಿ ಭಾಷೆಯು ಹೇಗೆ ಒಂದು ಸಂಸ್ಕೃತಿಯ ವ್ಯಕ್ತಿತ್ವ, ಭದ್ರತೆಯನ್ನು ಸುರಕ್ಷಿತವಾಗಿಡುತ್ತದೆ ಎಂಬುದೂ ಕೂಡ ವಿಚಾರ ಮಾಡತಕ್ಕ ವಿಷಯ. ಸಾಮಾಜಿಕ ಭಾಷಾಶಾಸ್ತ್ರ, ಭಾಷೆಯ ಮೂಲ ಹಾಗು ಅವುಗಳ ಅಧ್ಯಯನ,ಭಾಷೆಯ ಪರಿಸರ, ವಿಜ್ಞಾನ, ಭೌಗೋಳಿಕ ಭಾಷಾಶಾಸ್ತ್ರ ಇಂತಹ ಹಲವಾರು ಅಧ್ಯಯನಗಳಿಂದ ಈಗಿನ ಪರಿಸ್ಥಿತಿಯಲ್ಲಿ ಭಾಷೆಯ ಸ್ಥಾನಮಾನ, ಮುಂದಿನ ದಿನಗಳಲ್ಲಿ ಆ ಭಾಷೆಯ ಪ್ರಭಾವ, ಅಂದರೆ ಹೆಚ್ಚು ಪ್ರಗತಿಯತ್ತ ಸಾಗುತ್ತಿದೆಯೋ ಅಥವಾ ವಿನಾಶದನಂಚಿನಲ್ಲಿಯೋ ಹಾಗೂ ಮುಂದಿನ ದಿನಗಳಲ್ಲಿ ಭಾಷೆಯ ಉಳಿವಿಗೆ ಮಾಡಬಹುದಾದ ಕ್ರಮಗಳನ್ನು ತಿಳಿಸುವ ಪ್ರಯತ್ನ ಮಾಡುತ್ತದೆ.




ಭಾಷೆಗೂ ಸಾವುಂಟೆ? ಭಾಷೆಯು ಸಾಯುವುದೇಕೆ? ಭಾಷೆಯ ಅಳಿವಿಗೆ ಕಾರಣಗಳಾದರೂ ಏನು? ಇಂತಹ ಪ್ರಶ್ನೆಗಳು ಕಾಡುವುದು ಸಹಜ. ಭಾಷೆಯೂ ಸಾಯುತ್ತಿದೆ ಎಂಬುದು ಕೆಲವರಿಗೆ ಅರಿವೇ ಇಲ್ಲ. ಸರಳವಾಗಿ ಹೇಳುವುದಾದರೆ, ಒಂದು ಭಾಷೆಗೆ, ಅದನ್ನು ಮಾತನಾಡಲು ಯಾರೊಬ್ಬರೂ ಇಲ್ಲದಿದ್ದರೆ ಆ ಭಾಷೆಯು ನಶಿಸಿ ಹೋಗಿದೆಯೆಂದರ್ಥ. ಯಾವ ಒಂದು ಕಾಲಘಟ್ಟದಲ್ಲಿ ಒಂದು ಭಾಷಿಕರ ಗುಂಪು ತಮ್ಮ ಸ್ಥಳೀಯ ಭಾಷೆಯನ್ನು ಬಿಟ್ಟು ಬೇರೆ ಪ್ರಭಾವಿ ಭಾಷೆಯನ್ನು ಬಳಸಲು ಪ್ರಾರಂಭಿಸುತ್ತಾರೋ ಆಗ ಸ್ಥಳೀಯ ಭಾಷೆಯ ಅವನತಿಗೆ ಹಾಗೂ ಅದರ ಅಳಿವಿಗೆ ಕಾರಣವಾಗುತ್ತದೆ. ಇದನ್ನು ಭಾಷೆಯ ಬದಲಿಕೆ ಎಂಬುದುಂಟು.ಮೊದಮೊದಲು ಆ ಭಾಷಿಕರ ಗುಂಪು ದ್ವಿಭಾಷಿಕರಾಗಿ, ಅಂದರೆ ಸ್ಥಳೀಯ ಭಾಷೆಯ ಜೊತೆಜೊತೆಗೆ ಪ್ರಭಾವಿ ಭಾಷೆಯನ್ನು ಉಪಯೋಗಿಸುತ್ತಾ ಮುಂದೊಂದು ದಿನ ಪ್ರಭಾವಿ ಭಾಷೆಯ ಉಪಯೋಗವೇ ಹೆಚ್ಚಾಗಿ ಸ್ಥಳೀಯ ಭಾಷೆಯು ಕ್ರಮೇಣ ನಶಿಸಿ ಹೋಗುತ್ತದೆ. ಭಾಷೆಯ ಬದಲಿಕೆಯು ಸ್ವಾಭಾವಿಕವಾಗಿಯೂ ಆಗಬಹುದು ಅಥವಾ ನಗರೀಕರಣ, ಜಾಗತೀಕರಣದ ಪ್ರಭಾವದಿಂದ, ತಮ್ಮ ದೈನಂದಿನ ಚಟುವಟಿಕೆಗಳಲ್ಲಿ, ವ್ಯಾಪಾರ - ವ್ಯವಹಾರಗಳಲ್ಲಿ ಪ್ರಭಾವೀ ಭಾಷೆಯ ಬಳಕೆಯನ್ನು ರೂಢಿಸಿಕೊಂಡು ಸ್ಥಳೀಯ ಭಾಷೆಯ ಬಳಸುವಿಕೆಯು ಕಡಿಮೆಯಾಗುತ್ತದೆ. ಆದರೆ ಯಾರೂ ತಮ್ಮ ಮಾತೃಭಾಷೆಯನ್ನು ಉಪಯೋಗಿಸುವುದನ್ನು ಪೂರ್ತಿ ಬಿಟ್ಟಿರುವುದಿಲ್ಲ. ಈ ಸಂದರ್ಭವು ಸ್ಥಳೀಯ ಭಾಷೆಯು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಹಸ್ತಾಂತರಗೊಳ್ಳುವ ಪ್ರಕ್ರಿಯೆಯನ್ನು ಸಡಿಲಗೊಳಿಸಿ, ಮುಂದೊಂದು ದಿನ ಆ ಭಾಷೆಯ ಗುಂಪಿನ ಜನಾಂಗದಲ್ಲಿ ಕೇವಲ ಹಿರಿಯರಿಗೆ ಮಾತ್ರ ಅಲ್ಪಸ್ವಲ್ಪ ಸ್ಥಳೀಯ ಭಾಷೆ ಗೊತ್ತಿದ್ದು, ಮುಂದಿನ ಪೀಳಿಗೆಯ ಮಕ್ಕಳಿಗೆ ಸ್ಥಳೀಯ ಭಾಷೆ ಹಸ್ತಾಂತರವಾಗಿರದೆ ಭಾಷೆಯು ಅವನತಿಯ ದಾರಿ ಹಿಡಿಯುತ್ತದೆ. ನಗರೀಕರಣ, ಜಾಗತೀಕರಣಗಳ ಪ್ರಭಾವದ ಜೊತೆಗೆ ಭಾಷೆಯ ಅವನತಿಗೆ ಮಹತ್ತರವಾದ ಇನ್ನೊಂದು ಕಾರಣ, ಸ್ಥಳೀಯ ಭಾಷೆಯ ಗುಂಪನ್ನು ಹಿಡಿದಿಟ್ಟಿರುವ ರಾಜ್ಯ ಅಥವಾ ಪ್ರಾಂತ್ಯದ ಆಡಳಿತ ವ್ಯವಸ್ಥೆ. ಈ ಆಡಳಿತ ವ್ಯವಸ್ಥೆಯು ಸ್ಥಳೀಯ ಭಾಷಿಕರ ಗುಂಪುಗಳ ಚೌಕಟ್ಟಿನೊಳಗೆ ಹೊಕ್ಕು ಭಾಷೆಯ ಬಳಕೆಯ ಕಟ್ಟುಪಾಡನ್ನು ಹೇರುವಂಥ ಬಲವಾದ ಸಾಮರ್ಥ್ಯ ಹೊಂದಿದೆ. ಅಂತಹ ಆಡಳಿತ ವ್ಯವಸ್ಥೆಗಳ ಕಟ್ಟುಪಾಡುಗಳಿಂದ ವಿಶ್ವದಲ್ಲಿ ಎಷ್ಟೋ ಭಾಷೆಗಳು ನಶಿಸಿಹೋಗಿವೆ. ರಾಷ್ಟ್ರ ಅಥವಾ ರಾಜ್ಯದ ಆಡಳಿತ ವ್ಯವಸ್ಥೆಯು ಸ್ಥಳೀಯ ಭಾಷೆಯಲ್ಲದ ಪ್ರಭಾವಿ ಭಾಷೆಯನ್ನು ಹೆಚ್ಚು ಬಳಸಲು ಒತ್ತಡ ಹೇರಿದಾಗ, ಸ್ಥಳೀಯ ಭಾಷೆಯ ಬೆಳವಣಿಗೆಗೆ ಬೀಳುವ ಪೆಟ್ಟು ಅಗಾಧವಾಗಿರುತ್ತದೆ. ಪೌರಾತ್ಯ ರಾಷ್ಟ್ರಗಳ ಪಾಳೆಗಾರಿಕೆಗೆಯಲ್ಲಿದ್ದ ದೇಶಗಳಲ್ಲಿ ಪಾಳೆಗಾರಿಕೆಯ ಒತ್ತಡದಿಂದ ಸ್ಥಳೀಯ ಭಾಷೆಯ ಜೊತೆಗೆ ಆಂಗ್ಲ, ಫ್ರೆಂಚ್, ಸ್ಪಾನಿಷ್,ಪೋರ್ಚುಗೀಸ್ ಭಾಷೆಗಳು ಸೇರಿಕೊಂಡು ಈಗಾಗಲೇ ದ್ವಿಭಾಷಿಕರಾಗಿದ್ದಾರೆ. ದೈನಂದಿನದ ಸರ್ಕಾರಿ ಆಡಳಿತ ವ್ಯವಹಾರಗಳಲ್ಲಿ, ಪರಸ್ಪರ ಸಾಮಾಜಿಕ ವ್ಯಾಪಾರ ವ್ಯವಹಾರಗಳಲ್ಲಿ, ಪ್ರಾಥಮಿಕ ಹಾಗು ಪ್ರೌಢಶಿಕ್ಷಣ ವ್ಯವಸ್ಥೆಗಳಲ್ಲಿ ಪ್ರಭಾವಿ ಭಾಷೆಯ ಪ್ರಾಮುಖ್ಯತೆ ಹೆಚ್ಚಾಗುತ್ತಿದೆ. ಪ್ರಾಥಮಿಕ ಹಾಗು ಪ್ರೌಢ ಶಿಕ್ಷಣದಲ್ಲಾಗಿರುವ ಇನ್ನೊಂದು ಬದಲಾವಣೆಯೆಂದರೆ, ಶಾಲಾಮಕ್ಕಳು ಕಡ್ಡಾಯವಾಗಿ ಪ್ರಭಾವಿ ಭಾಷೆಯನ್ನು ಬಳಸಬೇಕೆಂಬ ಪದ್ಧತಿ. ಕೆಲವು ಕಡೆಯಂತೂ ಸ್ಥಳೀಯ ಭಾಷೆಯಲ್ಲಿ ವ್ಯವಹರಿಸಿದರೆ ದಂಡ ಕೂಡ ತೆರಬೇಕಾದೀತು. ಮಕ್ಕಳು ಹೀಗೆ ಶಾಲೆಯ ಒಳಗೆ, ಹೊರಗೆ ಸ್ಥಳೀಯ ಭಾಷೆಯನ್ನು ಬಿಟ್ಟು ಪ್ರಭಾವಿ ಭಾಷೆಯನ್ನು ಹೆಚ್ಚು ಬಳಸಿದಾಗ, ತಮ್ಮ ಸ್ಥಳೀಯ ಭಾಷೆಯು, ಸ್ಥಳೀಯ ಸಂಸ್ಕೃತಿಯು ಅಮಾನ್ಯವೆಂಬ ಭಾವನೆ ಮೂಡಿಸುತ್ತದೆ.ಇಂತಹ ಸಂದರ್ಭಗಳು ಮಕ್ಕಳಿಗೆ ತಾವು ಪ್ರಭಾವಿ ಭಾಷೆಯನ್ನು ಕಲಿಯದಿದ್ದರೆ ತಮ್ಮ ಸಮಾನ ವಯಸ್ಕ ಮಕ್ಕಳ ಗುಂಪಿನಿಂದ ನಿಷೇದಾರ್ಥಕವಾಗಿ ಪ್ರತ್ಯೇಕವಾಗಿಬಿಡುತ್ತೇವೇನೋ ಎಂಬ ಅಪಾಯಕಾರಿಯಾದ ವೇದನೆಯನ್ನು ಅನುಭವಿಸುತ್ತಾರೆ. ಕಾಲಕ್ರಮೇಣ ಸ್ಥಳೀಯ ಭಾಷೆಯು ಸಂತತಿಯಿಂದ ಸಂತತಿಗೆ ಹಸ್ತಾಂತರಗೊಳ್ಳುವ ಪ್ರಕ್ರಿಯೆಯು ಕ್ಷೀಣಿಸುತ್ತದೆ.

(ಮುಂದಿನ ಪುಟಕ್ಕೆ..)


Copyright © KCO – Brindavana

ಸಂಚಿಕೆ
೦೯
ಮಾರ್ಚ್ , ೨೦೧೭






## ಭಾಷೆಯ ಬೆಳವಣಿಗೆಯೂ.... ಅವನತಿಯೂ

(..ಹಿಂದಿನ ಪುಟದಿಂದ)

ಹೀಗೆ ಭಾಷೆಯು ಜನಸಂಖ್ಯಾ, ಆರ್ಥಿಕ ಹಾಗು ಸಾಮಾಜಿಕ ಗುರುತಿಸುವಿಕೆ, ಮಾಧ್ಯಮ, ಶಿಕ್ಷಣ ವ್ಯವಸ್ಥೆಯ ಚೌಕಟ್ಟುಗಳ ಜೊತೆಗಿದ್ದೇ ಕಾಲಕ್ರಮೇಣ ತನ್ನದೇ ಆದ ಸ್ಥಾನಮಾನವನ್ನು ಪಡೆಯುತ್ತದೆ.

ಈ ನಿಟ್ಟಿನಲ್ಲಿ ಭಾಷಾಶಾಸ್ತ್ರಜ್ಞರು ಅಧ್ಯಯನಗಳ ಮೂಲಕ, ಒಂದು ಭಾಷೆಯು ಯಾವ ಸ್ಥಾನಮಾನದಲ್ಲಿದೆಯೆಂದು ತಿಳಿಸುವ ಮಾಪಕಗಳನ್ನು ರೂಪಿಸಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಭಾಷಾಶಾಸ್ತ್ರಜ್ಞರಾದ ಲೆವಿಸ್ ಮತ್ತು ಸೈಮನ್ ರವರು Expanded Graded Intergenerational Disruption Scale (EGIDS) ಎಂಬ ಮಾಪನವನ್ನು ಪ್ರಕಟಿಸಿದ್ದಾರೆ.

ಇದು ಒಂದು ಭಾಷೆಯ ಸ್ಥಾನಮಾನವನ್ನು ಆ ಭಾಷೆಯ ಬೆಳವಣಿಗೆ ಮತ್ತು ಅವನತಿಯ ಕುರುಹುಗಳನ್ನು ಅಂದಾಜು ಮಾಡುತ್ತದೆ. ಈ ಮಾಪನದಲ್ಲಿ ೧೩ ಮಟ್ಟ (level)ಗಳಿದ್ದು, ಮೇಲಿನ ಮಟ್ಟ(೦)ದಲ್ಲಿರುವ ಭಾಷೆ ಬಹಳ ಪ್ರಭಾವಿ ಭಾಷೆಯೆಂದೂ, ಕೆಳಮಟ್ಟ(೧೦)ದಲ್ಲಿರುವ ಭಾಷೆ ನಶಿಸಿಹೋಗಿರುವ ಭಾಷೆಯೆಂದು ವಿಂಗಡಿಸಲಾಗಿದೆ.

**ಮಟ್ಟ(೦): ಅಂತರರಾಷ್ಟ್ರೀಯ - ಬಹುರಾಷ್ಟ್ರಗಳ ಮಧ್ಯೆ ವ್ಯಾಪಾರ, ಶಿಕ್ಷಣ, ಅಂತರರಾಷ್ಟ್ರೀಯ ನೀತಿಸೂತ್ರಗಳ ರೂಪಿಸುವಲ್ಲಿ ಬಳಕೆಯಲ್ಲಿರುವ ಭಾಷೆ.**

**ಮಟ್ಟ(೧): ರಾಷ್ಟ್ರೀಯ - ರಾಷ್ಟ್ರಮಟ್ಟದಲ್ಲಿ ಆಡಳಿತ, ಶಿಕ್ಷಣ, ಸಮೂಹ ಮಾಧ್ಯಮಗಳಲ್ಲಿ ಬಳಕೆಯಲ್ಲಿರುವ ಭಾಷೆ.**

**ಮಟ್ಟ(೨): ರಾಜ್ಯ/ಪ್ರಾಂತೀಯ - ರಾಜ್ಯಮಟ್ಟದಲ್ಲಿ ಆಡಳಿತ, ಶಿಕ್ಷಣ, ಸಮೂಹ ಮಾಧ್ಯಮಗಳಲ್ಲಿ ಬಳಕೆಯಲ್ಲಿರುವ ಭಾಷೆ.**

**ಮಟ್ಟ(೩): ವ್ಯಾಪಕ ಸಂಪರ್ಕ - ಯಾವುದೇ ಅಧಿಕೃತ ಸ್ಥಾನಮಾನವಿಲ್ಲದೆ ವ್ಯಾಪಾರ , ಸಮೂಹ ಮಾಧ್ಯಮಗಳಲ್ಲಿ ಬಳಕೆಯಲ್ಲಿರುವ ಭಾಷೆ.**

**ಮಟ್ಟ(೪): ಶೈಕ್ಷಣಿಕ - ಶೈಕ್ಷಣಿಕ ಕ್ಷೇತ್ರದಲ್ಲಿ ಬಲವಾಗಿ ಬಳಕೆಯಲ್ಲಿರುವ, ಸಾಹಿತ್ಯಕ್ಷೇತ್ರದಲ್ಲಿ ಮಾನ್ಯತೆ ಪಡೆದಿರುವ ಭಾಷೆ.**

**ಮಟ್ಟ(೫): ಅಭಿವೃದ್ಧಿಶೀಲ - ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧಾರಣವಾಗಿ ಬಳಕೆಯಲ್ಲಿರುವ, ಸಾಹಿತ್ಯಕ್ಷೇತ್ರದಲ್ಲಿ ಮಾನ್ಯತೆ ಪಡೆದಿರುವ ಭಾಷೆ.**

**ಮಟ್ಟ(೬a): ಶಕ್ತಿಪೂರ್ಣ – ಭಾಷಾ ಗುಂಪಿನ ಎಲ್ಲಾ ತಲೆಮಾರಿನ ಜನರು ತಮ್ಮತಮ್ಮಲ್ಲೇ ಬಳಸುವ ಭಾಷೆ.**

**ಮಟ್ಟ(೬b): ಅಪಾಯಕರ - ಭಾಷಾಗುಂಪಿನ ಎಲ್ಲಾ ತಲೆಮಾರಿನ ಜನರು ತಮ್ಮತಮ್ಮಲ್ಲೇ ಬಳಸುವ ಜೊತೆಗೆ ಬಹಳ ಬೇಗ ಭಾಷಿಕರನ್ನು ಕಳೆದುಕೊಳ್ಳುತ್ತಿರುವ ಭಾಷೆ.**

**ಮಟ್ಟ(೭): ಬದಲಾವಣೆಕೆ - ಭಾಷಾಗುಂಪಿನ ಹಳೆತಲೆಮಾರು ಹಾಗು ಯುವಜನಾಂಗದ ಗುಂಪಿನಲ್ಲಿ ಮಾತ್ರ ಬಳಕೆಯಲ್ಲಿದ್ದು, ಮಕ್ಕಳ ಸಂತತಿಗೆ ಹಸ್ತಾಂತರವಾಗಿರದ ಭಾಷೆ.**

**ಮಟ್ಟ(೮a): ಮರಣಾವಸ್ಥೆ - ಭಾಷಾಗುಂಪಿನ ಉಳಿದಿರುವ ಹಳೆತಲೆಮಾರಿನ ಜನರಲ್ಲಿ ಮಾತ್ರ ಬಳಕೆಯಲ್ಲಿರುವ ಭಾಷೆ.**

**ಮಟ್ಟ(೮b): ನಿರ್ನಾಮದ ಅಂಚು - ಭಾಷಾಗುಂಪಿನ ಉಳಿದಿರುವ ಹಳೆತಲೆಮಾರಿನ ಜನರಿಗೆ ತಿಳಿದಿರುವ, ಆದರೆ ಬಳಕೆಯಲ್ಲಿರದ ಭಾಷೆ.**

**ಮಟ್ಟ(೯): ಬಳಕೆಯಿಲ್ಲದ, ಪರಂಪರೆಯನ್ನು ಸೂಚಿಸುವ ಭಾಷೆ.**

**ಮಟ್ಟ(೧೦): ಬಳಕೆಯಿಲ್ಲದ, ಪರಂಪರೆಯೂ ನಶಿಸಿಹೋದ ಭಾಷೆ.**

ಜಗತ್ತಿನ ಭಾಷೆಗಳ ಚರಿತ್ರೆಯನ್ನು ಅವಲೋಕಿಸಿದಾಗ ಎಲ್ಲಾ ಭಾಷೆಗಳು ತಮ್ಮ ಜೀವನಚಕ್ರದಲ್ಲಿ ಈ ಮೇಲಿನ ಒಂದಲ್ಲಾ ಒಂದು ಮಟ್ಟವನ್ನು ಹಾದುಹೋಗಿದ್ದು, ಕೆಲವು ಪ್ರಭಾವಿ ಭಾಷೆಗಳಾಗಿವೆ, ಹಾಗೆಯೇ ಸಾವಿರಾರು ಭಾಷೆಗಳು ನಶಿಸಿಹೋಗಿವೆ.

ಈ ನಿಟ್ಟಿನಲ್ಲಿ ಕನ್ನಡ ಭಾಷೆಯ ಸ್ಥಾನಮಾನವನ್ನು ನೋಡಿದಾಗ, ಭಾಷಾಪಂಡಿತರ ಸಂಶೋಧನೆಯ ಅನುಗುಣವಾಗಿ ಕನ್ನಡ ಭಾಷೆಯು ೨ನೇ ಮಟ್ಟ(ರಾಜ್ಯ/ಪ್ರಾಂತೀಯ) ದಲ್ಲಿದ್ದು ಮಾಪನದ ೩ನೇ ಸ್ಥಾನದಲ್ಲಿರುತ್ತದೆ. ಅಂದರೆ ಇಂದಿನ ಕಾಲಘಟ್ಟದಲ್ಲಿ ಕನ್ನಡ ಭಾಷೆಯು ಸುಭದ್ರವಾಗಿದೆಯೆಂದು ತಿಳಿಯಬಹುದು. ಆದರೆ ಆಂಗ್ಲರ ಪಾಳೆಗಾರಿಕೆ ಕಾಲದ, ಸ್ವಾತಂತ್ರ ನಂತರದ, ಹಾಗೂ ೭೦/೮೦ ದಶಕಗಳಲ್ಲಿ ಆಗುತ್ತಿದ್ದ ಕನ್ನಡ ಭಾಷೆಯ ಬಳಕೆಗೂ, ನಗರೀಕರಣ, ಜಾಗತೀಕರಣಗಳ ಪರಿಣಾಮದಿಂದ ೯೦ರ ದಶಕದಿಂದಾಚೆಗೆ ಕನ್ನಡ ಭಾಷೆಯ ಬಳಕೆ ಕನ್ನಡ ಭಾಷಿಕರ ಗುಂಪಿನಲ್ಲೇ ಕಡಿಮೆಯಾಗುತ್ತಾ ಬಂದಿದೆ. ಯುವಕರು ಹಾಗು ಮಕ್ಕಳ ಗುಂಪಿನಲ್ಲಂತೂ ಆಂಗ್ಲಭಾಷೆಯ ಬಳಕೆಯೇ ಹೆಚ್ಚು. ಕನ್ನಡ ಭಾಷಿಕರಲ್ಲೇ ಕನ್ನಡ ದಿನಪತ್ರಿಕೆ, ಕನ್ನಡ ಸಾಹಿತ್ಯ, ಕನ್ನಡ ಚಲನಚಿತ್ರ, ಕನ್ನಡ ಟಿವಿ ಮಾಧ್ಯಮಗಳ ಬಳಕೆ ಕಡಿಮೆಯಾಗುತ್ತಾ ಬಂದಿದೆ. ಶಿಕ್ಷಣ ಮಾಧ್ಯಮದಲ್ಲಂತೂ ಸರ್ಕಾರಿ ಶಾಲೆಗಳನ್ನು ಹೊರೆತು ಇನ್ನಾವ ಶಾಲೆಗಳಲ್ಲೂ ಕನ್ನಡ ಮಾಧ್ಯಮದ ಪಠ್ಯ ಸಿಗುವುದಿಲ್ಲ. ಹಾಗೇನಾದರೂ ಸಿಕ್ಕರೂ ಪೋಷಕರು ತಮ್ಮ ಮಕ್ಕಳನ್ನು ಅಲ್ಲಿ ಸೇರಿಸುವ ಧೈರ್ಯ ತೋರುವುದಿಲ್ಲ, ಇದಕ್ಕೆ ಅನೇಕಾನೇಕ ಕಾರಣಗಳಿರಬಹುದು. ಹಾಗೆಯೇ ತಮ್ಮ ತಮ್ಮಲ್ಲೇ ಹೆಚ್ಚು ಹೆಚ್ಚು ಕನ್ನಡದಲ್ಲಿ ವ್ಯವಹರಿಸುತ್ತಿದ್ದ ಕನ್ನಡ ಭಾಷಿಕರು, ಈಗ ಕನ್ನಡದ ಜೊತೆಗೆ ಹೆಚ್ಚು ಹೆಚ್ಚು ಆಂಗ್ಲಭಾಷೆಯನ್ನು ಬಳಸುತ್ತಿರುವ ಕಾಲವಿದು. ಇದರರ್ಥ ಅವರಿಗೆ ಕನ್ನಡ ಸರಿಯಾಗಿ ಬರುವುದಿಲ್ಲವಂತಲ್ಲ, ಮಾತನಾಡಲು ಅವಮಾನವೋ ಅಥವಾ ಸರಾಗವಾಗಿ ದೈನಂದಿನ ಕೆಲಸಗಳಲ್ಲಿ ಬಳಸುವ ಆಂಗ್ಲಭಾಷೆ ಸುಲಭವೆಂದೊ ತಿಳಿಯದು.ಹೀಗೆಯೇ ಮುಂದುವರೆದರೆ ಮುಂದಿನ ಕಾಲಘಟ್ಟಗಳಲ್ಲಿ ಕನ್ನಡದ ಸ್ಥಾನಮಾನ ಇದೇ ಮಟ್ಟದಲ್ಲಿರುವುದು ಕಷ್ಟಸಾಧ್ಯ. ಜೊತೆಗೆ ಆಡಳಿತಕ್ಕೆ ಬರುವ ಸರ್ಕಾರಗಳ ಕನ್ನಡಭಾಷೆಯ ಅಭಿವೃದ್ಧಿಗೆ ಸಂಬಂಧಪಟ್ಟ ಕಾರ್ಯನೀತಿಗಳು ಸಕಾರಾತ್ಮವಾಗಿಯೂ, ಸಕಾಲದಲ್ಲಿ ಅನುಷ್ಠಾನಗೊಳ್ಳದಿರುವುದೂ ಕೂಡ ಕನ್ನಡಭಾಷೆಯ ಬೆಳವಣಿಗೆಯ ಕುಂಠಿತಕ್ಕೆ ಕಾರಣವೂ ಆಗಿದೆ.

ಹಾಗಾಗಿ ಮುಂದಿನ ದಿನಗಳಲ್ಲಿ ಕನ್ನಡ ಭಾಷೆಯು ಸುಭದ್ರ ಸ್ಥಾನದಲ್ಲಿರಬೇಕೆಂದರೆ, ಕನ್ನಡ ಭಾಷಿಕರು ತಮ್ಮ ತಮ್ಮಲ್ಲಿ ವ್ಯವಹರಿಸುವಾಗ ಹೆಚ್ಚಾಗಿ ಕನ್ನಡವನ್ನೇ ಬಳಸುವುದು. ಕನ್ನಡ ಸಾಹಿತ್ಯ, ಕನ್ನಡ ದಿನಪತ್ರಿಕೆ, ಕನ್ನಡ ಚಲನಚಿತ್ರ, ಕನ್ನಡ ಟಿವಿ ಮಾಧ್ಯಮಗಳನ್ನು ಉತ್ತೇಜಿಸುವುದು ನಮ್ಮಗಳ ಕೈಯಲ್ಲಿರುವ ಒಂದು ಸುಲಭ ಮಾರ್ಗ. ಜೊತೆಗೆ ಕನ್ನಡ ಭಾಷೆಯ ಬಳಕೆಗೆ ನಮ್ಮ ನಾಡಲ್ಲೇ ವಿರೋಧಿಸುವವರನ್ನು ಪ್ರತಿಭಟಿಸುವ ಭಾಷಾಭಿಮಾನವನ್ನು ರೂಢಿಸಿಕೊಳ್ಳಬೇಕು. ಕನ್ನಡ ಭಾಷೆಯ ಅವನತಿಗೆ ನಾವೇ ನಾಂದಿ ಹಾಡುವ ಬದಲು ಭಾಷೆಯ ಹೆಚ್ಚಿನ ಅಭಿವೃದ್ಧಿಗೆ ನಾಂದಿಯಾಗೋಣ.


Copyright © KCO – Brindavana

ಸಂಚಿಕೆ
೦೯
ಮಾರ್ಚ್ , ೨೦೧೭

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ





ಭಾಸ್ಕರ ತೈಲಗೇರಿ

# ಕಾಮನ ಹಬ್ಬ

**ಈ** ಹೆಸರಿನ ಹಬ್ಬ ಈಗಿನ ಪೀಳಿಗೆಯವರಿಗೆ ತಿಳಿದಿದೆಯೋ ಇಲ್ಲವೋ ಗೊತ್ತಿಲ್ಲ.ಆದರೆ ಹೋಳಿ ಹಬ್ಬದ ಹೆಸರು ಕೇಳದವರು ತುಂಬಾ ವಿರಳ.

ಈ ಹಬ್ಬವನ್ನು ಫಾಲ್ಗುಣ ಮಾಸದ ಹುಣ್ಣಿಮೆಯೆಂದು ಆಚರಿಸಲಾಗುತ್ತೆ.ದೀಪಾವಳಿ ಬೆಳಕಿನ ಹಬ್ಬವಾದರೆ, ಹೋಳಿ ಬಣ್ಣಗಳ ಹಬ್ಬ.ದಕ್ಷಿಣ ಭಾರತದಲ್ಲಿ ಈ ಹಬ್ಬದ ಆಚರಣೆ ಉತ್ತರ ಭಾರತಕ್ಕೆ ಹೋಲಿಸಿದರೆ ಕಮ್ಮಿನೇ ಎನ್ನಬಹುದು.ಚಲನಚಿತ್ರಗಳು ಈ ಹಬ್ಬದ ಬಗ್ಗೆ ಅರಿವು ಮೂಡಿಸಿದೆ ಎಂದರೆ ತಪ್ಪಾಗಲಾರದು.ಹಲವಾರು ಸಿನಿಮಾ ಹಾಡಗಳು ಹೋಳಿ ಹಬ್ಬದ ಮೇಲೆ ಚಿತ್ರಿತವಾಗಿದೆ.

ನನ್ನ ಬಾಲ್ಯದ ಕಾಮನ ಹಬ್ಬದ ಅನುಭವವನ್ನು ನಿಮ್ಮ ಜೊತೆ ಹಂಚಿಕೊಳ್ಳುವ ಮೊದಲು ಈ ಹಬ್ಬದ ಹಿಂದಿನ ಪುರಾಣ ಕಥೆಯನ್ನು ಮೊದಲು ಹೇಳಬೇಕು.

ತಾರಕಾಸುರನೆಂಬ ಅಸುರ ದೇವತೆಗಳನ್ನು ಪೀಡಿಸುತ್ತಿರುತ್ತಾನೆ.ಅವನ ಶಕ್ತಿಗೆ ದೇವತೆಗಳು ಹೆದರಿ ಬ್ರಹ್ಮದೇವನ ಬಳಿ ಹೋಗುತ್ತಾರೆ.ಬ್ರಹ್ಮದೇವನಿಗೆ ಈ ಕೆಲಸ ಶಿವನ ಮಗನಿಂದ ಮಾತ್ರ ಸಾಧ್ಯವೆಂದು ತಿಳಿಯುತ್ತೆ.ಆ ಸಮಯದಲ್ಲಿ ಮಹಾಶಿವನು ತನ್ನ ಮೊದಲ ಹೆಂಡತಿ 'ಸತಿ'ಯನ್ನು ಕಳೆದುಕೊಂಡ ದುಃಖದಲ್ಲಿ ಧ್ಯಾನದಲ್ಲಿ ಮುಳುಗಿರುತ್ತಾನೆ. ಬ್ರಹ್ಮದೇವನು ಶಿವನ ಧ್ಯಾನವನ್ನು ಭಗ್ನ ಮಾಡಲು ಕಾಮದೇವನನ್ನು ಕಳಿಸುತ್ತಾನೆ. ಕಾಮದೇವನು ತನ್ನ ಹೂಬಾಣಗಳಿಂದ ಶಿವನ ಧ್ಯಾನವನ್ನು ಅಡ್ಡಿಪಡಿಸುತ್ತಾನೆ. ಮಹಾಶಿವ ಕುಪಿತಗೊಂಡು ತನ್ನ ಮೂರನೆಯ ಕಣ್ಣನ್ನು ಬಿಟ್ಟು ಕಾಮದೇವನನ್ನು ಸುಟ್ಟು ಭಸ್ಮಮಾಡುತ್ತಾನೆ. ನಂತರ ಕಾಮದೇವನ ಹೆಂಡತಿ 'ರತಿ'ಯ ಮೇಲೆ ಮರುಕಗೊಂಡು ಪ್ರಾಣಭಿಕ್ಷೆ ನೀಡಿ ಜೀವಂತವಾಗಿಸುತ್ತಾನೆ. ಇದು ಕರ್ನಾಟಕ ಮತ್ತು ದಕ್ಷಿಣ ರಾಜ್ಯಗಳಲ್ಲಿ ಚಾಲ್ತಿಯಲ್ಲಿರುವ ಪುರಾಣ ಕಥೆ. ಕಾಮದೇವನ ಸುಡುವುದು 'ಕಾಮದಹನ' ಎಂಬ ಆಚರಣೆಯಾಗಿ ಬಂದಿದೆ.

ಉತ್ತರ ಭಾರತದಲ್ಲಿ ಹೋಳಿ ಹಬ್ಬದ ಪುರಾಣ ಕಥೆ ಬೇರೆಯೇ ಇದೆ. ಹಿರಣ್ಯಕಶಿಪು ಪ್ರಹ್ಲಾದನ ನಾರಾಯಣ ಸ್ಮರಣೆಯನ್ನು ತಾಳಲಾರದೆ ಅವನನ್ನು ಹಲವು ರೀತಿಗಳಲ್ಲಿ ಕೊಲ್ಲಲು ಪ್ರಯತ್ನಿಸುತ್ತಾನೆ. ಹಿರಣ್ಯಕಶಿಪುಗೆ ಹೋಲಿಕಾ ಹೆಸರಿನ ತಂಗಿಯಿರುತ್ತಾಳೆ. ಅವಳಿಗೆ ಅಗ್ನಿಯಿಂದ (ಬೆಂಕಿಯಿಂದ) ರಕ್ಷಿಸಿಕೊಳ್ಳಲು ಒಂದು ವರವಿರುತ್ತೆ. ಆ ವರವೇ ಒಂದು ಶಾಲು. ಆ ಶಾಲನ್ನು ಹೊದ್ದುಕೊಂಡರೆ ಅವಳನ್ನು ಅಗ್ನಿ ಏನು ಮಾಡಲಾಗುವುದಿಲ್ಲ. ಹಿರಣ್ಯಕಶಿಪು ತನ್ನ ತಂಗಿಗೆ ಪ್ರಹ್ಲಾದನನ್ನು ಚಿತೆಯ ಮೇಲೆ ಕರೆದುಕೊಂಡು ಕುಳಿತುಕೊಳ್ಳಲು ಹೇಳುತ್ತಾನೆ. ಹೋಲಿಕಾ ತನ್ನ ಶಾಲನ್ನು ಹೊದ್ದು ಪ್ರಹ್ಲಾದದನ ಜೊತೆ ಕುಳಿಕೊಳ್ಳುತಾಳೆ. ಚಿತೆಗೆ ಅಗ್ನಿಸ್ಪರ್ಶ ಮಾಡಲಾಗುತ್ತೆ. ಪ್ರಹ್ಲಾದ ನಾರಾಯಣ ಸ್ಮರಣೆ ಮಾಡಲು, ವಾಯು ವಿಷ್ನುವಿನ ಆಜ್ಞೆಯಂತೆ ಜೋರು ಬಿರುಗಾಳಿಯನ್ನು ಉಂಟುಮಾಡುತ್ತಾನೆ. ಆಗ ಹೋಲಿಕಾ ಹೊದ್ದಿದ್ದ ಶಾಲು ಪ್ರಹ್ಲಾದನ ಮೇಲೆ ಬಿದ್ದು ಬೆಂಕಿಯಿಂದ ಪಾರಾಗುತ್ತಾನೆ. ಹೋಲಿಕಾ ಬೆಂಕಿಯಲ್ಲಿ ಸುಟ್ಟು ಬೂದಿಯಾಗುತ್ತಾಳೆ. ಹೋಳಿಯ ಹಲವಾರು ಪುರಾಣಕಥೆಗಳಲ್ಲಿ ಇದು ಒಂದು.

ಉತ್ತರ ಭಾರತದಲ್ಲಿ ಹಲವಾರು ಕಡೆ ಈಗಲೂ ಹೋಲಿಕಾ ದಹನ ಆಚರಿಸುತ್ತಾರೆ. ಈ ಹಬ್ಬವನ್ನು ದುಷ್ಟ ಶಕ್ತಿಗಳ ಮೇಲೆ ಒಳ್ಳೆ ಶಕ್ತಿಗಳ ವಿಜಯ, ಚಳಿಗಾಲದ ಕೊನೆ, ವಸಂತ ಮಾಸದ ಆಗಮನವೆಂದೂ ಆಚರಿಸುತ್ತಾರೆ. ಈ ಸಂಧರ್ಭದಲ್ಲಿ ಸಿಹಿ ಹಂಚುತ್ತಾರೆ ಮತ್ತು ಬಣ್ಣಗಳ ಜೊತೆ ಆಟವಾಡಿ ಸಂಭ್ರಮಿಸುತ್ತಾರೆ.

ಈಗ ನನ್ನ ಬಾಲ್ಯದ ಕಾಮನ ಹಬ್ಬದ ಅನುಭವ ...

ಸುಮಾರು ನಲವತ್ತು ವರ್ಷಗಳ ಹಿಂದೆ, ನಾವು ಹದಿನೈದರಿಂದ ಇಪ್ಪತ್ತು ಹುಡುಗರು (ವಯಸ್ಸು - ಎಂಟು ರಿಂದ ಹದಿನೈದು), ಒಂದು ಗುಂಪು ಕಟ್ಟಿ ಸಾರ್ವಜನಿಕ ಹಬ್ಬಗಳಾದ ಗಣೇಶ ಹಬ್ಬ, ಕನ್ನಡ ರಾಜ್ಯೋತ್ಸವ ಹಾಗು ಕಾಮನ ಹಬ್ಬವನ್ನು ಆಚರಿಸುತಿದ್ದೆವು.

ಕಾಮನ ಹಬ್ಬ ಬೇರೆ ಹಬ್ಬಗಳಷ್ಟು ಜನಪ್ರಿಯವಲ್ಲದಿದ್ದರು ನಮಗೆ ಆ ಹಬ್ಬದ ಆಚರಣೆಯಲ್ಲಿ ಏನೋ ಆಕರ್ಷಣೆ ಇತ್ತು. ಹಬ್ಬದ ೨-೩ ದಿನ ಮುಂಚೆನಿಂದಲೇ ನಮ್ಮ ಮನೆಗಳಲ್ಲಿರುವ ಹಳೆಯ ಮರದ ವಸ್ತುಗಳನ್ನು ಕೂಡಿಡುವುದು, ಸೌದೆ, ತೆಂಗಿನಮರವಿದ್ದರ ಮನೆಯಿಂದ ಒಣಗಿರುವ ತೆಂಗಿನ ಗರಿಗಳನ್ನು ತರುವುದು, ಹಳೆ ಮೊರ, ಪೊರಕೆ, ತೆಂಗಿನ ಚಿಪ್ಪು, ಇತ್ಯಾದಿ - ಇವುಗಳನ್ನೆಲ್ಲ ಒಂದೆಡೆ ಶೇಖರಿಸಿಡುವುದು. ನಮ್ಮ ಮನೆಯಲ್ಲಿ ನೀರು ಕಾಯಿಸುವ ಹಂಡೆ ಇತ್ತು.ಹಂಡೆಯ ಒಲೆಯಲ್ಲಿ ಇದ್ದ ಸೌದೆ, ಎಳನೀರಿನ ಚಿಪ್ಪು ಎಲ್ಲಾ ಕದ್ದು, ನಮ್ಮ ಅಜ್ಜಿ ಹತ್ತಿರ ಬಯ್ಗುಳ, ಒದೆಗಳನ್ನು ತಿಂದ ನೆನಪು ಇನ್ನು ಮಾಸಿಲ್ಲ.

ಕಾಮನ ಹಬ್ಬದ ದಿನ ಶಾಲೆಯಿಂದ ಬೇಗ ಬಂದು ಹಳೆಯ ಚಡ್ಡಿ ಮತ್ತು ಶರ್ಟ್ ಅನ್ನು ಧರಿಸಿ ಬಣ್ಣದ ಓಕುಳಿಯಾಟವಾಡಲು ಸಿದ್ಧವಾಗುತ್ತಿದ್ದೆವು. ಬೇರೆ ಹಬ್ಬಗಳಿಗೆ ಹೊಸ ಬಟ್ಟೆ ಧರಿಸಿದರೆ, ಈ ಹಬ್ಬಕೆ ಮಾತ್ರ ಹಳೆ ಬಟ್ಟೆ ಧರಿಸುತ್ತಿದ್ದೆವು. ಗಾಜಿನ ಬಾಟಲಿಗೆ ನೀರು ತುಂಬಿಸಿ, ಬಣ್ಣದ ಮಾತ್ರೆಯನ್ನು ಹಾಕಿ ಗುಲಾಲ್ ತಯಾರಿಸಿ ಸ್ನೇಹಿತರ ಮೇಲೆ ಎರಚುತ್ತಿದ್ದೆವು. ಬಣ್ಣದ ಪುಡಿಗಳನ್ನು ಸ್ನೇಹಿತರ ಕೈಗೆ, ಮುಖಕ್ಕೆ ಮೆತ್ತುತ್ತಿದ್ದೆವು. ಆಗ ತಾನೇ ಮಾರುಕಟ್ಟೆಗೆ ಬಂಡ ಸಿಲ್ವರ್ ಪೈಂಟ್, ಗೋಲ್ಡ್ ಪೈಂಟ್ ಬಳಿಸಿದ ನೆನಪು. ಈ ಬಣ್ಣಗಳ ಎರಚಾಟವಾದ ಮೇಲೆ ಒಬ್ಬರನೊಬ್ಬರು ಗುರಿತಿಸಲಾರದಷ್ಟು ಬಣ್ಣಮಾಯವಾಗಿರುತ್ತಿದ್ದೆವು. ಇದನೆಲ್ಲ ಸೆರೆಹಿಡಿಯಲು ನಮ್ಮ ಬಳಿ ಕ್ಯಾಮೆರಾನೂ ಇರಲಿಲ್ಲ, ಸ್ಮಾರ್ಟ್ ಫೋನ್ ಕೂಡ ಇರಲಿಲ್ಲ. ಸ್ಮಾರ್ಟ್ ಫೋನ್ ಇದ್ದಿದ್ದರೆ, ಕಾಮನ ಹಬ್ಬ ಆಚರಿಸಲು ಸಮಯ ಇರ್ತಿರಲಿಲ್ಲ ಅಂತ ಅನ್ನಿಸುತ್ತೆ.

ನಮ್ಮ ಬಣ್ಣಮಯ ಅವತಾರದಲ್ಲಿ ಅಕ್ಕಪಕ್ಕದ ಬೀದಿಗಳ ಎಲ್ಲಾ ಮನೆಗಳಿಗೆ ಹೋಗಿ ಹಳೆಯ ಮರದ ವಸ್ತುಗಳ (ಸುಡುವಂತವು) ಕೇಳುತ್ತಿದ್ದೆವು. ಕೇಳುವ ರೀತಿ - ಹಾಡು ಕುಣಿತದೊಂದಿಗೆ

ಕಾಮಣ್ಣ ಮಕ್ಕಳೇ
ಕಳ್ಳ ಸೂಳೆ ಮಕ್ಕಳೇ
ಏನೇನು ಕದ್ದಿರಿ
ಸೌದೆ ಭರಣಿ ಕದ್ದಿವಿ
ಏತಕ್ಕೆ ಕದ್ದಿರಿ
ಕಾಮಣ್ಣ ಸುಡಕ್ಕೆ

ಎಲ್ಲರ ಮನೆಗಳಿಂದ ಸಿಕ್ಕ ವಸ್ತುಗಳನ್ನು ಒಂದು ಕಡೆ ಗುಡ್ಡೆ ಹಾಕುತ್ತಿದ್ದೆವು. ಕೆಲವು ಹಳೆಯ ವಸ್ತುಗಳ ಬದಲು ಹಣವನ್ನು ನೀಡುತಿದ್ದರು. ಆ ಹಣದಲ್ಲಿ ಕಡಲೆಪುರಿ, ಚೌಚೌ ಖರೀದಿ ಮಾಡಿ ಕೊನೆಯಲ್ಲಿ ಪ್ರಸಾದವೆಂದು ಹಂಚುತ್ತಿದ್ದೆವು

(ಮುಂದಿನ ಪುಟಕ್ಕೆ)


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

(ಹಿಂದಿನ ಪುಟದಿಂದ)

ಯಾವದಾದರೂ ಮನೆ ಕಟ್ಟುತ್ತಿರುವ ಜಾಗದಿಂದ ಒಂದು ಬೊಂಬನ್ನು  ಕದ್ದು ತಂದು, ಒಂದು ಜಾಗ ಗೊತ್ತು ಮಾಡಿ ಅದರಲ್ಲಿ ಬೊಂಬನ್ನು ನೆಟ್ಟು ಅದರ ಸುತ್ತ ಒಣಗಿದ ತೆಂಗಿನ ಗರಿಗಳನ್ನು ಜೋಡಿಸುತ್ತಿದ್ದೆವು. ಅದರೊಳಗೆ ಸೌದೆ, ಮರ, ಪೊರಕೆ ಮತ್ತು ನಾವು ಸಂಗ್ರಹಿಸಿದ ಅಷ್ಟು ವಸ್ತುಗಳನ್ನು ಹಾಕಿ, ನಂತರ ಪೂಜೆ ಮಾಡಿ ಅಗ್ನಿ ಸ್ಪರ್ಶ ಮಾಡಿದಾಗ, ಧುತ್ತನೆ ಉರಿಯುವ ಬೆಂಕಿಯನ್ನು ನೋಡಲು ಏನೋ ಹರ್ಷ. ಬೆಂಕಿಯ ಸುತ್ತ ಖುಷಿಯಿಂದ ಓಡುತಿದ್ದೆವು. ಬೆಂಕಿಯ ಜ್ವಾಲೆ ಕಮ್ಮಿಯಾದಾಗ ಅದರ ಮೇಲೆ ಹಾರುವ ಸಾಹಸ ಕೂಡ ಮಾಡಿದ ನೆನಪು.



ಕೊನೆಯಲ್ಲಿ ಅಲ್ಲಿ ಸೇರಿದ ಜನರೆಲ್ಲರಿಗೂ ಪ್ರಸಾದವನ್ನು ಹಂಚಿ ಆದಿನದ ವಿಶೇಷಗಳನ್ನು ಮೆಲಕು ಹಾಕಿ ಮನೆಗೆ ಹೋಗುತ್ತಿದ್ದೆವು.

ಮಾರನೆಯ ದಿನ ಪ್ರಸಾದಕ್ಕೆ ಖರ್ಚು ಮಾಡಿ ಉಳಿದ ಹಣವನ್ನು ಎಣಿಸಿ ಕ್ರಿಕೆಟ್ ಬ್ಯಾಟ್, ಬಾಲ್ ಮತ್ತು ವಿಕೆಟ್ ಗಳನ್ನೂ ಖರೀದಿಸಿದ್ದುಂಟು.

ಹೈಸ್ಕೂಲ್ ಕೊನೆಗೆ ಬರುವಷ್ಟರಲ್ಲಿ ಈ ಆಟತುಂಟಾಟಗಳಿಗೆಲ್ಲಾ ತೆರೆ ಬಿತ್ತು. ಕಾಲೇಜಿನಲ್ಲಿ ಹೋಳಿ ಆಡಿದ ಅಷ್ಟು ನೆನಪಿಲ್ಲ. ಕೆಲ ಕಾಲೇಜುಗಳಿಗೆ ಹೋಳಿ ದಿವಸ ಗಲಾಟೆ ತಪ್ಪಿಸಲು ರಜೆಯನ್ನು ಘೋಷಿಸುತ್ತಿದ್ದರು.

ನಿಮ್ಮ ಕಾಮನ ಹಬ್ಬ/ ಹೋಳಿ ಹಬ್ಬದ ಅನುಭವವನ್ನು  ನಮ್ಮೊಂದಿಗೆ ಹಂಚಿಕೊಳ್ಳಿ.

ನಿಮ್ಮೆಲ್ಲರಿಗೂ ಹೋಳಿ ಹಬ್ಬದ ಶುಭಕಾಮನೆಗಳು!!!






**ಪ್ರಶಾಂತ್ ಎಂ.**

ಪ್ರತಿದಿನ ರಾತ್ರಿ ಮಲಗುವ ಮುಂಚೆ ನಾನು ಮತ್ತು ನನ್ನ ಚಿಕ್ಕ ಮಗಳು (೫ ವರ್ಷ) ಒಂದು ಆಟ ಆಡುವ ಅಭ್ಯಾಸ.ಈ ಆಟದ ನಿಯಮ ಏನಂದರೆ, ನನ್ನ ಮಗಳು ಇಂಗ್ಲಿಷ್ ಪದ ಹೇಳಬೇಕು ಹಾಗು ನಾನು ಅದಕ್ಕೆ ಸರಿಯಾದ ಕನ್ನಡ ಪದ ಹೇಳಬೇಕು.ಇದು ಒಂದು ತರಹ ನಮ್ಮ ಮನೆಯ ಕನ್ನಡ ಕಲಿ ಕಾರ್ಯಕ್ರಮ.

ಒಂದು ದಿವಸ,ಆಟ ಆಡುವಾಗ ಡೇ=ದಿನ, ವೀಕ್=ವಾರ ಪದಗಳನ್ನು ಮುಗಿಸಿದೆವು. ಮಾರನೆ ದಿನ ವಾರದ ದಿನಗಳ ಸರದಿ ನನ್ನ ಮಗಳು ಸಂಡೇ, ಮಂಡೇ ಗೆ ಕನ್ನಡಲ್ಲಿ ಏನು ಹೇಳ್ತಾರೆ ಎಂದು ಕೇಳಿದಳು. ನಾನು ಸ್ವಲ್ಪ ಬಿಡಿಸಿ ಹೇಳಿದೆ. ಸಂಡೆ ಅಂದರೆ ಸನ್ ಮತ್ತು ಡೇ .. ಕನ್ನಡದಲ್ಲಿ ಭಾನು ವಾರ. ತಕ್ಷಣ ಅವಳು "ಪಪ್ಪಾ ನೀನು ರಾಂಗ್ ಎಂದಳು". ನನಗೆ ಅರ್ಥ ಅಗಲಿಲ್ಲ. ಅವಳ ಪ್ರಕಾರ ಡೇ ಅಂದರೆ ದಿನ (ಇದು ನಿಜ!) ಸೊ ಇಟ್ ಶುಡ ಬಿ "ಭಾನು ದಿನ" ಎಂದು ತನ್ನ ವಿವರಣೆ ಕೊಟ್ಟಳು. ಒಂದು ಕ್ಷಣ ನನಗೂ ಕನ್ಫ್ಯೂಸ್ ಆಯಿತು. ನಾನು ಕಲಿತ ಪ್ರಕಾರ ಭಾನುವಾರ, ಸೋಮವಾರ, ಮಂಗಳವಾರ, ಆದರೆ ವಾರ ಅಂದರೆ ವೀಕ್. ಇದಲ್ಲಿ ಯಾವುದು ಸರಿ? ಹೇಗೂ ಅವಳಿಗೆ ಸಮಾಧಾನ ಮಾಡಿ ಮಲಗಿಸಿದೆ. ಆದರೆ ನನ್ನ ತಲೆಯೊಳಗೆ ಹುಳ ಕೊರೆದಿತ್ತು - ಯಾವ ಭಾಷೆ (ವಿ) ಚಿತ್ರ? ಕನ್ನಡ ಅಥವಾ ಇಂಗ್ಲಿಷ್?

ಮಾರನೆ ದಿನ ಬೆಳಿಗ್ಗೆ ಈ ಕೆಳಗಿನ ವಾಟ್ಸಪ್ ಸಂದೇಶ ಓದಿದ ಮೇಲೆ ಹುಳ ಇನ್ನೂ ಆಳವಾಗಿ ಕೊರೆದಿತ್ತು, ಕನ್ಫ್ಯೂಸ್ ಆಗಿರೋರು ಬಹಳ ಮಂದಿ ಇದ್ದಾರೆ ಅನ್ನಿಸಿತು!!!!

"ಸೆಲ್ ಗೆ ಕನ್ನಡದಲ್ಲಿ  ಬಯಾಲಜಿ ಟೀಚರ್- ಜೀವಕೋಶ ಅಂತಾರ, ಫಿಸಿಕ್ಸ್ ಮೇಷ್ಟ್ರು- ಬ್ಯಾಟರಿ  ಅಂತಾರ, ಇತಿಹಾಸದ ಮಾಸ್ತರ್- ಜೈಲು ಅಂತಾರ, ಎಲೆಕ್ಟ್ರಾನಿಕ್ಸ್ ಸರ್- ಮೊಬೈಲ ಅಂತಾರ"

ಒಬ್ಬರದೊಬ್ಬರಿಗೆ ತಾಳ ಇಲ್ಲ, ತಂತಿ ಇಲ್ಲ, ಇವರಲ್ಲಿ ಯಾರು ಸರಿ? ನಿಮಗೇನಾದ್ರೂ ಗೊತ್ತಿದ್ರ  ಸ್ವಲ್ಪ ನಮಗೂ ತಿಳಿಸ್ರಿ!!

ಅಥವಾ ನಿಮಗೂ ಈ ತರಹ ಏನಾದರೂ (ವಿ)ಚಿತ್ರ ಪದ ಗೊತ್ತಿದ್ದರೆ ನಮ್ಮ ಜೊತೆ ಹಂಚಿಕೊಳ್ಳಿ!!

## ಬಾಲ ಪ್ರತಿಭೆ





**ಬೃಂ**ದಾವನ ಈಸ್ಟ್ ವಿಂಡ್ಸರ್ ಕನ್ನಡ ಶಾಲೆಯ ವಿದ್ಯಾರ್ಥಿನಿ ಸುದೀಪ್ತ ಮೂರ್ತಿ ಈ ವರ್ಷದ ಜನವರಿಯಲ್ಲಿ "ಎನ್ವಿಶನ್" ಸಂಸ್ಥೆ ನಡೆಸಿದ ರಾಷ್ಟ್ರೀಯ ಯುವ ನಾಯಕತ್ವ ಶಿಬಿರದಲ್ಲಿ ಪಾಲ್ಗೊಂಡಿದ್ದಳು. ದೇಶ ಹಾಗು ವಿದೇಶಗಳಿಂದ ಆಯ್ದ ಕೇವಲ ಕೆಲವು ವಿದ್ಯಾರ್ಥಿ/ವಿದ್ಯಾರ್ಥಿನಿಯರು  ಭಾಗವಹಿಸಿದ್ದ ನಾಲ್ಕು ದಿನಗಳ ಈ ಶಿಬಿರದಲ್ಲಿ, ಜನರಲ್ ಕಾಲಿನ್ ಪಾವೆಲ್, ಸ್ಪೈಕ್ ಲೀ, ಮಲೈಲ ಯೂಸಫ್ ಝೈ, ಅಬಿ ವಾಂಬಾಕ್, ಮಾರ್ಟಿನ್ ಒಮಾಲೆ ಹಾಗೂ ಕಾರ್ಲಿ ಫಿಯೋರಿನಾ  ಮುಂತಾದ ಗಣ್ಯ ನಾಯಕರು ನಾಯಕತ್ವದ ಗುಣಗಳ ಬಗ್ಗೆ ಉಪಯುಕ್ತ ಮಾಹಿತಿ ನೀಡಿದರು. ಈ ಮೊದಲು 2016 ಬೇಸಿಗೆಯಲ್ಲಿ ಎನ್ವಿಶನ್ ಸಂಸ್ಥೆ ನಡೆಸಿದ ರಾಷ್ಟ್ರೀಯ ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್, ಗಣಿತ(STEM) ಶಿಬಿರಕ್ಕೆ ಈಸ್ಟ್ ವಿಂಡ್ಸರ್ ಶಾಲೆಗಳಿಂದ ಏಕೈಕ ವಿದ್ಯಾರ್ಥಿನಿಯಾಗಿ ಸುದೀಪ್ತ ಆಯ್ಕೆ ಆಗಿ, ಈ ಬೇಸಿಗೆ ಶಿಬಿರದಲ್ಲಿ ತೋರಿದ ಪ್ರತಿಭೆ ಮತ್ತು ನಾಯಕತ್ವದ ಗುಣಗಳ  ಆಧಾರದ ಮೇಲೆ ಜನವರಿಯಲ್ಲಿ ನಡೆದ ನಾಯಕತ್ವ ಶಿಬಿರಕ್ಕೆ ನೇರವಾಗಿ ಆಯ್ಕೆ ಆಗಿದ್ದಳು. ಈ ಕಾರ್ಯಾಗಾರದ ಭಾಗವಾಗಿ ಅಮೇರಿಕಾದ ನೂತನ ಅಧ್ಯಕ್ಷರ ಪದಗ್ರಹಣ ಸಮಾರಂಭದಲ್ಲಿಯೂ ಸುದೀಪ್ತ ಭಾಗವಹಿಸಿದ್ದಳು.


Copyright © KCO – Brindavana

ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಹಿನ್ನೋಟ

### ಕನ್ನಡ ಶಾಲೆ ಮಕ್ಕಳು , ಈಸ್ಟ್ ವಿಂಡ್ಸರ್ ಮತ್ತು ಸೌತ್ ಬ್ರುನ್ಸ್ವಿಕ್









## ಹೀಗೊಂದು ಪ್ರಶ್ನೆ....

ಈ ಕೆಳಗಿನ ಛಾಯಾಚಿತ್ರಗಳಿಗೆ ಒಂದು ಸಾಲಿನ 'ತಲೆಬರಹ' ಬರೆದು ಕಳಿಸಿ. ನಮ್ಮ ಮಿಂಚಂಚೆ ವಿಳಾಸ : vani@brindavana.org


ಆಯ್ದ 'ತಲೆಬರಹ'ಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

"................" ?



ಛಾಯಾಚಿತ್ರ ಕೃಪೆ : ಪ್ರಶಾಂತ್

"................" ?



ಛಾಯಾಚಿತ್ರ ಕೃಪೆ : ಶ್ರೀಪರ್ಣಿಕ ಕಂಚಿ



Copyright © KCO – Brindavana

## ಓದುಗರ ಓಲೆಗಳು

ಬೃಂದಾವನ ವಾಣಿಯ ಸಂಕ್ರಾಂತಿ ವಿಶೇಷಾಂಕ ಚೆನ್ನಾಗಿ ಮೂಡಿಬಂದಿದೆ . ನೂತನ ತಂಡಕ್ಕೆ ಅಭಿನಂದನೆಗಳು. – ಸರಿತ ನವಲಿ

ಬೃಂದಾವನ ವಾಣಿ ಚೆನ್ನಾಗಿ ಮೂಡಿ ಬಂದಿದೆ .ಸಂಪಾದಕವರ್ಗದ ತಂಡಕ್ಕೆ ಅಭಿನಂದನೆಗಳು ಮತ್ತು ದೀರ್ಘ ದಂಡ ನಮಸ್ಕಾರಗಳು ಧನ್ಯವಾದಗಳೊಂದಿಗೆ,

—ಸಂತೋಷ ಕಡ್ಲೆಬೇಳೆ

ಬೃಂದಾವನ ವಾಣಿಯ ಸಂಕ್ರಾಂತಿ ವಿಶೇಷಾಂಕ ಅಮೋಘವಾಗಿ ಮೂಡಿ ಬಂದಿದೆ, ಬೃಂದಾವನ ವಾಣಿಯ ಸಂಪಾದಕರು - ಸತ್ಯ ಪ್ರಸಾದ್, ರಾಘವೇಂದ್ರ ಕುಂಡಲಗುರ್ಕಿ ಮತ್ತು ಇಡೀ ಹೊಸ ಸಂಪಾದಕ ವರ್ಗಕ್ಕೆ ನನ್ನ ಅಭಿನಂದನೆಗಳು! —ಮಲ್ಲಿಕ್ ಪ್ರಸಾದ್

ನೂತನ ಸಂಪಾದಕ ಮಂಡಳಿಗೆ ಶುಭ ಹಾರೈಕೆಗಳು. ನಾನು ಬೃಂದಾವನ ವಾಣಿಯ ಓದುಗ ಹಾಗು ಅಭಿಮಾನಿ. ಕಳೆದ ನವಂಬರ್ ಸಂಚಿಕೆಯಿಂದ ಇಲ್ಲಿಯ ತನಕ ಎಲ್ಲಾ ಸಂಚಿಕೆಯನ್ನು ಓದಿದ್ದೇನೆ. ಸಂಚಿಕೆಗಳು ಚೆನ್ನಾಗಿ ಮೂಡಿ ಬರುತ್ತಿವೆ..ಸಂಕ್ರಾಂತಿ ವಿಶೇಷಾಂಕ ಸಂಚಿಕೆಯ ಬಗ್ಗೆ ನನ್ನ ಕೆಲವು ಅನಿಸಿಕೆಗಳು: ಕಥೆಗಳು ಹಾಗು ಅಂಕಣ ಬರಹಗಳು ಚೆನ್ನಾಗಿ ಮೂಡಿ ಬರುತ್ತಿವೆ.ಮುಂದೆಯೂ ಹೀಗೆ ಬರಲಿ ಎಂದು ಆಶಿಸುತ್ತೇನೆ.ಮುಖಪುಟ ವಿನ್ಯಾಸ ಹಳೆಯ ಸಂಚಿಕೆಗಳಿಗೆ ಹೋಲಿಸಿದರೆ ಸ್ವಲ್ಪ ನೀರಸವೇನೋ ಅನಿಸಿತು.ಸಂಪಾದಕೀಯದ ಗುಣಮಟ್ಟ ಸದೃಢವಾಗಿಲ್ಲವೆನಿಸಿತು. ಸಂಚಿಕೆಯಲ್ಲೇನಿದೆ ಎಂಬ ವಿವರಣೆಯಂತಿದೆ. ಸಂಪಾದಕೀಯದ ಲೇಖನ, ಇಡೀ ಸಂಚಿಕೆಯ ಜೀವಾಳ.ಪ್ರತಿ ಸಂಚಿಕೆಯಲ್ಲಿ ೬-೮ ಪುಟದಷ್ಟು ಬರುವ ವ್ಯಕ್ತಿ ಪರಿಚಯ ಓದುಗರಿಗೆ ಜಾಸ್ತಿ ಆಯ್ತೇನೋ ಅಂತ ನನ್ನ ಅನಿಸಿಕೆ. ಮುಂದಿನ ಸಂಚಿಕೆಗಳಿಗೆ ಶುಭ ಹಾರೈಕೆಗಳು. —ಯೋಗೇಶ್ ಮೂರ್ತಿ

Sankranti Visheshanka Tumba chennagi Mooodi bandide..hearty congratulations to the editorial team of Brindavana Vani👍👏

—ವಿ. ಪ್ರಸನ್ನ ಕುಮಾರ

Excellent...loved the cover page..very colorful 😊👍...enjoyed reading the new edition...congratulations to the entire team...keep up the good work 🙏

— ಸಂಧ್ಯಾ ಮಲ್ಲಿಕ್

## ಸದಸ್ಯತ್ವ ಮಾಹಿತಿ

ಬೃಂದಾವನ ಕನ್ನಡ ಕೂಟ ,ಕನ್ನಡ ಮತ್ತು ಕನ್ನಡಿಗರ ಪರವಾದ ಕಾರ್ಯಕ್ರಮಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ನ್ಯೂ ಜೆರ್ಸಿ ಮತ್ತು ಸುತ್ತ ಮುತ್ತ ಇರುವ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಎಂಬ ವಿನಂತಿ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಬೃಂದಾವನದ "ಸದಸ್ಯತ್ವ". ವಾರ್ಷಿಕ , ದ್ವೈ ವಾರ್ಷಿಕ , ಅಜೀವ ಅಥವಾ ವಿದ್ಯಾರ್ಥಿ ಸದಸ್ಯತ್ವಗಳಲ್ಲಿ ,ನಿಮಗೆ ಸೂಕ್ತವಾದ ಸದಸ್ಯತ್ವವನ್ನು ಆಯ್ಕೆ ಮಾಡಿ. ಈಗ ಸದಸ್ಯತ್ವ ಪರಿಪೂರ್ಣ ಇಲೆಕ್ಟ್ರಾನಿಕ್ ರೂಪದಲ್ಲಿ ಆನ್ಲೈನ್ ದೊರೆಯುತ್ತದೆ. www.brindavana.orgಗೆ ಹೋಗಿ ನಿಮ್ಮ ವಿವರಗಳನ್ನು ನೀಡಿ ಸೂಕ್ತವಾದ ಸದಸ್ಯತ್ವ ಪಡೆಯಿರಿ. ಕ್ಷಣಾರ್ಧದಲ್ಲಿ ನಿಮಗೆ e-mail ಮುಖೇನ ಸದಸ್ಯತ್ವದ ವಿವರ ಬಂದು ಸೇರುವುದು. ನಿಮ್ಮ ಈ ಬೃಂದಾವನ, Karnataka Cultural Organization – Brindavana (KCOB) NJ, USA. 501(3)(c)ಪಡೆದ ಚಾರಿಟಿ ಸಂಸ್ಥೆ. ಇದಕ್ಕೆ ನಿಮ್ಮ ಕಾಣಿಕೆ ಪರಿಪೂರ್ಣ ಟ್ಯಾಕ್ಸ್ ರಹಿತ.

ಏನಾದರು ಪ್ರಶ್ನೆ ಇದ್ದಲ್ಲಿ president@brindavana.orgಗೆ ಇ-ಮೇಲ್ ಮಾಡಿ.

**ಸೂಚನೆ:**

ನ್ಯೂ ಜೆರ್ಸಿಯ ಮತ್ತು ಸಮಸ್ತ ಕನ್ನಡದ ಸ್ನೇಹಿತರೆಲ್ಲರೂ "ಬೃಂದಾವನ ವಾಣಿ"ಯಲ್ಲಿ ಭಾಗಿಗಳಾಗಬೇಕೆಂಬುದು ನಮ್ಮ ಆಶಯ. ವಾಣಿಯಲ್ಲಿ ಮೂಡಿಬರುವ ಅಂಕಣಗಳು-ಸಾಹಿತ್ಯವಾಣಿ,ವನಿತಾವಾಣಿ, ಪುಟಾಣಿ-ಪ್ರಪಂಚ,ಬಾಲಪ್ರತಿಭೆ, ಕ್ರೀಡೆ, ಅಮೆರಿಕಾ ನಾ ಕಂಡಂತೆ, ಯುವ ವಾಣಿ, ಸುತ್ತ-ಮುತ್ತ, ಹಾಗೇ ಸುಮ್ಮನೆ.. ಈ ಅಂಕಣಗಳಿಗೆ ಲೇಖನ,ಕವನ,ಕಥೆ, ಚುಟುಕುಗಳನ್ನು ಬರೆದು ಕಳಿಸಿ. ಅಡುಗೆ, ಮನೆ ಮದ್ದು, ಅಲಂಕಾರ, ಸಂಪ್ರದಾಯಗಳ ಮಾಹಿತಿ ನೀಡುವ ಕಿರುಲೇಖನಗಳನ್ನು, ಮಕ್ಕಳು ಬರೆದ ವರ್ಣಚಿತ್ರಗಳನ್ನು ಕಳುಹಿಸಬಹುದು. ಮಕ್ಕಳಿಗಾಗಿ ನೀತಿ ಕಥೆಗಳನ್ನು ಬರೆದು ಕಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ಅಮೆರಿಕಾ ನಾ ಕಂಡಂತೆ** - ಇದು ಜೀವನಾನುಭವಗಳ ಅಂಕಣ. ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ. ನೀವು ಕ್ಲಿಕ್ಕಿಸಿದ ಸುಂದರ ಛಾಯಾಚಿತ್ರಗಳನ್ನು ಕಳುಹಿಸಬಹುದು.
ನಿಮ್ಮ ಅನಿಸಿಕೆ,ಸಲಹೆ,ಸೂಚನೆಗಳಿಗೆ ತಪ್ಪದೇ ತಿಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ವಿಶೇಷ ಸೂಚನೆ** : ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು.ಲೇಖನಗಳು ಸಂಕ್ಷಿಪ್ತವಾಗಿರಲಿ. ಕಳುಹಿಸಿದ ಮಾಹಿತಿ,ಲೇಖನ ಅಸಂಪೂರ್ಣ ಅಥವಾ ಅನುಚಿತವೆನಿಸಿದರೆ ಅದನ್ನು ಪ್ರಕಟಿಸಲಾಗುವುದಿಲ್ಲ.ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ. 'ಬೃಂದಾವನ ವಾಣಿ'ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು, ಮಾಹಿತಿಗಳಿಗೆಲ್ಲ ಲೇಖಕರೇ ಜವಾಬ್ದಾರರು.ಅಂಕಣಗಳಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ ,'ಬೃಂದಾವನ ವಾಣಿ' ಮತ್ತು ಬೃಂದಾವನ' ಕನ್ನಡ ಕೂಟ ಜವಾಬ್ದಾರರಲ್ಲ.


Copyright © KCO – Brindavana